ಶುಕ್ರವಾರ, ಫೆಬ್ರುವರಿ 25, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಯುದ್ಧ ಬೇಡ

ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿರುವುದನ್ನು ಖಂಡಿಸಿ ಲೆಬನಾನ್‌ನ ಬೈರುತ್‌ನಲ್ಲಿರುವ ರಷ್ಯಾ ರಾಯಭಾರ ಕಚೇರಿ ಮುಂಭಾಗದಲ್ಲಿ ಗುರುವಾರ ಪ್ರತಿಭಟನೆ ನಡೆಸಿದ ಯುವತಿ



OnePlus Boulevard
Now open

Brigade Road, Bengaluru

Our largest community playground is here
and you've got a role to play!

ಶುಕ್ರವಾರ, ಫೆಬ್ರುವರಿ 25, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 56 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಸತತ ಪರಿಶ್ರಮ, ಅನುಭವದ ಬಳಿಕ ಬೆಳ್ಳಿತೆರೆಗೆ ಭರ್ಜರಿಯಾಗಿ ಪ್ರವೇಶಿಸಿದ್ದಾರೆ ರಾಣಾ

ಆಳ-ಅಗಲ
ರಷ್ಯಾ -ಉಕ್ರೇನ್ ಯುದ್ಧ ಭಾರತಕ್ಕೆ ತುಟ್ಟಿ

‘ಹಿಜಾಬ್-ಕೇಸರಿ ಶಾಲು: ನಿಲುವು ಪ್ರಕಟಿಸಬೇಡಿ’ 4

ದೇಶಿ ಷೇರುಪೇಟೆ ಭಾರಿ ಪತನ 10

ಸೆನ್ಸೆಕ್ಸ್	ನಿಫ್ಟಿ	₹/$
54,530	16,248	75.60

ಉಕ್ರೇನ್ ಮೇಲೆ ರಷ್ಯಾ ಆಕ್ರಮಣ

ಎಚ್ಚರಿಕೆ, ನಿರ್ಬಂಧಗಳನ್ನು ನಿರ್ಲಕ್ಷಿಸಿ ದಾಳಿ ನಡೆಸಿದ ಪುಟಿನ್ • 6 ಯುದ್ಧ ವಿಮಾನ ಹೊಡೆದುರುಳಿಸಿದ್ದೇವೆ—ಉಕ್ರೇನ್ • 40 ಸೈನಿಕರು, 10 ನಾಗರಿಕರ ಸಾವು

ಮಾಸ್ಕೊ (ಎಪಿ): ಉಕ್ರೇನ್–ರಷ್ಯಾ ಬಿಕ್ಕಟ್ಟು ಉಲ್ಬಣಗೊಂಡಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಕ್ತವಾದ ಖಂಡನೆ ಮತ್ತು ನಿರ್ಬಂಧಗಳನ್ನು ನಿರ್ಲಕ್ಷಿಸಿ ರಷ್ಯಾದ ಸೇನೆಯು ಉಕ್ರೇನ್ ಮೇಲೆ ಗುರುವಾರ ಬೆಳಿಗ್ಗೆಯೇ ದಾಳಿ ನಡೆಸಿದೆ. ಈ ವಿಚಾರದಲ್ಲಿ ಯಾರೇ ಆದರೂ ಮಧ್ಯಪ್ರವೇಶಿಸಿದರೆ ಹಿಂದೆಂದೂ ಕಂಡಿರದಂತಹ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಎಚ್ಚರಿಕೆ ನೀಡಿದ್ದಾರೆ.

ಪ್ರಮುಖ ಪಟ್ಟಣಗಳಾದ ಕೀವ್, ಖಾರ್ಕಿವ್ ಮತ್ತು ಒಡೆಸಾಗಳಲ್ಲಿ ಮುಂಜಾನೆಯಿಂದಲೇ ಭಾರಿ ಸ್ಫೋಟದ ಸದ್ದು ಕೇಳಿಸಿದೆ. ಉಕ್ರೇನ್ ಮೇಲೆ ಆಕ್ರಮಣವಾದರೆ ಭಾರಿ ಸಾವು ನೋವು ಸಂಭವಿಸಬಹುದು ಮತ್ತು ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಉಕ್ರೇನ್ ಸರ್ಕಾರ ಪತನವಾಗಬಹುದು ಎಂದು ಜಾಗತಿಕ ನಾಯಕರು ಮೊದಲಿನಿಂದಲೇ ಹೇಳಿಕೊಂಡು ಬಂದಿದ್ದಾರೆ. ಆದರೆ, ಪುಟಿನ್ ಅವರು ಇದಾವುದನ್ನೂ ಲೆಕ್ಕಿಸಿಲ್ಲ. ಹತ್ತಕ್ಕೂ ಹೆಚ್ಚು ನಗರಗಳ ಮೇಲೆ ಕ್ಷಿಪಣಿ ದಾಳಿ ನಡೆಸಲಾಗಿದೆ. ಕೀವ್‌ನ ವಿಮಾನ ನಿಲ್ದಾಣದ ಮೇಲೆಯೂ ಕ್ಷಿಪಣಿ ದಾಳಿ ನಡೆದಿದೆ.

ಉಕ್ರೇನ್‌ನಲ್ಲಿ ಸೇನೆಯು ಇಲ್ಲದಂತೆ ಮಾಡುವುದಕ್ಕಾಗಿ ವಿಶೇಷ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಪುಟಿನ್ ಹೇಳಿದ್ದಾರೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ದೇಶದಲ್ಲಿ ತುರ್ತುಪರಿಸ್ಥಿತಿ ಘೋಷಿಸಿದ್ದಾರೆ. ಉಕ್ರೇನ್‌ನ ಸೇನಾ ಮೂಲಸೌಕರ್ಯಗಳನ್ನೇ ಗುರಿಯಾಗಿಸಿಕೊಂಡು ರಷ್ಯಾ ದಾಳಿ ನಡೆಸುತ್ತಿದೆ ಎಂದು ಅವರು ಹೇಳಿದ್ದಾರೆ.

ರಷ್ಯಾಕ್ಕೆ ಪಾಠ ಕಲಿಸುವುದಕ್ಕಾಗಿ ಹೊಸ ನಿರ್ಬಂಧಗಳನ್ನು ಹೇರಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಶಪಥ ಮಾಡಿದ್ದಾರೆ. ಆದರೆ, ಪುಟಿನ್ ಅವರು ಆಕ್ರಮಣವನ್ನು ಸಮರ್ಥಿಸಿಕೊಂಡಿದ್ದಾರೆ.

6ನೇ ಪುಟ ನೋಡಿ
ವಿಶೇಷ ಪುಟ 6

ಉಕ್ರೇನ್‌ನ ಪೂರ್ವ ಭಾಗದ ಚುಗೈವ್ ಪಟ್ಟಣದ ಕಟ್ಟಡವೊಂದರ ಮೇಲೆ ರಷ್ಯಾ ಪಡೆಗಳು ಗುರುವಾರ ಬಾಂಬ್ ದಾಳಿ ನಡೆಸಿವೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಯತ್ನಿಸಿದರು –ಎಎಫ್‌ಪಿ ಚಿತ್ರ

- ಚಿನ್ನದ ಬೆಲೆ ₹ 2,190ರಷ್ಟು ಏರಿಕೆ ↑
- ₹ 69 ಸಾವಿರ ತಲುಪಿದ ಬೆಳ್ಳಿ ಧಾರಣೆ ↑
- 100 ಡಾಲರ್ ಗಡಿ ದಾಟಿದ ಕಚ್ಚಾ ತೈಲ ದರ ↑
- ಷೇರುಪೇಟೆ: ₹ 13.44 ಲಕ್ಷ ಕೋಟಿ ಸಂಪತ್ತು ನಷ್ಟ, 99 ಪೈಸೆ ಕುಸಿದ ರೂಪಾಯಿ

ಸೇನಾ ಕಾರ್ಯಾಚರಣೆ ಇಲ್ಲ: ನ್ಯಾಟೊ

ಬ್ರಸೆಲ್ಸ್ (ಎಪಿ): ಉಕ್ರೇನ್ ಮತ್ತು ರಷ್ಯಾ ಸಮೀಪದಲ್ಲಿರುವ ಮಿತ್ರ ದೇಶಗಳಲ್ಲಿನ ಭೂ, ಸಾಗರ ಮತ್ತು ವಾಯು ಪ್ರದೇಶ ಭದ್ರತೆಯನ್ನು ಹೆಚ್ಚಿಸಲು ನ್ಯಾಟೊ ನಿರ್ಧರಿಸಿದೆ. ‘ಯಾವುದೇ ರೀತಿಯ ಪರಿಸ್ಥಿತಿಗೆ ತಕ್ಕ ಪ್ರತಿಕ್ರಿಯೆ ನೀಡಲು ಸಜ್ಜಾಗಿದ್ದೇವೆ’ ಎಂದು ನ್ಯಾಟೊ ರಾಯಭಾರಿಗಳು ಗುರುವಾರ ಹೇಳಿದ್ದಾರೆ.

ನ್ಯಾಟೊದ 30 ಸದಸ್ಯ ರಾಷ್ಟ್ರಗಳ ಪೈಕಿ ಹಲವು ದೇಶಗಳು ಉಕ್ರೇನ್‌ಗೆ ಶಸ್ತ್ರಾಸ್ತ್ರ ಮತ್ತು ಇತರ ಸೇನಾ ಸಲಕರಣೆಗಳ ಪೂರೈಕೆ ಮಾಡುತ್ತಿವೆ. ಆದರೆ, ನ್ಯಾಟೊ ಮೂಲಕ ಯಾವುದೇ ಪೂರೈಕೆ ಇಲ್ಲ. ಉಕ್ರೇನ್‌ಗೆ ಬೆಂಬಲವಾಗಿ ಸೇನಾ ಕಾರ್ಯಾಚರಣೆ ನಡೆಸುವ ಉದ್ದೇಶವೂ ಇಲ್ಲ ಎಂದು ನ್ಯಾಟೊ ಹೇಳಿದೆ.

ಉಕ್ರೇನ್ ಮತ್ತು ರಷ್ಯಾ ಸಮೀಪದಲ್ಲಿರುವ ನ್ಯಾಟೊ ಸದಸ್ಯ ರಾಷ್ಟ್ರಗಳೆಂದರೆ, ಈಸ್ಟೋನಿಯಾ, ಲಾತ್ವಿಯಾ, ಲಿಥುವೇನಿಯಾ ಮತ್ತು ಪೋಲೆಂಡ್.

74 ಸೇನಾ ನೆಲೆ ನಾಶ

- ಉಕ್ರೇನ್‌ನ 74 ಸೇನಾ ನೆಲೆಗಳನ್ನು ನಾಶ ಮಾಡಲಾಗಿದೆ. ಅದರಲ್ಲಿ 11 ವಾಯುನೆಲೆಗಳೂ ಸೇರಿವೆ ಎಂದು ರಷ್ಯಾ ಹೇಳಿಕೊಂಡಿದೆ. ಮೂರು ಕಮಾಂಡ್ ಠಾಣೆಗಳು, 18 ರೇಡಾರ್ ಕೇಂದ್ರಗಳು, ವಿಮಾನ ಹೊಡೆದುರುಳಿಸುವ ಎರಡು ವ್ಯವಸ್ಥೆಗಳು ನಾಶಗೊಂಡಿವೆ. ಸೇನೆಯ ಒಂದು ಹೆಲಿಕಾಪ್ಟರ್ ಮತ್ತು ನಾಲ್ಕು ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ
- ರಷ್ಯಾದ ಕನಿಷ್ಠ ಆರು ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ. ಉಕ್ರೇನ್‌ನ 40 ಸೈನಿಕರು ಮತ್ತು 10 ನಾಗರಿಕರು ಮೃತಪಟ್ಟಿದ್ದಾರೆ. ಹತ್ತಾರು ಮಂದಿ ಗಾಯಗೊಂಡಿದ್ದಾರೆ ಎಂದು ಝೆಲೆನ್‌ಸ್ಕಿ ಹೇಳಿದ್ದಾರೆ. ರಷ್ಯಾ ಜತೆಗಿನ ರಾಜತಾಂತ್ರಿಕ ಸಂಬಂಧವನ್ನು ಉಕ್ರೇನ್ ಕಡಿದುಕೊಂಡಿದೆ
- ಉಕ್ರೇನ್‌ನ ಯುದ್ಧ ವಿಮಾನವೊಂದು ಪತನವಾಗಿದೆ. ಅದರಲ್ಲಿ 14 ಮಂದಿ ಇದ್ದರು. ಅದರಲ್ಲಿ ಇದ್ದವರ ಪೈಕಿ ಎಷ್ಟು ಮಂದಿ ಮೃತಪಟ್ಟಿದ್ದಾರೆ ಎಂಬುದು ತಿಳಿದುಬಂದಿಲ್ಲ
- ಕೀವ್‌ನಿಂದ ಭಾರಿ ಸಂಖ್ಯೆಯಲ್ಲಿ ಜನರು ಹೊರಗೆ ಹೋಗಿದ್ದಾರೆ. ರಷ್ಯಾ ಪಡೆಗಳು ಆಕ್ರಮಣ ಮಾಡುವ ಸಾಧ್ಯತೆ ಕಡಿಮೆ ಇರುವ ಉಕ್ರೇನ್‌ನ ಪಶ್ಚಿಮ ಭಾಗದತ್ತ ಅವರು ಸಾಗುತ್ತಿದ್ದಾರೆ
- ಉಕ್ರೇನ್‌ನಲ್ಲಿರುವ ಭಾರತೀಯರನ್ನು ಕತಾರ್ ಮೂಲಕ ಕರೆತರಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಉಕ್ರೇನ್‌ನ ವಾಯು ಪ್ರದೇಶದಲ್ಲಿ ಯಾವುದೇ ವಿಮಾನ ಹಾರಾಟ ಈಗ ಇಲ್ಲ. ಹಾಗಿರುವಾಗ, ಜನರನ್ನು ಉಕ್ರೇನ್‌ನಿಂದ ಕತಾರ್‌ಗೆ ಕರೆ ತರುವುದು ಹೇಗೆ ಎಂಬುದನ್ನು ಕೇಂದ್ರ ತಿಳಿಸಿಲ್ಲ. ಉಕ್ರೇನ್‌ನಲ್ಲಿ 20 ಸಾವಿರ ಭಾರತೀಯರು ಇದ್ದಾರೆ. ಅವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು
- ಚೆರ್ನೋಬಿಲ್ ಅಣುಸ್ಥಾವರ ವಶಪಡಿಸಿಕೊಂಡ ರಷ್ಯಾ ಪಡೆಗಳು

ಸಂದರ್ಶನ ಅಂಕ ಕಡಿತ: ಕೆಪಿಎಸ್‌ಸಿಗೆ ಗೊತ್ತೇ ಇಲ್ಲ!

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳ ಆಯ್ಕೆಗೆ ನಡೆಯುವ ವ್ಯಕ್ತಿತ್ವ ಪರೀಕ್ಷೆಯ (ಸಂದರ್ಶನ) ಅಂಕವನ್ನು 50ರಿಂದ 25ಕ್ಕೆ ಕಡಿಮೆ ಮಾಡುವಂತೆ ಸಚಿವ ಸಂಪುಟಕ್ಕೆ ಸಲ್ಲಿಕೆಯಾಗಿದ್ದ ಪ್ರಸ್ತಾವನೆ ಬಗ್ಗೆ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಮಾಹಿತಿಯೇ ಇರಲಿಲ್ಲ! 4

ಮಾರ್ಚ್ 26ರಿಂದ ಐಪಿಎಲ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 15ನೇ ಆವೃತ್ತಿಯು ಮಾರ್ಚ್ 26ರಿಂದ ಮೇ 29ರವರೆಗೆ ನಡೆಯಲಿದೆ ಎಂದು ಆಡಳಿತ ಸಮಿತಿ ಮುಖ್ಯಸ್ಥ ಬ್ರಿಜೇಶ್ ಪಟೇಲ್ ತಿಳಿಸಿದ್ದಾರೆ. 12

ಒಳ ಪುಟ
ಅಮೇಠಿ : ವಲಸೆ ಮುಖಂಡರ ಹಣಾಹಣಿ 5

ಹರ್ಷ ತಾಯಿಗೆ ವಿಧಾನಸಭಾ ಟಿಕೆಟ್ ನೀಡಲು ಒತ್ತಾಯ

ಬಿಜೆಪಿಗೆ ಮುಜುಗರ ತಂದ ‘ಎಂಎಲ್‌ಎ ಅಭಿಯಾನ’

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಬಜರಂಗದಳದ ಕಾರ್ಯಕರ್ತ ಹರ್ಷ ಹತ್ಯೆಯಾದ ಬೆನ್ನಲ್ಲೇ ‘ದೇಶಭಕ್ತರ ಕುಟುಂಬದ ಸದಸ್ಯರಿಗೆ ಎಂಎಲ್‌ಎ ಟಿಕೆಟ್ ನೀಡಬೇಕು’ ಎಂಬ ಹೊಸ ಅಭಿಯಾನವನ್ನು ದೇಶಭಕ್ತ ಹಿಂದೂ ಕಾರ್ಯಕರ್ತರ ಹೆಸರಿನಲ್ಲಿ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಆರಂಭಿಸಿದ್ದು, ಬಿಜೆಪಿಗೆ ಮುಜುಗರ ತಂದಿದೆ.

‘ಹರ್ಷ ದೇಶಕ್ಕಾಗಿ ಪ್ರಾಣವನ್ನೇ ಕೊಟ್ಟಿದ್ದಾನೆ. ಅವರ ಕುಟುಂಬದವರಿಗೆ ಸಾಂತ್ವನ, ಭಾಷಣ, ಆರ್ಥಿಕ ನೆರವು ನೀಡಿದರಷ್ಟೇ ಸಾಲದು. ಅವರ ತಾಯಿಗೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನೀಡಬೇಕು. ದೇಶಭಕ್ತನ ಮನೆಯಿಂದ ಒಬ್ಬರು ಎಂಎಲ್‌ಎ ಹುಟ್ಟಿಬರಲಿ. ಇಂತಹ ಸ್ಥಾನಗಳು ಈಶ್ವರಪ್ಪ, ಯಡಿಯೂರಪ್ಪ ಅವರ ಕುಟುಂಬದವರಿಗಷ್ಟೇ ಮೀಸಲಾಗಬಾರದು. ನಮ್ಮ ಬೇಡಿಕೆ ಈಡೇರಿಸಿದರೆ ಬಿಜೆಪಿಗೊಂದು ಸಲಾಂ’ ಎಂದು ಪೋಸ್ಟರ್‌ಗಳನ್ನು ಶೇರ್ ಮಾಡಲಾಗುತ್ತಿದೆ.

4ನೇ ಪುಟ ನೋಡಿ

‘ಹರ್ಷ ಹತ್ಯೆ ಹಿಂದೆ ಯುವತಿಯರಿಲ್ಲ’

ಶಿವಮೊಗ್ಗ: ಬಜರಂಗದಳದ ಕಾರ್ಯಕರ್ತ ಹರ್ಷ ಹತ್ಯೆ ಘಟನೆಗೂ, ಫೆ.20ರ ರಾತ್ರಿ ಅವರ ಹತ್ಯೆಗೂ ಮೊದಲು ಕರೆ ಮಾಡಿದ್ದ ಯುವತಿಯರಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ತನಿಖೆ ವೇಳೆ ದೃಢಪಟ್ಟಿದೆ.

‘ಕೊಲೆಗೂ ಮೊದಲು ಯುವತಿಯು ಕರೆ ಮಾಡಿರುವುದು ಕೇವಲ ಕಾಕತಾಳೀಯ. ಅವರು ಅನ್ಯಕೋಮಿಗೆ ಸೇರಿದವರಲ್ಲ. ಹಂತಕರಿಗೂ ಅವರಿಗೂ ಸಂಬಂಧ ಇಲ್ಲ. ಈ ಕುರಿತು ಹೆಚ್ಚಿನ ವಿವರ ಕಲೆ ಹಾಕುತ್ತಿದ್ದೇವೆ’ ಎಂದು ತನಿಖಾ ತಂಡದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಹರ್ಷ ಅವರ ಮೊಬೈಲ್ ಸಿಕ್ಕಿದೆ. ತನಿಖಾ ತಂಡ ಪರಿಶೀಲಿಸುತ್ತಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಖಚಿತಪಡಿಸಿದರು.

ಶಾಲೆಗಳಿಗೆ ಏ.10 ರಿಂದ ಮೇ 15ರವರೆಗೆ ಬೇಸಿಗೆ ರಜೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷ (2021–22) ಏಪ್ರಿಲ್ 9ಕ್ಕೆ ಮುಕ್ತಾಯಗೊಳ್ಳಲಿದ್ದು, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಏಪ್ರಿಲ್ 10ರಿಂದ ಮೇ 15ರವರೆಗೆ ಬೇಸಿಗೆ ರಜೆ ನೀಡಲು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ಧರಿಸಿದೆ. ಮುಂದಿನ ಶೈಕ್ಷಣಿಕ ವರ್ಷ (2022–23) ಮೇ 16ರಿಂದ ಆರಂಭವಾಗಲಿದೆ.

ಕೋವಿಡ್ ಕಾರಣ 2019–20, 2020–21 ಮತ್ತು 2021–22 ಈ ಮೂರೂ ಶೈಕಣಿಕ ಸಾಲಿನಲ್ಲಿ ಭೌತಿಕ ತರಗತಿಗಳು ನಡೆಯದೇ ವಿದ್ಯಾರ್ಥಿಗಳಿಗೆ ಆಗಿರುವ ಕಲಿಕಾ ಕೊರತೆ ಸರಿದೂಗಿಸಲು ಮುಂದಿನ ವರ್ಷ ಶೈಕ್ಷಣಿಕ ವರ್ಷದಲ್ಲಿ ‘ಕಲಿಕಾ ಚೇತರಿಕೆ (ಸೇತುಬಂಧ) ಕಾರ್ಯಕ್ರಮ ಆಯೋಜಿಸಲು ಕೂಡಾ ಇಲಾಖೆ ನಿರ್ಧರಿಸಿದೆ.

ಪ್ರಸಕ್ತ ವರ್ಷ ಏಪ್ರಿಲ್ 9ರಂದು ಶೈಕ್ಷಣಿಕ ವರ್ಷ ಕೊನೆಗೊಳ್ಳಲಿರುವುದರಿಂದ ಪ್ರಾಥಮಿಕ ಶಾಲೆಗಳಲ್ಲಿ (1–5, 1–7 ಮತ್ತು 8ನೇ ತರಗತಿ ಇರುವ ಶಾಲೆಗಳು) ಮಾರ್ಚ್ 24 ರಿಂದ ಏಪ್ರಿಲ್ 4ರವರೆಗೆ ವಾರ್ಷಿಕ ಪರೀಕ್ಷೆ ನಡೆಸಿ, ಏ. 9 ರಂದು ಫಲಿತಾಂಶ ಪ್ರಕಟಿಸಬೇಕು. 8–9 ತರಗತಿಗಳಿರುವ ಪ್ರೌಢಶಾಲೆಗಳಲ್ಲಿ ಮಾರ್ಚ್ 21ರಿಂದ ಮಾರ್ಚ್ 26 ರವರೆಗೆ ವಿಷಯವಾರು ಪರೀಕ್ಷೆ, ಮಾರ್ಚ್ 29 ರಂದು ಭಾಗ–2 (ದೈಹಿಕ ಶಿಕ್ಷಣ, ಇತರ) ಪರೀಕ್ಷೆ ನಡೆಸಿ, ಏಪ್ರಿಲ್ 7ರಂದು ಫಲಿತಾಂಶ ಪ್ರಕಟಿಸಬೇಕು ಎಂದು ಇಲಾಖೆ ಸೂಚಿಸಿದೆ.

ಸಾಮಾನ್ಯವಾಗಿ ಶೈಕ್ಷಣಿಕ ವರ್ಷ ಮೇ 29ರಿಂದ ಆರಂಭವಾಗಿ ಏಪ್ರಿಲ್ 10ಕ್ಕೆ ಮುಕ್ತಾಯವಾಗುತ್ತದೆ.

ಪ್ರಸಕ್ತ ಸಾಲಿನಲ್ಲಿ ಶೈಕ್ಷಣಿಕ ವರ್ಷವನ್ನು ಜುಲೈ 1ರಿಂದ ಆರಂಭಿಸಿ ಏಪ್ರಿಲ್ 30ರವರೆಗೆ ವಿಸ್ತರಿಸಿ ನಿಗದಿಪಡಿಸಲಾಗಿತ್ತು. ಆದರೆ, ಕೋವಿಡ್ ಕಾರಣದಿಂದ ಕಳೆದ ಎರಡು ಶೈಕ್ಷಣೆ ವರ್ಷಗಳಲ್ಲಿ ವಿದ್ಯಾರ್ಥಿಗಳಿಗೆ ನಿರಂತರವಾಗಿ ತರಗತಿ ನಡೆದಿಲ್ಲ. ಅಲ್ಲದೆ, ಪರ್ಯಾಯ (ಆನ್‌ಲೈನ್) ಶಿಕ್ಷಣ ಪರಿಣಾಮಕಾರಿಯಾಗದೆ ವಿದ್ಯಾರ್ಥಿಗಳು ಕಲಿಕೆಯಿಂದ ವಂಚಿತರಾಗಿರುವುದು ಕಂಡುಬಂದಿದೆ ಎಂದೂ ಶಿಕ್ಷಣ ಇಲಾಖೆ ತಿಳಿಸಿದೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ

ಎಲ್‌ಐಸಿ ಐಪಿಒ
ಪಾಲಿಸಿದಾರಕರ ಮೀಸಲಾತಿ (ರಿಸರ್ವೇಶನ್)

ಇದರಲ್ಲಿ ಭಾಗವಹಿಸಲು ಪಾಲಿಸಿದಾರರು ಕೆಳಗಿನ ಮಾನದಂಡಗಳನ್ನು ಪೂರ್ತಿಯಾಗಿಸಬೇಕು

- ಫೆಬ್ರವರಿ 13, 2022 ರಂತೆ ನಿಗಮದ ಒಂದು ಅಥವಾ ಹೆಚ್ಚಿನ ಪಾಲಿಸಿಗಳನ್ನು ಹೊಂದಿರುವ ನಿಗಮದ ನಿವಾಸಿ ವೈಯಕ್ತಿಕ ಪಾಲಿಸಿದಾರರು ಮತ್ತು ಬಿಡ್/ಆಫರ್ ತೆರೆಯುವ ದಿನಾಂಕಕ್ಕೆ ಅರ್ಹರು*
- ಪಾಲಿಸಿದಾರರ ಪ್ಯಾನ್ ವಿವರಗಳನ್ನು ಫೆಬ್ರವರಿ 28, 2022 ರಂದು ಅಥವಾ ಮೊದಲು ನಿಗಮದೊಂದಿಗೆ ನವೀಕರಿಸಬೇಕು

*ದಯವಿಟ್ಟು ಫೆಬ್ರವರಿ 13, 2022 ರ ಡ್ರಾಫ್ಟ್ ರೆಡ್ ಹೆರಿಂಗ್ ಪ್ರಾಸ್ಪೆಕ್ಟಸ್ ಅನ್ನು ಸಹ ನೋಡಿ

ಡಿಮ್ಯಾಟ್ ಖಾತೆ ತೆರೆಯುವ ಪ್ರಕ್ರಿಯೆ

- ಹತ್ತಿರದ ಕಾಮನ್ ಸರ್ವೀಸ್ ಸೆಂಟರ್ (ಸಿಎಸ್‌ಸಿ) ನಲ್ಲಿ ಹೋಗಿ ಡಿಮ್ಯಾಟ್ ಖಾತೆ ತೆರೆದುಕೊಳ್ಳಿ

ಅಥವಾ

- ಡಿಮ್ಯಾಟ್ ಖಾತೆ ತೆರೆಯಲು ಈ ವೆಬ್‌ಸೈಟ್‌ಗೆ ಭೇಟಿಕೊಡಿ ಇಲ್ಲಿ ನಿಮಗೆ ರಿಜಿಸ್ಟರ್ಡ್ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ ಅವರ ಲಿಸ್ಟ್ (ಡಿಪಿ) ಸಿಗಲಿದೆ

ಎನ್‌ಎಸ್‌ಡಿಎಲ್: https://nsdl.co.in/Open_NSDL_Demat_Account.php
ಸಿಡಿಎಸ್‌ಎಲ್ : https://www.cdslindia.com/DP/dplist.aspx

LIFE INSURANCE CORPORATION OF INDIA is proposing, subject to applicable statutory and regulatory requirements, receipt of requisite approvals, market conditions and other considerations, to undertake an initial public offer of its Equity Shares and has filed the draft red herring prospectus dated February 13, 2022 ("DRHP") read with the corrigendum dated February 15, 2022. The DRHP is available on the websites of SEBI at www.sebi.gov.in, websites of the Stock Exchanges i.e., BSE at www.bseindia.com and NSE at www.nseindia.com, respectively and is also available on the websites of the BRLMs, i.e. Kotak Mahindra Capital Company Limited at https://investmentbank.kotak.com, Axis Capital Limited at www.axiscapital.co.in, BofA Securities India Limited at www.ml-india.com, Citigroup Global Markets India Private Limited at www.online.citibank.co.in/rhtm/citigroupglobalscreen1.htm, Goldman Sachs (India) Securities Private Limited at www.goldmansachs.com, ICICI Securities Limited at www.icicisecurities.com, JM Financial Limited at www.jmfl.com, J.P. Morgan India Private Limited at www.jpmipl.com, Nomura Financial Advisory and Securities (India) Private Limited at www.nomuraholdings.com/company/group/asia/india/index.html and SBI Capital Markets Limited at www.sbicaps.com. Potential investors should note that investment in equity shares involves a high degree of risk and for details relating to such risk, please see the section titled 'Risk Factors' of the RHP, when filed. Potential investors should not rely on the DRHP filed with SEBI for making any investment decision. Specific attention of the investors is invited to "Risk Factors" beginning on page 23 of the DRHP.

This announcement does not constitute an offer of securities for sale in any jurisdiction, including the United States, and any securities described in this announcement may not be offered or sold in the United States absent registration under the U.S. Securities Act of 1933, as amended, or an exemption from such registration. No public offering or sale of securities in the United States is contemplated.

LIC
ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
LIC/RKS/2021-22/48/KAN
ನಮ್ಮನ್ನು ಫಾಲೋ ಮಾಡಿರಿ: YouTube LIC India Forever | IRDAI Regn No.: 512
ಪ್ರತಿ ಕ್ಷಣವೂ ನಿಮ್ಮೊಂದಿಗೆ

MARUTI SUZUKI COMMERCIAL
MARUTI SUZUKI SUPER CARRY
ಡೆಕ್ ಏಕೈಕ ಮತ್ತು ಕೆಲಸಗಳು ಅನೇಕ
SUPER MART
S-CNG DRIVE SMART. CHOOSE GREEN.
1.2L PETROL ENGINE
4 ಸಿಲಿಂಡರ್‌ಗಳ ಶಕ್ತಿಶಾಲಿಯಾದ 1.2 L ಇಂಜಿನ್
ದೊಡ್ಡದಾದ ಮತ್ತು ಸ್ಥಿರವಾದ ಡೆಕ್
ಅತ್ಯುತ್ತಮ ಮೈಲೇಜ್
ಸುರಕ್ಷೆ ನಿಮ್ಮದು, ಭರವಸೆ ಮಾರುತಿ ಸುಜುಕಿಯದ್ದು
BIG SAVINGS
SUPER CARRY PETROL ₹49 100*
SUPER CARRY
E-BOOK TODAY AT WWW.MARUTISUZUKICOMMERCIAL.COM | FOR BULK ORDERS, MAIL AT: SUPERCARRY@MARUTI.CO.IN
ಬೆಂಗಳೂರು: ಸುರಕ್ಷಾ ಜಿಗಣಿ 9449865686 | ಪ್ರಥಮ್ ದೊಮ್ಮಸಂದ್ರ, 9606033664, 9901722335 | ಬಿಮಲ್ ಯಶವಂತಪುರ 9845433063 | ವರುಣ್ ಹೆಬ್ಬಾಳ 9513394767 9148279804 | ಕಲ್ಯಾಣಿ ಮಾಗಡಿ ಮುಖ್ಯ ರಸ್ತೆ, 9071725731 | ಆರ್ ಎನ್ ಎಸ್ ರಾಜಾಜಿನಗರ 6366429954, 080–23130022
ತುಮಕೂರು: ಸಾಕೇತ್ ತುಮಕೂರು 9482710509 7022624931
*Offer includes consumer offer, exchange bonus and corporate offer (wherever applicable) on selected models/ variants. Above mentioned savings amount is the value of maximum savings on selected models. Terms and conditions apply. The terms and conditions are subject to change without any prior notice. Accessories and features shown in the pictures may not be part of the standard equipment and may vary according to the variant. Images are for illustration purpose only. Colors shown may vary from actual body colors due to printing on paper. Black Glass Shade on the vehicle is due to the lighting effect. Offers vary across variants. Maruti Suzuki India Limited reserves the right to discontinue offers without notice. Above offers are valid till 28th February, 2022.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಆದೇಶಕ್ಕೂ ಇಲ್ಲ ಕಿಮ್ಮತ್ತು: ಅಸಮಾಧಾನ

ಇನ್ನೂ ತೆರವಾಗದ ಫ್ಲೆಕ್ಸ್, ಬ್ಯಾನರ್‌ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅನಧಿಕೃತವಾಗಿ ಅಳವಡಿಸಿರುವ ಫ್ಲೆಕ್ಸ್, ಬ್ಯಾನರ್, ಬಂಟಿಂಗ್‌ಗಳನ್ನು ಮುಲಾಜಿಲ್ಲದೇ ತೆರವುಗೊಳಿಸುವಂತೆ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಎಲ್ಲ ವಲಯಗಳ ಮುಖ್ಯ ಎಂಜಿನಿಯರ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ 25 ದಿನಗಳೇ ಕಳೆದಿವೆ. ಆದರೆ, ಈಗಲೂ ನಗರದ ಬಹುತೇಕ ಕಡೆ ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಿರುವ ಫ್ಲೆಕ್ಸ್, ಬ್ಯಾನರ್‌ಗಳು ತೆರವಾಗಿಲ್ಲ.

ಬಿಬಿಎಂಪಿಯ 2018ರ ಹೊರಾಂಗಣ ಸೈನೇಜ್ ಮತ್ತು ಸಾರ್ವಜನಿಕ ಸಂದೇಶ ನೀತಿಗೆ ಅನುಗುಣವಾಗಿ ರೂಪಿಸಿರುವ ಬೈ-ಲಾ 2020ರ ಏ.1ರಿಂದ ಜಾರಿಗೆ ಬಂದಿದೆ. ಇದರ ಪ್ರಕಾರ, ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್, ಫ್ಲೆಕ್ಸ್, ಪೋಸ್ಟರ್, ಬಂಟಿಂಗ್‌ಗಳನ್ನು ಅನಧಿಕೃತವಾಗಿ ಅಳವಡಿಸಲು ಅವಕಾಶ ಇಲ್ಲ.

'2018ರ ಬಿಬಿಎಂಪಿ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶಗಳ ಬೈಲಾಗಳ ಪ್ರಕಾರ, ಅಂಗಡಿ ಮುಂಗಟ್ಟುಗಳ ಜಾಹೀರಾತುಗಳು, ವಾಹನಗಳ-

ಆಜಾದ್‌ನಗರದ ಮುಖ್ಯ ರಸ್ತೆ ಬಳಿ ಇರುವ ಫ್ಲೆಕ್ಸ್

ಆರ್‌.ಆರ್‌.ನಗರದಲ್ಲಿ ರಸ್ತೆ ಪಕ್ಕದಲ್ಲಿರುವ ಫ್ಲೆಕ್ಸ್

ಲ್ಲಿನ ಸ್ವ-ಜಾಹೀರಾತುಗಳು ಹಾಗೂ ಇತರ ಸಣ್ಣಪುಟ್ಟ ಜಾಹೀರಾತುಗಳನ್ನು ಸೀಮಿತ ಅವಧಿಗೆ ಹಾಗೂ ಸೀಮಿತ ಅಳತೆಯಲ್ಲಿ (ಖಾಸಗಿ ಸಹಭಾಗಿತ್ವದ ಸರ್ಕಾರಿ ಯೋಜನೆಗಳು ಸೇರಿ) ಅಳವಡಿಸುವುದಕ್ಕೆ ಮಾತ್ರ ಅನುಮತಿ ನೀಡಲಾಗುತ್ತದೆ. ಇವುಗಳನ್ನು ಹೊರತುಪಡಿಸಿ, ಬಿಬಿಎಂಪಿ ವ್ಯಾಪ್ತಿಯ ಯಾವುದೇ ವಸತಿ ಪ್ರದೇಶಗಳಲ್ಲಿ, ಖಾಸಗಿ ಸ್ವತ್ತುಗಳಲ್ಲಿ ಅನಧಿಕೃತವಾಗಿ ಜಾಹೀರಾತು ಫಲಕಗಳು, ಶುಭಾಶಯ ಕೋರುವ ಜಾಹೀರಾತುಗಳು, ಸಭೆ-ಸಮಾರಂಭಗಳ ಜಾಹೀರಾತುಗಳು, ಎಲ್‌ಇಡಿ ಜಾಹೀರಾತುಗಳು, ಸೈಕಲ್ ಜಾಹೀರಾತುಗಳು, ವಾಹನ ಜಾಹೀರಾತುಗಳು ಮತ್ತು ಫ್ಲೆಕ್ಸ್, ಬ್ಯಾನರ್‌ಗಳು, ಬಂಟಿಂಗ್ಸ್, ಬಾವುಟಗಳು ಮೊದಲಾದ ಮುದ್ರಿತ ಜಾಹೀ ರಾತುಗಳನ್ನು ಅಳವಡಿಸುವುದನ್ನು ನಿಷೇಧಿಸಲಾಗಿದೆ. ಅವುಗಳನ್ನು ತೆರವುಗೊಳಿಸಬೇಕು' ಎಂದು ಮುಖ್ಯ ಆಯುಕ್ತರು 2022ರ ಫೆ. 1ರಂದು ಸೂಚನೆ ನೀಡಿದ್ದರು.

ಮುಖ್ಯ ಆಯುಕ್ತರು ಸೂಚನೆ ನೀಡಿದ ಬಳಿಕ ಪಾಲಿಕೆಯ ಎಲ್ಲ 8 ವಲಯಗಳಲ್ಲಿ ಮುಖ್ಯ ಎಂಜಿನಿಯರ್ ನೇತೃತ್ವದ ತಂಡಗಳು ಫ್ಲೆಕ್ಸ್ ಹಾಗೂ ಬ್ಯಾನರ್‌ಗಳ ತೆರವು ಕಾರ್ಯಾಚರಣೆಯನ್ನು ನಡೆಸಿದ್ದವು. ರಸ್ತೆ ಬದಿಯ ವಿದ್ಯುತ್ ಕಂಬಗಳು, ಪಾದಚಾರಿ ಮಾರ್ಗ, ರಾಜಕಾಲುವೆಯ ಬೇಲಿಗಳ ಮೇಲೆ ಅಳವಡಿಸಿರುವ ಫ್ಲೆಕ್ಸ್‌ಗಳನ್ನು ತೆರವುಗೊಳಿಸಿದ್ದವು. ಆದರೆ, ಈ ಕಾರ್ಯಾಚರಣೆ ಒಂದೆರಡು ದಿನಗಳಿಗೆ ಸೀಮಿತವಾಗಿದೆ. ಬಳಿಕ ತೆರವು ಕಾರ್ಯಾಚರಣೆ ಸ್ಥಗಿತಗೊಂಡಿದೆ.

ನಗರದಲ್ಲಿ ಅನಧಿಕೃತವಾಗಿ ಬ್ಯಾನರ್, ಫ್ಲೆಕ್ಸ್, ಪೋಸ್ಟರ್, ಬಂಟಿಂಗ್ಸ್ ಅಳವಡಿಸುವವರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿ ಎಫ್‌ಐಆರ್ ದಾಖಲಿಸುವಂತೆ ಎಲ್ಲ ವಲಯದ ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ತಳ ಹಂತದ ಅಧಿಕಾರಿಗಳು ಈ ಸೂಚನೆಯನ್ನೂ ಪಾಲಿಸಲು ಆಸಕ್ತಿ ತೋರಿಲ್ಲ.

ಮುಖ್ಯಾಂಶಗಳು

- ಫ್ಲೆಕ್ಸ್ ತೆರವಿಗೆ ಆದೇಶಿಸಿ 25 ದಿನಗಳು ಕಳೆದಿದ
- ಎಲ್ಲಾ ವಲಯ ಮುಖ್ಯ ಎಂಜಿನಿಯರ್‌ಗಳಿಗೆ ಸೂಚನೆ

ನಗರದಲ್ಲಿ ಫ್ಲೆಕ್ಸ್ ಹಾಗೂ ಅನಧಿಕೃತ ಜಾಹೀರಾತು ಹಾವಳಿ ಕುರಿತು ಸಲ್ಲಿಕೆ ಆಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಹೈಕೋರ್ಟ್ 2018ರ ಆಗಸ್ಟ್ 1ರಂದು ಸಾರ್ವಜನಿಕ ಸ್ಥಳಗಳಲ್ಲಿರುವ ಅಷ್ಟೂ ಅನಧಿಕೃತ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್‌ಗಳನ್ನು ತಕ್ಷಣವೇ ತೆರವುಗೊಳಿಸುವಂತೆ ಬಿಬಿಎಂಪಿಗೆ ಸೂಚನೆ ನೀಡಿದ್ದರು.

ಬಿಬಿಎಂಪಿಯ ಎಲ್ಲ ವಿಭಾಗಗಳ ಅಧಿಕಾರಿಗಳು ಬೇರೆಲ್ಲ ಕೆಲಸ ಬಿಟ್ಟು ಬೀದಿ ಬದಿಯ ಹೊರಾಂಗಣ ಜಾಹೀರಾತುಗಳನ್ನು ತೆರವುಗೊಳಿಸಿದ್ದರು. ಸಂಜೆಯಾಗುವಷ್ಟರಲ್ಲಿ ನಗರದಲ್ಲಿದ್ದ ಶೇ 50ರಷ್ಟು ಹೊರಾಂಗಣ ಜಾಹೀರಾತುಗಳು ತೆರವಾಗಿದ್ದವು. ಒಂದೇ ವಾರದಲ್ಲಿ ನಗರದಾದ್ಯಂತ ಹೊರಾಂಗಣ ಜಾಹೀರಾತು ಹಾವಳಿ ಇಲ್ಲ ಎನ್ನುವಷ್ಟು ಕಡಿಮೆಯಾಗಿತ್ತು.

ಸ್ಮಾರ್ಟ್ ಸಿಟಿ ಯೋಜನೆ ಅಡಿ ಅವೆನ್ಯೂ ರಸ್ತೆಯಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ರಾಕೇಶ್ ಸಿಂಗ್ ಗುರುವಾರ ಪರಿಶೀಲಿಸಿದರು. ಬಸವರಾಜ ಕಬಾಡೆ, ವಿನಾಯಕ ಸೂಗೂರ್ ಹಾಗೂ ಇತರ ಅಧಿಕಾರಿಗಳು ಇದ್ದಾರೆ

ಅವೆನ್ಯೂ ರಸ್ತೆ: ಸ್ಮಾರ್ಟ್ ಸಿಟಿ ಯೋಜನೆ

ಕಾಮಗಾರಿ ಪೂರ್ಣಗೊಳಿಸಲು ಮಾರ್ಚ್ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅವೆನ್ಯೂ ರಸ್ತೆಯಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಅಡಿ ನಡೆಯುತ್ತಿರುವ ಕಾಮಗಾರಿಗಳನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಅಧ್ಯಕ್ಷ ರಾಕೇಶ್ ಸಿಂಗ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಕಾಮಗಾರಿಯನ್ನು ಗುರುವಾರ ಪರಿಶೀಲಿಸಿದ ಅವರು, 'ಕಾಮಗಾರಿಯಿಂದ ಸಾರ್ವಜನಿಕರ ಓಡಾಟಕ್ಕೆ ಯಾವುದೇ ರೀತಿಯ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ರಾತ್ರಿ ವೇಳೆಯೂ ಕೆಲಸ ನಿರ್ವಹಿಸುವ ಮೂಲಕ ಕಾಮಗಾರಿಗಳು ಗಡುವಿನೊಳಗೆ ಪೂರ್ಣಗೊಳ್ಳುವಂತೆ ನೋಡಿಕೊಳ್ಳಬೇಕು' ಎಂದು ತಾಕೀತು ಮಾಡಿದರು.

ಮೈಸೂರು ಬ್ಯಾಂಕ್ ವೃತ್ತದಿಂದ ಎಸ್ ಜೆ ಪಿ ರಸ್ತೆಯನ್ನು ಸಂಪರ್ಕಿಸುವ 1.02 ಕಿ.ಮೀ ಉದ್ದದ ಈ ರಸ್ತೆಯ ಎರಡೂ ಬದಿಗಳಲ್ಲಿ ಕುಡಿಯುವ ನೀರಿನ ಕೊಳವೆಗಳನ್ನು ಅಳವಡಿಸಬೇಕಾಗಿದ್ದು, ನಂತರ ಪಾದಚಾರಿ ಮಾರ್ಗ ನಿರ್ಮಿಸಬೇಕಾಗಿದೆ. ಕೊಳವೆ ಅಳವಡಿಸುವ ಕಾಮಗಾರಿಯನ್ನು ಜಲಮಂಡಳಿ ನಿರ್ವಹಿಸುತ್ತಿದೆ.

ವರ್ತಕರೊಂದಿಗೆ ಚರ್ಚೆ: ಅವೆನ್ಯೂ ರಸ್ತೆಯ ದೊಡ್ಡಪೇಟೆ ವೃತ್ತದ ಸುಂದರೀಕರಣ, ಅಗ್ನಿಶಾಮಕ ಘಟಕಗಳ ಸ್ಥಾಪನೆ, ರಸ್ತೆಯ ಇಕ್ಕೆಲಗಳಲ್ಲಿ ವಾಹನ ನಿಲುಗಡೆ ವ್ಯವಸ್ಥೆ ಮಾಡುವಂತೆ ಹಾಗೂ ಪಾದಚಾರಿ ಮಾರ್ಗದ ಅಭಿವೃದ್ಧಿಗೆ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಸ್ಥಳೀಯ ವರ್ತಕರು ಒತ್ತಾಯಿಸಿದರು. ಇದಕ್ಕೆ ಸ್ಪಂದಿಸಿದ ರಾಕೇಶ್ ಸಿಂಗ್, ಈ ಕುರಿತು ಕೂಡಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯ ಅಧಿಕಾರಿಗಳಿಗೆ ಸೂಚಿಸಿದರು.

ಪರಿಶೀಲನೆ ವೇಳೆ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯ ಮುಖ್ಯ ಎಂಜಿನಿಯರ್ ವಿನಾಯಕ ಸೂಗೂರ್, ಬಿಬಿಎಂಪಿಯ ಸೂಪರಿಂಟೆಂಡಿಂಗ್ ಎಂಜಿನಿಯರ್ ಬಸವರಾಜ್ ಕಬಾಡೆ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

'ಪ್ರಜಾವಾಣಿ'ಯು ಇದೇ 19ರ ಸಂಚಿಕೆಯಲ್ಲಿ 'ಅವೆನ್ಯೂ- ಫುಟ್‌ಪಾತ್ ಮಾಯ, ಓಡಾಟಕ್ಕೆ ಕಿರಿಕಿರಿ' ಎಂಬ ವಿಶೇಷ ವರದಿಯನ್ನು ಪ್ರಕಟಿಸುವ ಮೂಲಕ ಅವೆನ್ಯೂ ರಸ್ತೆಯಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಗಮನಸೆಳೆದಿತ್ತು.

ಸುದ್ದಿ 2 ನಿಮಿಷ

ಉನ್ನತ ತನಿಖೆ ಯೋಚನೆ ಸದ್ಯಕ್ಕಿಲ್ಲ: ಆರಗ ಜ್ಞಾನೇಂದ್ರ

ಬೆಂಗಳೂರು: 'ಶಿವಮೊಗ್ಗದಲ್ಲಿ ಬಜರಂಗದಳದ ಕಾರ್ಯಕರ್ತ ಹರ್ಷ ಕೊಲೆ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ವಹಿಸುವ ಯೋಚನೆ ಸದ್ಯಕ್ಕಿಲ್ಲ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಬಸವರಾಜ



ಬೊಮ್ಮಾಯಿ ಅವರನ್ನು ಗುರುವಾರ ಭೇಟಿ ಮಾಡಿದ ಬಳಿಕ ಮಾತನಾಡಿದ ಅವರು, 'ಸದ್ಯ ಶಿವಮೊಗ್ಗದಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಮುಖ್ಯಮಂತ್ರಿ, ಹಿರಿಯ ಅಧಿಕಾರಿಗಳ ಜೊತೆ ನಾನು ಈಗಾಗಲೇ ಮಾತನಾಡಿದ್ದೇನೆ. ಅಲ್ಲಿನ ಅಧಿಕಾರಿಗಳ ಜೊತೆಗೂ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುತ್ತೇನೆ' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ತುಂಡು ತುಂಡು ಮಾಡುತ್ತೇನೆ ಎಂದು ಕಲಬುರಗಿಯಲ್ಲಿ ಹೇಳಿಕೆ ನೀಡಿರುವ ಮುಕ್ರಂ ಖಾನ್ ಎಂಬವರು ತಲೆಮರೆಸಿಕೊಂಡಿದ್ದು, ಬಂಧಿಸುವ ಕೆಲಸ ಮಾಡುತ್ತೇವೆ' ಎಂದರು.

'ಅನ್ಯ ಯೋಜನೆಗಳಿಗೆ ಎಸ್‌ಸಿಪಿ, ಟಿಎಸ್‌ಪಿ ಅನುದಾನ'

ಬೆಂಗಳೂರು: ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಪಿ) ಮತ್ತು ಗಿರಿಜನ ಉಪಯೋಜನೆಯ (ಟಿಎಸ್‌ಪಿ) ಅನುದಾನವನ್ನು ಅನ್ಯ ಯೋಜನೆಗಳಿಗೆ ಬಳಸುತ್ತಿರುವುದಕ್ಕೆ 'ದಸಂಸ' ಒಕ್ಕೂಟ ವಿರೋಧ ವ್ಯಕ್ತಪಡಿಸಿದೆ.

ಪರಿಶಿಷ್ಟರಿಗೆ ಮೀಸಲಿಟ್ಟ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸದಂತೆ ಕಾಯ್ದೆ ರೂಪಿಸಲಾಗಿತ್ತು. ಈ ಕಾಯ್ದೆಯ 7(ಡಿ) ಕಲಂ ಅಡಿಯಲ್ಲಿ ಅನ್ಯ ಉದ್ದೇಶಕ್ಕೆ ಬಳಸಲು ಅನುಮತಿ ಕಲ್ಪಿಸಲಾಯಿತು. ಇದೇ ಅವಕಾಶ ಬಳಸಿಕೊಂಡು ಮೆಟ್ರೊ ಸೇರಿ ವಿವಿಧ ಯೋಜನೆಗಳಿಗೆ ಬಳಸಲಾಗುತ್ತಿದೆ ಎಂದು ಒಕ್ಕೂಟದ ಮುಖಂಡ ವಿ. ನಾಗರಾಜ್ ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

2022-23ರ ಬಜೆಟ್‌ನಲ್ಲಿ ಪರಿಶಿಷ್ಟರ ಜನಸಂಖ್ಯೆ ಆಧಾರದಲ್ಲಿ ಅನುದಾನ ಬಿಡುಗಡೆ ಮಾಡಬೇಕು ಮತ್ತು ಸಮುದಾಯದ ನಿರುದ್ಯೋಗಿ ಯುವಕರಿಗೆ ಸಾಲ ಸೌಲಭ್ಯವನ್ನು ಸುಲಭವಾಗಿ ಒದಗಿಸಬೇಕು ಎಂದು ಒತ್ತಾಯಿಸಿದರು. ಪರಿಶಿಷ್ಟ ವಿದ್ಯಾರ್ಥಿಗಳ ಬಾಕಿ ವಿದ್ಯಾರ್ಥಿ ವೇತನವನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ಬೆಲೆ ಏರಿಕೆಗೆ ಅನುಗುಣವಾಗಿ ವಿದ್ಯಾರ್ಥಿ ವೇತನ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಮುಂಬರುವ ಬಜೆಟ್‌ನಲ್ಲಿ ಪರಿಶಿಷ್ಟರ ಯೋಜನೆಗಳಿಗೆ ಮೀಸಲಿಡಬೇಕಾದ ಅನುದಾನ ಹಾಗೂ ಎಸ್‌ಸಿಪಿ, ಟಿಎಸ್‌ಪಿ ಕಾಯ್ದೆಯ ಅನುಷ್ಠಾನ ಕುರಿತು ಒಕ್ಕೂಟದ ವತಿಯಿಂದ ಇದೇ 26ರಂದು ಬೆಳಿಗ್ಗೆ 10.30ಕ್ಕೆ ವಸಂತನಗರದ ಲಿಡ್ಕರ್ ಭವನದಲ್ಲಿ ಸಂವಾದ ಆಯೋಜಿಸಲಾಗಿದೆ ಎಂದು ತಿಳಿಸಿದರು.

ನೂತನ ಬ್ರಿಟನ್ ಉಪ ಹೈಕಮಿಷನರ್ ಆಗಿ ಅನಾ ಶೋಟ್ಬೋಲ್ಟ್ ಅಧಿಕಾರ ಸ್ವೀಕಾರ

ಬೆಂಗಳೂರು: ಬೆಂಗಳೂರಿನಲ್ಲಿನ ನೂತನ ಬ್ರಿಟಿಷ್ ಉಪ ಹೈಕಮಿಷನರ್ ಆಗಿ ಅನಾ ಶೋಟ್ಬೋಲ್ಟ್ ಅಧಿಕಾರ ಸ್ವೀಕರಿಸಿದ್ದಾರೆ.

ಅನಾ ಅವರು ಕರ್ನಾಟಕ ಮತ್ತು ಕೇರಳದ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಅಧಿಕಾರ ಸ್ವೀಕರಿಸುವ ಮುನ್ನ ಲಂಡನ್‌ನಲ್ಲಿ ಹೊಸದಾಗಿ ಆರಂಭವಾದ 'ಎಂಟಿಆರ್1924' ರೆಸ್ಟೋರೆಂಟ್‌ನಲ್ಲಿ ಸ್ವಾದಿಷ್ಟ ಮಸಾಲೆ ದೋಸೆ ಸವಿದಿದ್ದಾರೆ. ಬೆಂಗಳೂರಿನಲ್ಲಿ ಮತ್ತಷ್ಟು ದೋಸೆ ಸವಿಯುವ ಇಚ್ಛೆಯನ್ನು ಅನ್ನಾ ವ್ಯಕ್ತಪಡಿಸಿದ್ದಾರೆ.

ದಕ್ಷಿಣ ಏಷ್ಯಾದಲ್ಲಿನ ಹೂಡಿಕೆಗೆ ಸಂಬಂಧಿಸಿದಂತೆ ಉಪ ವ್ಯಾಪಾರ

ಅನಾ ಶೋಟ್ಬೋಲ್ಟ್

ಕಮಿಷನರ್ ಹೊಣೆಯನ್ನು ಸಹ ಅವರು ನಿಭಾಯಿಸಲಿದ್ದಾರೆ. ಬ್ರಿಟನ್ ಮತ್ತು ಭಾರತದ ಸಂಬಂಧಗಳಲ್ಲಿ ಬೆಂಗಳೂರಿಗೆ ನೀಡಿರುವ ಮಹತ್ವವನ್ನು ಇದು ಬಿಂಬಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ.

ಈ ಹುದ್ದೆಗೆ ಮುನ್ನ ಅನ್ನಾ ಅವರು ಅಂತರಾಷ್ಟ್ರೀಯ ವ್ಯಾಪಾರ ವಿಭಾಗದಲ್ಲಿ ರಫ್ತು ಉತ್ತೇಜನ ಸೇವೆಯ ಉಪ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಾಸಕ ಅರವಿಂದ ಲಿಂಬಾವಳಿ ಚಾಲನೆ ನೀಡಿದರು. ಸಚಿವ ಡಾ.ಸುಧಾಕರ್, ಸಂಸದ ಪಿ.ಸಿ.ಮೋಹನ್, ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ ಇದ್ದರು.

ಮಹದೇವಪುರ: ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಿ.ಎಂ ಚಾಲನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಬೆಂಗಳೂರು ನಗರವನ್ನು ಮಾದರಿಯಾಗಿ ಅಭಿವೃದ್ಧಿ ಮಾಡಲಾಗುತ್ತದೆ. ನವ ಬೆಂಗಳೂರಿನಿಂದ ನವ ಕರ್ನಾಟಕ, ನವ ಕರ್ನಾಟಕದಿಂದ ನವ ಭಾರತ ನಿರ್ಮಾಣ ಆಗಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಹದೇವಪುರ ಕ್ಷೇತ್ರ ವ್ಯಾಪ್ತಿಯಲ್ಲಿನ 250 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ಹಾಗೂ ಕೆಆರ್‌ಡಿಸಿಎಲ್ ವತಿಯಿಂದ ಮೇಲು ಸೇತುವೆ ನಿರ್ಮಾಣ ಕಾಮಗಾರಿಗೆ ಚಾಲನೆ, 150 ಅಡಿಗಳ ಸಿ.ಡಿ.ಪಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ, ಠಾಣೆಯ ನೂತನ ಕಟ್ಟಡಕ್ಕೆ ಗುದ್ದಲಿ ಪೂಜೆ ಸೇರಿದಂತೆ ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದರು.

'ನಗರಕ್ಕೆ ಅಗತ್ಯವಿರುವ ಮೂಲ-ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದಾಗಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡಿದ್ದೇವೆ. ನಮ್ಮ ಸರ್ಕಾರ ವಿಶೇಷ ಕಾಳಜಿಯನ್ನು ಹೊಂದಿದ್ದು, ಬೆಳೆಯುತ್ತಿರುವ ನಗರೀಕರಣಕ್ಕೆ ತಕ್ಕ ಹಾಗೆ ಸೌಕರ್ಯಗಳನ್ನು ಒದಗಿಸುವ ಮೂಲಕ ನಗರವನ್ನು ಮಾದರಿಯಾಗಿ ಮಾಡಲಾಗುತ್ತದೆ' ಎಂದು ಹೇಳಿದರು.

ಕ್ಷೇತ್ರದಲ್ಲಿ ಕಾವೇರಿ ನೀರು ಪೂರೈಕೆ, ಒಳಚರಂಡಿ, 110 ಹಳ್ಳಿಗಳ ಅಭಿವೃದ್ಧಿ ಸೇರಿದಂತೆ ವಿವಿಧ ಕಾಮಗಾರಿಗಳು ತ್ವರಿತಗತಿಯಲ್ಲಿ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಮಹದೇವಪುರ ಹೆಚ್ಚು ಅಭಿವೃದ್ಧಿ ಹೊಂದುವ ಕ್ಷೇತ್ರವಾಗಲಿದೆ'r ಎಂದರು.

'ಮಹದೇವಪುರ ಭಾಗಕ್ಕೆ ಈ ಸಲ ಅತ್ಯಧಿಕ ಅನುದಾನ ನೀಡಿದ್ದೇನೆ. ನಗರದ ರಾಜಕಾಲುವೆಗಳ ಅಭಿವೃದ್ಧಿಗೆ ₹1,500 ಕೋಟಿ ನೀಡಲಾಗುತ್ತದೆ' ಎಂದೂ ಅವರು ಹೇಳಿದರು.

ಐಟಿ ಕೇಂದ್ರ ಮಹದೇವಪುರ, ಬೆಂಗಳೂರಿನ ಬೆಳವಣಿಗೆ ದೃಷ್ಟಿಯಿಂದ ಈ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿ ಅಭಿವೃದ್ಧಿ ಮಾಡಬೇಕಿದೆ. ನಿಗದಿತ ಸಮಯದಲ್ಲಿ ಕೆಲಸ ಮುಗಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಬೆಂಗಳೂರಿನ ಮೆಟ್ರೋ ವಿಸ್ತರಣೆ ಮಾಡಲಾಗುತ್ತದೆ ಎಂದರು.

ಶಾಸಕ ಅರವಿಂದ ಲಿಂಬಾವಳಿ ಮಾತನಾಡಿ, 'ಇಡೀ ಬೆಂಗಳೂರಿನಲ್ಲಿ ಹೆಚ್ಚು ತೆರಿಗೆ ನೀಡುವ ಕ್ಷೇತ್ರ ಮಹದೇವಪುರ. ಪ್ರಪಂಚದ ಎಲ್ಲ ಭಾಗದ ಜನ ಇಲ್ಲಿ ವಾಸವಾಗಿ ಹೊಸ ಸಂಸ್ಕೃತಿ ಆಚರಣೆ ಮಾಡುತ್ತಿರುವುದರಿಂದ ಹೊಸ ಬೆಂಗಳೂರು ಎಂಬ ಹೆಸರಿಡಬೇಕು' ಎಂದು ಮನವಿ ಮಾಡಿದರು.

ಬೆಂಗಳೂರು ಪೂರ್ವ ಭಾಗದಲ್ಲಿ ಸರ್ಕಾರಿ ಆಸ್ಪತ್ರೆ ಕೊರತೆ ಇತ್ತು. ಬಡವರೇಡಡ ಹೆಚ್ಚಾಗಿರುವ ಈ ಭಾಗದಲ್ಲಿನ ಜನ ವಿಕ್ಟೋರಿಯಾ, ಕೆ.ಸಿ. ಜನರಲ್ ಸೇರಿದಂತೆ ದೊಡ್ಡ ಆಸ್ಪತ್ರೆಗೆ ಹೋಗಬೇಕಿತ್ತು. ಇದೀಗ ಕ್ಷೇತ್ರದ ಮುನ್ನೇಕೊಳಾಲದಲ್ಲಿ ಆರು ಎಕರೆ ಜಾಗವನ್ನು ಗುರುತಿಸಿ ಆಸ್ಪತ್ರೆಗೆ ಭೂಮಿ ಪೂಜೆ ನೆರವೇರಿಸಲಾಗಿದೆ' ಎಂದರು.

ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಸಂಸದ ಪಿ.ಸಿ.ಮೋಹನ್, ವಿಧಾನಪರಿಷತ್ ಸದಸ್ಯರಾದ ರಮೇಶ್, ಗೋಪಿನಾಥ್‌ರೆಡ್ಡಿ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವಗುಪ್ತ, ಜಿಲ್ಲಾಧಿಕಾರಿ ಜೆ. ಮಂಜುನಾಥ್, ಬಿಬಿಎಂಪಿಯ ವಿಶೇಷ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ, ಬಿಜೆಪಿಯ ಕ್ಷೇತ್ರ ಘಟಕದ ಅಧ್ಯಕ್ಷ ಮನೋಹರ್‌ರೆಡ್ಡಿ ಮತ್ತಿತರರಿದ್ದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/9/2022 ದಿನಾಂಕ : 21-02-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ – ಚಿಕ್ಕಜಾಜೂರು ಡಬ್ಲಿಂಗ್ ಯೋಜನೆ : ಸವಣೂರಿನಿಂದ ಹುಬ್ಬಳ್ಳಿ ನಡುವೆ ಬದಿಯ ಗಟಾರ, ಒಳಚರಂಡಿಯ ಉದ್ದೇಶಿತ ನಿರ್ಮಾಣ ಮತ್ತು ಇತರೆ ವಿವಿಧ ಕಾಮಗಾರಿಗಳು. (ಟೆಂಡರ್ ಉಲ್ಲೇಖ ಸಂ. : ಯುಬಿಎಲ್-ಜೀಆರ್‌ಯು-58)	ರೂ. 26,43,72,089/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 14-03-2022 ರಂದು 15.00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ ಕಾಮಗಾರಿಗಳು, ಬೆಂಗಳೂರು ದಂಡು

ಪಿಯುಬಿ/427/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021-22

S.W.Railways SWRRLY SWRRLY

PUBLIC NOTICE

Public are informed that our client have intent to purchase all that piece and parcel of property bearing **Sy.No.44/1,** totally **Measuring to an extent of 2.16 (Two Acres & Sixteen) Guntas,** Situated at : **CHIKKANAYAKANAHALLI** Village, Varthur Hobli, Bangalore South Taluk, and collectively bounded as follows:-

East by : Private Property;
West by : Government Property;
North by : Government Road;
South by : Government Property;

From its present Owner **SMT. SUJATHA,** W/o. Sri. R. Jayaram Singh & D/o. Sri. Balaji Singh, She had acquired the same through 3 separate Registered Sale Deeds vide Document Nos: **5404, 5405 & 5405/95-96,** Dated: 26/08/1998, All Registered at the office of the Sub-Registrar, Bangalore South Taluk, **in respect of Sy.No. 44/1,** Measuring to an extent of 0-32 Guntas each deed.

Persons having any right over the said property may lodge their objections/claims with documentary evidence within **10 days** from this day to the undersigned. In the absence of any claims within the above said period, it shall be deemed that there are no such claims or that if there are any claims and they have not been made, it shall be deemed to have been waived.

P. NAGAMUNI REDDY,
Advocate, SNN Associates,
No.248, 2nd Floor, 10th Main, 1st Block, 100 Feet Road, HRBR Layout, Kalyan Nagar, Bengaluru - 560043, Land Mark-Near Horamavu Signal, Above Canara Bank & HDFC ATM.
M : 9945159840 / 9036565410 / 8050607979

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562101 ದೂರವಾಣಿ ಸಂಖ್ಯೆ: ಕಛೇರಿ: 08156-270427 ಫ್ಯಾಕ್ಸ್: 08156 -270427 ಇಮೇಲ್-eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ:ಕಾಸಬ/ತಾಂಸ/ಸ.ಇಂ-2/ ಟೆಂಡರ್ ಪ್ರಕಟಣೆ ಸಂಖ್ಯೆ: 17/2021-22, ದಿನಾಂಕ:23/02/2022

4702 ವಿಶೇಷ ಅಭಿವೃದ್ಧಿ ಯೋಜನೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕಿನಲ್ಲಿ 4702 ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲೂ 1 ಮತ್ತು 2 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1 ಮತ್ತು 2 ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 09/03/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 14/03/2022 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ - 08156-270427 ಮತ್ತು ಇ-ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080-25501216 ಮತ್ತು 080-25501227 ರಿಂದ ಪಡೆಯಬಹುದು. ಸಹಿ/- ಕಾರ್ಯಪಾಲಕ ಇಂಜಿನಿಯರ್

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಮುಖ್ಯ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ಮುಳಬಾಗಲು, ಕೋಲಾರ ಜಿಲ್ಲೆ.

Phone: 08159-298914 Email: amomulbagal@gmail.com

(ಎಂ.ಸಿ.ರೋಡ್, ಮುಳಬಾಗಲು, ಕೋಲಾರ ಜಿಲ್ಲೆ)

ಸಂ.: ಸಾಆಮು/ಪಥ್ಯಾಹಾರ/ಟೆಂಡರ್/03/2021-22 ದಿನಾಂಕ: 19.02.2022

ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಮುಳಬಾಗಿಲು ಇಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆಯಂತೆ ಆಸ್ಪತ್ರೆಗಳಿಗೆ ನಾನ್ ಕ್ಲಿನಿಕಲ್ ಸೇವೆಯನ್ನು ಪಡೆಯಲು ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಭಾಗವಹಿಸುವ ಟೆಂಡರ್‌ದಾರರ ಹೆಚ್ಚಿನ ಮಾಹಿತಿಗಾಗಿ **eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಮುಳಬಾಗಲು.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 401/ಎಂ.ಸಿ.ಎ/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

केन्द्रीय विद्यालय संगठन

18 संस्थागत क्षेत्र, भाहीद जीत सिंह मार्ग, नई दिल्ली–110016

KENDRIYA VIDYALAYA SANGATHAN (HQ)

18, INSTITUTIONAL AREA, SHAHEED JEET SINGH MARG, NEW DELHI-110016

Admission Notice: 2022-23

Online Registration for Admission to Class I in Kendriya Vidyalayas for the Academic Year 2022-23 will commence at 10:00 am on **28.02.2022** and will close at 07:00 pm on **21.03.2022**. The Admission details are available in website **https://kvsonlineadmission.kvs.gov.in** and Android Mobile App. Minimum age for admission in class-I will be 6 years as per NEP 2020.

The official Android Mobile App for KVS Online Admission for Class I for the Academic Year 2022-23 and instructions for downloading and installing the App will be available at **https://kvsonlineadmission.kvs.gov.in/apps/** The app will be available at the above URL and also at the Google Play Store. Parents are requested to go through the instructions for using the portal and mobile app carefully before using them.

Registration for Class II and above will be done from **08.04.2022** (Friday) to **16.04.2022** (Saturday) upto 04:00 pm if vacancies exist (in offline mode).

For Class XI, Registration forms may be downloaded from Vidyalaya Website as per the schedule for admission 2022-23 available on KVS (HQ) Website (**https://kvsangathan.nic.in**)

Reckoning of age for all Classes shall be as on **31.03.2022**. Reservation of seats will be as per KVS Admission Guideline available on the Website (**https://kvsangathan.nic.in**)

Under present situation of COVID-19, the directions issued by Competent Authority (Central/State/Local) are to be followed. Accordingly, the parents are requested not to visit Kendriya Vidyalayas physically and avoid gathering. All information regarding Admission, Registration form will be available on Vidyalaya/ KVS (HQ) website under common document for download.

For class II and above, kindly fill the Registration form, Scan it and send it to concerned KV through email only.

Contact Principal / Admission In-charge only when called in the given time slot.

केन्द्रीय विद्यालय संगठन

18 संस्थागत क्षेत्र, भाहीद जीत सिंह मार्ग, नई दिल्ली–110016

KENDRIYA VIDYALAYA SANGATHAN (HQ)

18, INSTITUTIONAL AREA, SHAHEED JEET SINGH MARG, NEW DELHI-110016

प्रवेश सूचना 2022-23

शैक्षणिक सत्र 2022-23 के लिए केंद्रीय विद्यालयों में कक्षा 1 में प्रवेश के लिए ऑनलाइन पंजीकरण दिनांक 28.02.2022 प्रातः 10:00 बजे से दिनांक 21.03.2022 सांय 07:00 बजे तक किया जा सकेगा। प्रवेश संबंधित विवरण वैबसाइट और Android मोबाइल ऐप दोनों के माध्यम से https://kvsonlineadmission.kvs.gov.in से प्राप्त किया जा सकता है। राष्ट्रीय शिक्षा नीति 2020 के अनुसार कक्षा प्रथम में प्रवेश के लिए न्यूनतम आयु 06 वर्ष होनी अनिवार्य है।

शैक्षणिक सत्र 2022-23 में कक्षा 1 में ऑनलाइन प्रवेश के लिए आधिकारिक Android मोबाइल ऐप https://kvsonlineadmission.kvs.gov.in/apps/ पर उपलब्ध है। ऐप डाउनलोड करने और इंस्टॉल करने के निर्देश उपरोक्त URL पर उपलब्ध होंगे। अभिभावकों से अनुरोध है कि वे पोर्टल और ऐप का उपयोग करने से पहले निर्देशों का सावधानी से पालन करें।

कक्षा दो एवं दो से ऊपर की कक्षाओं में स्थान रिक्त होने पर ही प्रवेश के लिए पंजीकरण दिनांक 08.04.2022 प्रातः 08:00 बजे से दिनांक 16.04.2022 सांय 4:00 बजे तक (ऑफलाइन मोड) द्वारा किया जा सकेगा।

के.वि.सं. वैबसाइट (https://kvsangathan.nic.in) पर उपलब्ध समय सारणी के अनुसार कक्षा XI के लिए आवेदन प्रपत्र संबंधित विद्यालय की वैबसाइट पर डाउनलोड हेतु उपलब्ध होगा।

सभी कक्षाओं के लिए आयु की गणना 31.03.2022 से होगी। कक्षाओं में सीटों का आरक्षण केंवि.सं. के प्रवेश दिशा-निर्देश के अनुसार किया जाएगा (https://kvsangathan.nic.in)। इस संबंध में अधिक जानकारी के लिए अभिभावक संबंधित केंद्रीय विद्यालय /मुख्यालय की वैबसाइट देखें।

वर्तमान में COVID-19 की परिस्थितियों को ध्यान में रखते हुए सक्षम अधिकारी (केंद्र/राज्य/स्थानीय) द्वारा जारी स्वास्थ्य संबंधी निर्देशों की अनुपालना में अभिभावकों से अनुरोध है कि वह विद्यालय में जाकर भीड़ एकत्रित न करें। प्रवेश संबंधी सभी सूचनाओं की जानकारी, पंजीकरण प्रपत्र प्राप्त करने के लिए विद्यालय /मुख्यालय की वैबसाइट निरंतर देखें। कक्षा दो एवं दो से ऊपर की कक्षाओं के लिए पूर्णतः भरा हुआ पंजीकरण प्रपत्र स्कैन कर संबंधित विद्यालय की ई मेल पर प्रेषित करें।

प्राचार्य द्वारा विद्यालय में बुलाए जाने पर निर्धारित समय अंतराल में ही प्रवेश प्रभारी/प्राचार्य से संपर्क करें।

॥ ಶ್ರೀ ವೆಂಕಟೇಶ್ವರಸ್ವಾಮಿ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ

ಜನನ: 11.09.1930

ಮರಣ: 02.02.2022

ಶ್ರೀಮತಿ ಜಿ.ಎಸ್. ಮುರಿಗೆಮ್ಮನವರು

(ದಿ॥ ಶ್ರೀ ಜಿ. ಶಿವಪ್ಪ ಮಾಜಿ ಶಾಸಕರು ಇವರ ಧರ್ಮಪತ್ನಿ)

ಶ್ರೀ ಜಿ.ಎಸ್. ಮಂಜುನಾಥ ಮಾಜಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಡಾ॥ ಜಿ.ಎಸ್. ಶಿವಕುಮಾರ್, ಭೀಮಸಮುದ್ರ, ಚಿತ್ರದುರ್ಗ ಜಿಲ್ಲೆ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ: 02.02.2022ನೇ ಬುಧವಾರ ರಾತ್ರಿ 10:45ಕ್ಕೆ ನಮ್ಮ ಪೂಜ್ಯ ತಾಯಿಯವರಾದ ಶ್ರೀಮತಿ ಜಿ.ಎಸ್. ಮುರಿಗೆಮ್ಮನವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 26.02.2022ನೇ ಶನಿವಾರ ಬೆಳಿಗ್ಗೆ 11:00 ಗಂಟೆಗೆ ಭೀಮಸಮುದ್ರದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಶ್ರೀಮತಿ ಮಂಜುಳಾ ಮತ್ತು ಜಿ.ಎಸ್. ಮಂಜುನಾಥ್
ಶ್ರೀಮತಿ ಜಿ.ಎಸ್ ಗಾಯತ್ರಿ ಮತ್ತು ಡಾ॥ ಜಿ.ಎಸ್. ಶಿವಕುಮಾರ್
ಶ್ರೀಮತಿ ಸುಲೋಚನಾ ಎಲ್. ಕರಜಗಿ & ಮಕ್ಕಳು
ಡಾ॥ ಗೀತಾ ಮೂರ್ತಿ ಮತ್ತು ಡಾ॥ ಗೌಡರ್ ಮೂರ್ತಿ & ಮಕ್ಕಳು
ಶ್ರೀಮತಿ ಉಮಾ ಟಿ. ಪ್ರಭು ಮತ್ತು ಟಿ.ಎಸ್. ಪ್ರಭುದೇವಪ್ಪ
ಶ್ರೀಮತಿ ಡಾ॥ ಸುನೀತ ಮತ್ತು ಡಾ॥ ಪ್ರವೀಣ್ ಎಲ್. ಕರ್ಜಗಿ & ಮಕ್ಕಳು
ಶ್ರೀಮತಿ ಡಾ॥ ಶಾಂತಲಾ ಮತ್ತು ಡಾ॥ ಅರುಣ್ ಕುಮಾರ್ ಅಜ್ಜಪ್ಪ & ಮಕ್ಕಳು
ಶ್ರೀಮತಿ ಡಾ॥ ಅರುಂಧತಿ ಮತ್ತು ಡಾ॥ ಪ್ರದೀಪ್
ಶ್ರೀ ಗಿರಿ ಟ್ರೇಡರ್ಸ್
ಶ್ರೀಮತಿ ಶೃತಿ ಗಿರಿ ಮತ್ತು ಗಿರಿ ಎಂ. ಜಾನಕಲ್ & ಮಕ್ಕಳು
ಶ್ರೀಮತಿ ಲೀಲಾ ಮತ್ತು ಟಿ.ಪಿ. ಅನುಪ್ & ಮಕ್ಕಳು
ಶ್ರೀಮತಿ ಸುಧಾ ಮತ್ತು ಮತ್ತು ಆರ್. ಪ್ರವೀಣ್ & ಮಕ್ಕಳು
ಶ್ರೀಮತಿ ಪೂರ್ಣಿಮಾ ಮತ್ತು ಟಿ.ಪಿ. ಅಭಿಷೇಕ್ & ಮಕ್ಕಳು
ಶ್ರೀಮತಿ ನಿಧಿ ಮತ್ತು ಕೆ.ವಿ. ಮೋಹನ್ & ಮಕ್ಕಳು
ಶ್ರೀಮತಿ ಅಂಕಿತ ಮತ್ತು ಡಾ॥ ವರುಣ್ & ಮಕ್ಕಳು
ಕು॥ ಸಿರಿ ಎಂ. ಜಾನಕಲ್
ಕು॥ ನಿಶ್ಚಯ್ ಎಸ್. ಜಾನಕಲ್
ಶ್ರೀ ಭೀಮಸಮುದ್ರ ಸುಪಾರಿ ಕಂಪನಿ

ಜಾನಕಲ್ ವಂಶಸ್ಥರು ಮತ್ತು ಪಟೇಲ್ ವಂಶಸ್ಥರು ಹಾಗೂ ಗ್ರಾಮಸ್ಥರು.

ಇಂದು ಮಕ್ಕಳ ವಿಜ್ಞಾನ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಇದೇ 25ರಂದು 29ನೇ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ಆಯೋಜಿಸಲಾಗಿದೆ.

ವಿದ್ಯಾರ್ಥಿಗಳನ್ನು ಭವಿಷ್ಯದ ವಿಜ್ಞಾನಿಗಳನ್ನಾಗಿ ರೂಪಿಸಲು ಮತ್ತು ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೇರಣೆ ನೀಡುವ ಉದ್ದೇಶದಿಂದ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಅಧ್ಯಕ್ಷ ಗಿರೀಶ ಕಡ್ಲೇವಾಡ ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 9ಕ್ಕೆ ನಡೆಯುವ ಸಮಾವೇಶದಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ 30 ಬಾಲ ವಿಜ್ಞಾನಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

'ಸುಸ್ಥಿರ ಬದುಕಿಗಾಗಿ ವಿಜ್ಞಾನ' ಎನ್ನುವ ಪ್ರಮುಖ ವಿಷಯವನ್ನು ಆಧಾರವಾಗಿರಿಸಿಕೊಂಡು ಈ ಸಮಾವೇಶ ಆಯೋಜಿಸಲಾಗಿದ್ದು, ವಿದ್ಯಾರ್ಥಿಗಳು ತಾವೇ ತಯಾರಿಸಿರುವ ಯೋಜನಾ ವರದಿಗಳನ್ನು ಮಂಡಿಸಲಿದ್ದಾರೆ' ಎಂದು ತಿಳಿಸಿದರು.

ಪ್ರತಿ ಜಿಲ್ಲೆಯಿಂದ ಅತ್ಯುತ್ತಮವಾದ 10 ಯೋಜನೆಗಳನ್ನು ರಾಜ್ಯಮಟ್ಟಕ್ಕೆ ಆಯ್ಕೆ ಮಾಡಲಾಗಿದೆ. ಈ ಬಾರಿ ಒಟ್ಟು 300 ಯೋಜನೆಗಳನ್ನು ರಾಜ್ಯಮಟ್ಟದಲ್ಲಿ ಆನ್‌ಲೈನ್ ಮೂಲಕ ಮಂಡಿಸಲಾಗಿತ್ತು. ಇದರಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದಿಂದ ತಲಾ 15ರಂತೆ ಅತ್ಯುತ್ತಮವಾದ 30 ಯೋಜನೆಗಳನ್ನು ರಾಷ್ಟ್ರಮಟ್ಟಕ್ಕೆ ತಜ್ಞರು ಆಯ್ಕೆ ಮಾಡಿದ್ದಾರೆ ಎಂದು ವಿವರಿಸಿದರು.

ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಬಾಲ ವಿಜ್ಞಾನಿಗಳೊಂದಿಗೆ ಇಸ್ರೊದ ನಿವೃತ್ತ ನಿರ್ದೇಶಕಿ ಟಿ.ಕೆ. ಅನುರಾಧಾ ಸಂವಾದ ನಡೆಸಲಿದ್ದಾರೆ. ಬಾಲವಿಜ್ಞಾನಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ವಿವರಿಸಿದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಫೆ.25ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಐಬಿಎಂ, ಗುರುಪ್ಪನಪಾಳ್ಯ, ಬಿ.ಜಿ. ರಸ್ತೆ, ಬಿಟಿಎಂ ಮೊದಲ ಹಂತ, ಮಡಿವಾಳ, ಮಾರುತಿ ನಗರ, ಬಿಸ್ಮಿಲ್ಲಾ ನಗರ ಸುತ್ತಮುತ್ತ ಪ್ರದೇಶಗಳು.

National Dairy Development Board

PB No. 40, Anand - 388001, Gujarat
Tel: 02692-260 148/149/160 Fax: 02692-260 159
Website: http://www.nddb.coop, Email: purchase@nddb.coop

INVITATION FOR BIDS (IFB)/ LOCAL COMPETITIVE BIDDING (LCB)

Bids are invited on behalf of Service Recipients/ NDDB from eligible bidders for the works listed below:

Sr. No.	Description of works/ Bid Reference	Estd. Cost (₹) incl GST/ Duration	Event Start/ Close Date	Bid submission / opening date & time
I	Design, Supply, Installation, Testing & Commissioning works for the following:-			
A	2 X 8 TPH CNG Cum LDO fired boiler and other accessories at Hyderabad Telangana. NDDB:HO:PUR:LCB:115/2021 (ET/115)	629 Lakh/ 12 Months	25.02.22/ 21.03.22	21.03.22 15:00 hrs. 21.03.22 15:30 hrs.
B	11/0.433 KV Substation for Bypass Protein plant at CFP Ghania Ke Banger, Punjab. NDDB:HO:PUR:LCB:116/2021 (ET/116)	46 Lakh/ 07 Months	25.02.22/ 21.03.22	21.03.22 15:00 hrs. 21.03.22 15:30 hrs.
C	Sewerage Treatment Plant at NDDB Bangalore NDDB:HO:PUR:LCB:109/2021 (ET/109)	72 Lakh/ 3 Months	25.02.22/ 21.03.22	21.03.22 15:00 hrs. 21.03.22 15:30 hrs.
II	Providing Security Services at NDDB Kolkata *Excl. GST NDDB:HO:PUR:LCB:112/2021 (ET/112)	85 Lakh*/ 12 Months	01.03.22/ 22.03.22	22.03.22 15:00 hrs. 22.03.22 15:30 hrs.

For further details pertaining to IFB and for downloading the bid document, please visit these websites: **www.nddb.coop** and **www.mstcecommerce.com/eprochome/nddb** For any clarification please contact **General Manager (Purchase), NDDB, Anand**-388001
NB: Any corrigendum/modification etc. will be posted only on these websites.

ಮಹಾಶಿವರಾತ್ರಿ
ಒಂದು ದೈವೀಕ ರಾತ್ರಿ
isha
1 ಮಾರ್ಚ್ 2022 | ಸಂಜೆ 6 ರಿಂದ ಮರುದಿನ ಮುಂಜಾನೆ 6 ರವರೆಗೆ

ಶಕ್ತಿಯುತ ರುದ್ರಾಕ್ಷವನ್ನು ಉಚಿತವಾಗಿ ಮನೆಯಲ್ಲಿಯೇ ಸ್ವೀಕರಿಸಿ
isha.co/rdk
Incredible India

ಮನೆಯಲ್ಲಿಯೇ ಇರಿ, ಸುರಕ್ಷಿತವಾಗಿರಿ
ನೇರಪ್ರಸಾರ ವೀಕ್ಷಿಸಿ
Kannada.sadhguru.org/msr
ಕನ್ನಡದ ಎಲ್ಲಾ ಟಿವಿ ಚಾನೆಲ್ ಗಳಲ್ಲಿ
Sadhguru Kannada
Sadhguru App
Elite Partner EBIXCASH हर खुशी के लिए काफी है Finance Insurance Travel
Co-Patners AXIS BANK Apollo HOSPITALS Apollo 24|7 SAVE SOIL
Support Patners SHRIRAM A WINNING RELATIONSHIP isha LIFE

Reliance Jewels
BE THE MOMENT

SETAT21ES

ದ ಡ್ರೀಮ್ ಡೈಮಂಡ್ ಸೇಲ್

25% ವರೆಗೆ ಕಡಿತ*
ವಜ್ರದ ಆಭರಣಗಳ ಬಿಲ್ಲಿನ ಮೌಲ್ಯದ ಮೇಲೆ
ಸೀಮಿತ ಅವಧಿಯ ಆಫರ್
*ನಿಯಮಗಳು ಹಾಗೂ ಷರತ್ತುಗಳು ಅನ್ವಯಿಸುತ್ತವೆ

SETAT21FK

ಈಗ ಇಲ್ಲಿಯೂ ಲಭ್ಯ : www.reliancejewels.com

ಬೆಂಗಳೂರು: ಬನಶಂಕರಿ, ನಂ. 296, ರಾಮ್ ಟವರ್, 100 ಅಡಿ ರಿಂಗ್ ರೋಡ್, 3ನೇ ಸ್ಟೇಜ್, 4ನೇ ಫೇಸ್. ಫೋನ್ : 080-26793505/26793506 | **ಜಯನಗರ,** ನಂ. 18/35, 4ನೇ ಬ್ಲಾಕ್, 11ನೇ ಮೇನ್. ಫೋನ್: 080-41681803/08 | **ಕೋರಮಂಗಲ,** ನಂ. 612, 80 ಅಡಿ ರಸ್ತೆ, 4ನೇ ಬ್ಲಾಕ್, ಫೋನ್: 080-41244550 **ಮಲ್ಲೇಶ್ವರಮ್,** ಮೊದಲ ಮಹಡಿ, ಮಂತ್ರಿ ಸ್ಕ್ವೇರ್ ಮಾಲ್, ಸಂಪಿಗೆ ರಸ್ತೆ. ಫೋನ್ : 080-22667110 | **ಮಾರತಹಳ್ಳಿ,** ಚಾಯ್ ಪಾಯಿಂಟ್ ಪಕ್ಕ, ಔಟರ್ ರಿಂಗ್ ರೋಡ್. ಫೋನ್: 080-42072752

ನಮ್ಮನ್ನು ಇಲ್ಲಿ ಫಾಲೋ ಮಾಡಿರಿ:

ಫಿಪೋಲ®
ದಿ ಮೀಟ್ ಸೂಪರ್‌ಸ್ಟೋರ್

ಫಿಪೋಲ ನಿಮಗಾಗಿ ನೀಡುತ್ತಿದೆ

ತಾಜಾ ಮಾಂಸ

ಬೆಂಗಳೂರಿನಲ್ಲಿ.

ಫಿಪೋಲ ಬೆಂಗಳೂರಿನಲ್ಲಿ ನಿಮಗಾಗಿ ತಾಜಾ ಮಾಂಸವನ್ನು ಒದಗಿಸಲಿದೆ. ಇದು ವ್ಯಾಪಕ ರೀತಿಯ ಚಿಕನ್, ಮಟನ್, ಸೀಫುಡ್, ಮ್ಯಾರಿನೇಡ್ಸ್, ಕೋಲ್ಡ್ ಕಟ್ಸ್ ಮತ್ತು ಇನ್ನೂ ಹಲವಾರನ್ನು ಒಳಗೊಂಡಿದೆ! ಸುರಕ್ಷಿತ ಮತ್ತು ಸ್ವಚ್ಛ ಪರಿಸರದಲ್ಲಿ ವೃತ್ತಿಪರರಿಂದ ಎಲ್ಲವನ್ನೂ ಕತ್ತರಿಸಿ ಸಂಗ್ರಹಿಸಲಾಗುತ್ತದೆ.

ಉದ್ಘಾಟನಾ ಕೊಡುಗೆಗಳು*

ಚಿಕನ್	ಮಟನ್
~~₹199/-~~ ₹169/- ಪ್ರತಿ ಕೆಜಿ	~~₹789/-~~ ₹699/- ಪ್ರತಿ ಕೆಜಿ
ಸೀಫುಡ್ ಫ್ಲಾಟ್ 20% ಆಫ್	ಮ್ಯಾರಿನೇಡ್ ಮಾಂಸಗಳು ಫ್ಲಾಟ್ 50% ಆಫ್

ತಾಜಾ. ಫ್ರೋಜನ್ ಅಲ್ಲ | ನೀವು ಆರ್ಡರ್ ಮಾಡಿದ ನಂತರ ಆಗಷ್ಟೇ ಕತ್ತರಿಸಲಾಗುವುದು | ಆ್ಯಂಟಿಬಯೋಟಿಕ್ ಮತ್ತು ಪ್ರಿಸರ್ವೇಟಿವ್ ಮುಕ್ತ ಮಾಂಸ | ಬೆಂಗಳೂರಿನಾದ್ಯಂತ 90 ನಿಮಿಷಗಳಲ್ಲಿ ಡೆಲಿವರಿ

90 ನಿಮಿಷಗಳು ಡೆಲಿವರಿ | Halal | 26 ಅಂಗಡಿಗಳು ಬೆಂಗಳೂರಿನಾದ್ಯಂತ! | ಡೆಲಿವರಿ ಶುಲ್ಕಗಳಿಲ್ಲ

ಚಿಕನ್, ಮಟನ್, ಸೀಫುಡ್, ಮ್ಯಾರಿನೇಟೆಡ್ ಮಾಂಸಗಳು, ರೆಡಿ-ಟು-ಫ್ರೈ, ಪರ್ಯಾಯ ಮಾಂಸಗಳು.

ಫಿಪೋಲ ಸ್ಟೋರ್ಸ್: ಎಇಸಿಎಸ್ ಲೇಔಟ್ | ಬನಶಂಕರಿ | ಬಿಟಿಎಂ ಲೇಔಟ್ | ಎಲೆಕ್ಟ್ರಾನಿಕ್ ಸಿಟಿ | ಫ್ರೇಜರ್ ಟೌನ್ | ಎಚ್‌ಎಸ್‌ಆರ್ ಲೇಔಟ್ | ಇಂದಿರಾ ನಗರ್ | ಜಯನಗರ್ | ಕಮ್ಮನಹಳ್ಳಿ | ಕೆ.ಆರ್. ಪುರಂ | ರಾಜರಾಜೇಶ್ವರಿ ನಗರ್ | ವರ್ತೂರ್ ರಸ್ತೆ | ಯಲಹಂಕ | ಯಶವಂತಪುರ್ ಬನ್ನೇರಘಟ್ಟ ರಸ್ತೆ | ಕಗ್ಗದಾಸಪುರ | ರಾಮಮೂರ್ತಿ ನಗರ್

ಶೀಘ್ರದಲ್ಲೇ ಪ್ರಾರಂಭವಾಗಲಿದೆ : ಬೇಗೂರ್ ಮುಖ್ಯ ರಸ್ತೆ | ಪೀಣ್ಯ | ಹೆಣ್ಣೂರ್ ಮುಖ್ಯ ರಸ್ತೆ | ಜೆ.ಪಿ.ನಗರ್ | ಶಾಂತಿ ನಗರ್ | ಕೆಂಗೇರಿ | ಸಹಕಾರ್ ನಗರ್ | ಸರ್ಜಾಪುರ್ ರಸ್ತೆ | ವೈಟ್‌ಫೀಲ್ಡ್

ಫಿಪೋಲ ಎಕ್ಸ್‌ಕ್ಲೂಸಿವ್ ಸ್ಟೋರ್: ಶೀಘ್ರದಲ್ಲೇ ಕೋರಮಂಗಲಾದಲ್ಲಿ ಪ್ರಾರಂಭವಾಗಲಿದೆ.

ಚೆನ್ನೈ | ಕೊಯಂಬತ್ತೂರು | ಪುದುಚೇರಿ | ವೆಲ್ಲೂರು | ತಿರುಪುರ್ | ಹೈದರಾಬಾದ್
ಕೊಚಿನ್, ತಿರುವನಂತಪುರಂ ಮತ್ತು ಪುಣೆಯಲ್ಲಿ ಶೀಘ್ರದಲ್ಲೇ ತೆರೆಯಲಾಗುತ್ತದೆ

WWW.FIPOLA.IN
ಈ ವಿಳಾಸಕ್ಕೆ ಆನ್‌ಲೈನ್ ಮೂಲಕ ಆರ್ಡರ್ ಮಾಡಿ

ದಕ್ಷಿಣ ಭಾರತದಾದ್ಯಂತ 60 ಅಂಗಡಿಗಳು

ನಮ್ಮ ಆಪ್ ಡೌನ್‌ಲೋಡ್ ಮಾಡಿ ಕೊಳ್ಳಿ

ಈಗಲೇ ಆರ್ಡರ್ ಮಾಡಿ DUNZO SWIGGY ಕರೆ ಮಾಡಿ ಅಥವಾ 76672 76672

ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಘಟನೆ • ಶಿಕ್ಷಣ ಇಲಾಖೆ ಅಧಿಕಾರಿಗಳ ಭೇಟಿ

ಸಿಖ್ ವಿದ್ಯಾರ್ಥಿನಿ 'ಟರ್ಬನ್' ಧರಿಸಿದ್ದಕ್ಕೆ ತಗಾದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಸಿಖ್ ವಿದ್ಯಾರ್ಥಿನಿಯೊಬ್ಬರು ಧರಿಸಿದ್ದ 'ಟರ್ಬನ್' ತೆಗೆಸುವಂತೆ ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರು ತಗಾದೆ ತೆಗೆದಿದ್ದಾರೆ. ಈ ಘಟನೆ ನಡೆದ ಬಳಿಕ ಶಿಕ್ಷಣ ಇಲಾಖೆ ಅಧಿಕಾರಿಗಳು ಕಾಲೇಜಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದ್ದಾರೆ.

ಹಿಜಾಬ್ ವಿಚಾರವಾಗಿ ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶವನ್ನು ಕಾಲೇಜು ಆಡಳಿತ ಮಂಡಳಿ ಪಾಲಿಸುತ್ತಿದೆ. ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರನ್ನು ಹಿಜಾಬ್ ತೆಗೆಯಿಸಿ, ನಂತರ ತರಗತಿ ಪ್ರವೇಶಿಸುವಂತೆ ನೋಡಿಕೊಳ್ಳುತ್ತಿದೆ. ಈ ನಡುವೆಯೇ ಸಿಖ್ ವಿದ್ಯಾರ್ಥಿನಿಯೊಬ್ಬರು 'ಟರ್ಬನ್' ಧರಿಸಿದ್ದಕ್ಕೆ ಕೆಲ ವಿದ್ಯಾರ್ಥಿನಿಯರು ಆಕ್ಷೇಪ ವ್ಯಕ್ತಪಡಿಸಿದ್ದು, ಇದೇ ವಿಚಾರವಾಗಿ ಪರ-ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿವೆ.

'ಪಿಯು ಕಾಲೇಜು ವಿದ್ಯಾರ್ಥಿಗಳ ಸಂಘದ ಅಧ್ಯಕ್ಷೆಯೂ ಆಗಿರುವ ಸಿಖ್ ವಿದ್ಯಾರ್ಥಿನಿ, ನಿತ್ಯವೂ ಟರ್ಬನ್ ಧರಿಸಿ ಬರುತ್ತಾರೆ. ಬುಧವಾರವೂ ತರಗತಿಗೆ ಟರ್ಬನ್ ಧರಿಸಿಯೇ ಹಾಜರಾಗಿದ್ದರು. ಟರ್ಬನ್ ತೆಗೆಸುವಂತೆ ಪ್ರಾಂಶುಪಾಲರನ್ನು ಒತ್ತಾಯಿಸಿದ್ದ ಮುಸ್ಲಿಂ ಸಮುದಾಯದ ಕೆಲ ವಿದ್ಯಾರ್ಥಿನಿಯರು, 'ನಮ್ಮ ಹಿಜಾಬ್ ತೆಗೆಸಿ ತರಗತಿಯೊಳಗೆ ಕಳುಹಿಸುತ್ತೀರಾ. ಆದರೆ, ಟರ್ಬನ್ ಧರಿಸುವ ಅವರನ್ನು ಏಕೆ ಒಳಗೆ ಬಿಡುತ್ತೀರಿ ಎಂಬುದಾಗಿ ಪ್ರಶ್ನಿಸಿದ್ದರು' ಎಂದು ಕಾಲೇಜು ಮೂಲಗಳು ಹೇಳಿವೆ.

ಸಿಖ್ ವಿದ್ಯಾರ್ಥಿನಿ ಟರ್ಬನ್ ಧರಿಸುವುದಕ್ಕೂ ಮುಸ್ಲಿಂ ಸಮುದಾಯದ ಕೆಲ ವಿದ್ಯಾರ್ಥಿನಿಯರು ಆಕ್ಷೇಪ ವ್ಯಕ್ತಪಡಿಸಿದ್ದರು. ಟರ್ಬನ್ ತೆಗೆಯುವಂತೆ ಒತ್ತಡ ಹೇರಲಿಲ್ಲ
ಡಾ. ಎಂ. [illegible]
ಕಾಲೇಜು ಆಡಳಿತಾಧಿಕಾರಿ

'ಕೆಲವರ ತಗಾದೆಯಕ್ಕೆ ಮಣಿದಿದ್ದ ಪ್ರಾಂಶುಪಾಲರು, 'ಟರ್ಬನ್ ತೆಗೆದು ತರಗತಿ ಒಳಗೆ ಹೋಗಬಹುದೆ' ಎಂದು ಸಿಖ್ ವಿದ್ಯಾರ್ಥಿನಿಯನ್ನು ಕೇಳಿದ್ದರು. ಆಗ ವಿದ್ಯಾರ್ಥಿನಿ, 'ನಮ್ಮದು ಸಿಖ್ ಸಮುದಾಯ. ಟರ್ಬನ್ ಧರಿಸುವುದು ಕಡ್ಡಾಯ. ಇದನ್ನು ತೆಗೆಯುವುದಿಲ್ಲ' ಎಂದಿದ್ದರು. ವಿಷಯ ತಿಳಿದು ಕಾಲೇಜಿಗೆ ಬಂದಿದ್ದ ಪೋಷಕರು, ಅದೇ ಮಾತು ಹೇಳಿದ್ದರು' ಎಂದು ಮೂಲಗಳು ತಿಳಿಸಿವೆ.

'ಕಾಲೇಜಿಗೆ ಬಂದಿದ್ದ ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರ ಪೋಷಕರು, ಟರ್ಬನ್ ರೀತಿಯಲ್ಲೇ ಹಿಜಾಬ್‌ಗೂ ಅವಕಾಶ ನೀಡಬೇಕೆಂದು ಕೋರಿದ್ದರು. ಹಿಜಾಬ್‌ಗೆ ಅವಕಾಶವಿಲ್ಲವೆಂದು ಸ್ಪಷ್ಟಪಡಿಸಿದ್ದ ಪ್ರಾಂಶುಪಾಲರು ಅವರನ್ನು ಹಿಂದಕ್ಕೆ ಕಳುಹಿಸಿದ್ದರು' ಎಂದು ಮೂಲಗಳು ವಿವರಿಸಿವೆ.

ಉಪನಿರ್ದೇಶಕ ಭೇಟಿ: ಶಿಕ್ಷಣ ಇಲಾಖೆ ಉಪನಿರ್ದೇಶಕರು ಕಾಲೇಜಿಗೆ ಭೇಟಿ ನೀಡಿದರು. ವಿದ್ಯಾರ್ಥಿನಿಯರು ಹಾಗೂ ಆಡಳಿತ ಮಂಡಳಿ ಸದಸ್ಯರ ಸಭೆ ನಡೆಸಿ ಮಾಹಿತಿ ಪಡೆದುಕೊಂಡರು.

'ಹಿಜಾಬ್ ಚರ್ಚೆಗೆ ಹಿಂದೇಟು ಏಕೆ'

ಬೆಂಗಳೂರು: ಕಾಂಗ್ರೆಸ್ ಪಕ್ಷ ಪಿಲ್ಲೆ ನೆವ ಮುಂದಿಟ್ಟುಕೊಂಡು ಹಿಜಾಬ್ ವಿಷಯದ ಬಗ್ಗೆ ಚರ್ಚಿಸದೇ ವಿಧಾನಮಂಡಲದ ಕಲಾಪವನ್ನು ಬಹಿಷ್ಕರಿಸಿದರು. ಅವರು ಆ ವಿಷಯದ ಬಗ್ಗೆ ಚರ್ಚೆ ನಡೆಸಲು ಹಿಂದೇಟು ಹಾಕಿದ್ದು ಏಕೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಪ್ರಶ್ನಿಸಿದರು.

ರಾಷ್ಟ್ರಧ್ವಜ ಇಳಿಸಿ ಕೇಸರಿ ಧ್ವಜ ಹಾರಿಸಲಾಗಿದೆ ಎಂದು ಸಿದ್ದರಾಮಯ್ಯ, ಬಿ.ಕೆ.ಹರಿಪ್ರಸಾದ್ ಮತ್ತು ಡಿ.ಕೆ.ಶಿವಕುಮಾರ್ ಅವರು ಸುಳ್ಳು ಮಾಹಿತಿಯನ್ನು ಪದೇ ಪದೇ ಹೇಳಿ ಸತ್ಯ ಎಂಬಂತೆ ಬಿಂಬಿಸಿದರು. ಆ ಮೂಲಕ ವಿಧಾನಮಂಡಲದ ಕಲಾಪ ನಡೆಯದಂತೆ ತಡೆದು ಸಾರ್ವಜನಿಕರ ಹಣ ಪೋಲು ಮಾಡಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

ಕಾಂಗ್ರೆಸ್‌ನವರು ಹಿಂದೆ ವೀರೇಂದ್ರ ಪಾಟೀಲ್, ಕೆ.ಸಿ.ರೆಡ್ಡಿ ಮತ್ತಿತರ ಮುಖಂಡರನ್ನು ಒಂದು ಸ್ಪಷ್ಟ ಸಂಸ್ಕೃತಿ, ಆಚಾರವನ್ನು ಇಟ್ಟುಕೊಂಡಿದ್ದರು. ರಾಜಕಾರಣವಾಗಿ ಕೇಸರಿ ಬಣ್ಣ ಮಾಡುವುದೇನಾ? ಕಾಂಗ್ರೆಸ್ ಎಲ್ಲ ವಿಷಯಗಳನ್ನು ರಾಜಕೀಯ ಬೆರೆಸುತ್ತಿದೆ. ಕಾನೂನು, ವ್ಯವಸ್ಥೆಗೆ ಗೌರವ ಕೊಡುತ್ತಿಲ್ಲ, ಸಚಿವ ಈಶ್ವರಪ್ಪ ಅವರ ಮೇಲೆ ಹಲ್ಲೆ ಮಾಡಲು ಶಿವಕುಮಾರ್ ಮುಂದಾಗಿದ್ದರು. ಮಾತಿನಲ್ಲಿ ವಿಚಾರ ಮಂಡಿಸದೇ ದೈಹಿಕವಾಗಿ ಶಕ್ತಿ ಪ್ರಹಾರ ಮಾಡುವ ಪ್ರವೃತ್ತಿ ತೋರಿದರು ಎಂದು ಅಶ್ವತ್ಥನಾರಾಯಣ ಹರಿಹಾಯ್ದರು.

ಕಾಂಗ್ರೆಸ್‌ನ ತುಷ್ಟೀಕರಣ ನೀತಿಗೆ ಜನರು ಈಗಾಗಲೇ ಪಾಠ ಕಲಿಸಿದ್ದಾರೆ. ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಮುಂದಾಲೋಚನೆ ಅಟ್ಟ ಪಡಿಸುವುದರ ಜತೆಗೆ ಅವರ ಉತ್ತಮ ಭವಿಷ್ಯಕ್ಕೆ ಕಲ್ಲು ಹಾಕುವ ದುರುದ್ದೇಶದ ಪ್ರಯತ್ನ ಇದಾಗಿದೆ ಎಂದೂ ಹೇಳಿದರು.

ಪಿಎಫ್‌ಐ ಮತ್ತಿತರ ಸಮಾಜದ್ರೋಹಿ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಈ ಸಂಘಟನೆಗಳಿಗೆ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಪಕ್ಷವು ರಕ್ಷಣೆ ನೀಡಿ ಪೋಷಿಸಿಕೊಂಡು ಬಂದಿವೆ. ಇಂತಹ ರಾಷ್ಟ್ರದ್ರೋಹಿ ಸಂಘಟನೆಗಳ ಜತೆ ಬಿಜೆಪಿ ಎಂದಿಗೂ ಕೈಜೋಡಿಸುವುದಿಲ್ಲ ಎಂದರು.

'ಹೈಕೋರ್ಟ್ ಆದೇಶ ಪಾಲನೆ'

'ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶವನ್ನು ಪಾಲಿಸುತ್ತಿದ್ದೇವೆ. ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ತರಗತಿಗೆ ಹಾಜರಾಗುತ್ತಿದ್ದಾರೆ' ಎಂದು ಕಾಲೇಜು ಪ್ರಾಂಶುಪಾಲರಾದ ಬಬಿತಾ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವಿದ್ಯಾರ್ಥಿನಿಯೊಬ್ಬರು ಟರ್ಬನ್ ಧರಿಸಿದ್ದರು. ಹಿಜಾಬ್ ತೆಗೆದ ರೀತಿಯಲ್ಲೇ ಟರ್ಬನ್ ತೆಗೆಸುವಂತೆ ಕೆಲ ವಿದ್ಯಾರ್ಥಿನಿಯರು ಮನವಿ ಮಾಡಿದ್ದರು. ಆ ವಿದ್ಯಾರ್ಥಿನಿಯನ್ನು ಕೇಳಿದಾಗ, ಟರ್ಬನ್ ತೆಗೆಯುವುದಿಲ್ಲ ಎಂದರು. ಇದು ನಮ್ಮ ಮನವಿ ಮಾತ್ರವಾಗಿತ್ತು, ಟರ್ಬನ್ ತೆಗೆಸುವ ಉದ್ದೇಶವಿರಲಿಲ್ಲ. ಸದ್ಯಕ್ಕೆ ಕಾಲೇಜಿನಲ್ಲಿ ಯಾವುದೇ ಗೊಂದಲ ಇಲ್ಲ' ಎಂದರು.

ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಖಂಡನೆ

'ಸಿಖ್ ಸಮುದಾಯದ ವಿದ್ಯಾರ್ಥಿನಿ ಟರ್ಬನ್ ಧರಿಸುವುದಕ್ಕೆ ಕಾಲೇಜು ಆಡಳಿತ ಮಂಡಳಿ ತಡೆಯೊಡ್ಡಿದ್ದು, ವೈಯಕ್ತಿಕ ಹಾಗೂ ಧಾರ್ಮಿಕ ಸ್ವಾತಂತ್ರ್ಯದ ಹರಣ' ಎಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್‌ಐ) ಸಂಘಟನೆ ಹೇಳಿದೆ. ಪತ್ರಿಕಾ ಪ್ರಕಟಣೆ ನೀಡಿರುವ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಅಥಾವುಲ್ಲಾ ಪುಂಜಾಲಕಟ್ಟೆ, 'ಹೈಕೋರ್ಟ್ ಮಧ್ಯಂತರ ಆದೇಶವನ್ನು ದುರುಪಯೋಗಪಡಿಸುತ್ತಿರುವ ಇಂತಹ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

'ಟರ್ಬನ್ ಸಾಂವಿಧಾನಿಕ ಹಕ್ಕು'

'ಟರ್ಬನ್ ಧರಿಸುವುದು ಸಿಖ್ ಸಮುದಾಯದವರ ಸಾಂವಿಧಾನಿಕ ಹಕ್ಕು. ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶ ಹಿಜಾಬ್‌ಗೆ ಮಾತ್ರ ಸಂಬಂಧಿಸಿದ್ದು' ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದ್ದಾರೆ.

ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ನಡೆದ ಘಟನೆಗೆ ಪ್ರತಿಕ್ರಿಯಿಸಿರುವ ಅವರು, ಈ ಬಗ್ಗೆ ವರದಿ ಪಡೆಯುವುದಾಗಿ ತಿಳಿಸಿದ್ದಾರೆ.

ಐಟಿಐ ಕಾರ್ಮಿಕರ ಹೋರಾಟದಲ್ಲಿ ಪಾಲ್ಗೊಂಡ ಜನರು

ಐಟಿಐ ಕಾರ್ಮಿಕರ ಅಹೋರಾತ್ರಿ ಹೋರಾಟ 86ನೇ ದಿನಕ್ಕೆ

ಕೆ.ಆರ್.ಪುರ: ಐಟಿಐ ಕಾರ್ಖಾನೆಯಲ್ಲಿ 80 ಕಾರ್ಮಿಕರನ್ನು ಕಾನೂನು ಬಾಹಿರವಾಗಿ ಕೆಲಸದಿಂದ ತೆಗೆದು ಹಾಕಿರುವುದನ್ನು ವಿರೋಧಿಸಿ ಐಟಿಐ ಕಾರ್ಮಿಕರು ನಡೆಸುತ್ತಿರುವ ಅಹೋರಾತ್ರಿ ಹೋರಾಟ 86ನೇ ದಿನಕ್ಕೆ ಕಾಲಿಟ್ಟಿದೆ.

ಕಾರ್ಮಿಕ ಪದ್ಧತಿ ಮತ್ತು ಹೊಸ ಮಾದರಿಯ ಜೀತ ಪದ್ಧತಿ ವಿರುದ್ಧ ರೈತ, ದಲಿತ ಮತ್ತು ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಐಟಿಐ ಕಾರ್ಪೊರೇಟ್ ಕಚೇರಿ ಎದುರು 800ಕ್ಕೂ ಹೆಚ್ಚು ಕಾರ್ಮಿಕರು ಸಮಾವೇಶಗೊಂಡು ಪ್ರತಿಭಟಿಸಿದರು.

ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ಸದಸ್ಯ ಕ್ಲಿಫ್ಟನ್ ಡಿ' ರೊಜಾರಿಯೊ ಮಾತನಾಡಿ, 'ಗುತ್ತಿಗೆ ಪದ್ಧತಿಯನ್ನು ಕಿತ್ತೊಗೆಯಬೇಕಿದೆ. ಗುತ್ತಿಗೆ ಪದ್ಧತಿಯು ಆಧುನಿಕ ಗುಲಾಮಗಿರಿಯಾಗಿದೆ. ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ಸಾಂಸ್ಥೀಕರಣಗೊಳಿಸುವ ಮೋದಿ ಸರ್ಕಾರವು ಕಾರ್ಮಿಕ ಸಂಹಿತೆಗಳನ್ನು ತರುತ್ತಿದೆ. ಸಂವಿಧಾನ ಮತ್ತು ಕಾರ್ಯಕರ್ತರ ಏಕತೆಗೆ ಧಕ್ಕೆ ತರುವ ಬಿಜೆಪಿಯ ಕೋಮುದ್ವೇಷಕ್ಕೆ ಬಲಿಯಾಗಬೇಡಿ' ಎಂದು ಕಾರ್ಯಕರ್ತರಿಗೆ ಎಚ್ಚರಿಕೆ ನೀಡಿದರು.

ದಲಿತ ಸಂಘರ್ಷ ಸಮಿತಿಯ ಮುಖಂಡ ಮಾವಳ್ಳಿ ಶಂಕರ್, 'ಸರ್ಕಾರವು ಕಾರ್ಪೊರೇಟ್ ಮತ್ತು ಕೋಮುವಾದಿಗಳ ಪರವಾಗಿದೆ. ಜನರನ್ನು ಜಾತಿ ಮತ್ತು ಧರ್ಮದ ಆಧಾರದ ಮೇಲೆ ವಿಭಜಿಸಿ ಬಡ ಜೀವಗಳನ್ನು ಬಲಿ ಪಡೆಯುತ್ತಿದೆ. ಇದನ್ನು ಕಾರ್ಮಿಕರು ಗುರುತಿಸಬೇಕು' ಎಂದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿ.ಸಿ.ಬಯ್ಯಾರೆಡ್ಡಿ, ಎಐಟಿಯುಸಿ ಸದಸ್ಯ ಮಹದೇವನ್, ಸಿಐಟಿಯು ವರಲಕ್ಷ್ಮಿ, ಮೀನಾಕ್ಷಿ ಸುಂದರಂ, ಗೋಪಾಲಗೌಡ, ಕ. ರಾ. ರೈತ ಸಂಘದ ಮಂಜುನಾಥ್, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಸಂಚಾಲಕ ಕೆ.ವಿ.ಭಟ್ ಇದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commercial Building

Anjanapura

SALE BDA 40x60 Anjanapura 8th Blk, commercial complex, Rate 1.28Cr also 8th Blk, North facing 95 lakh Nego. Contact: 9620041313/ 9945373839

Commercial Land

Kengeri

50×80 BDA site for sale in Kempegowda Layout kengeri. Contact 9606791121

Flat

Kengeri

APARTMENT FOR SALE in Kengeri Upanagar. 3 BHK fully furnished. 1330 SqFt carpet area, 2 Car parking, Modular Kitchen. 70L (Negotiable). Contact: 9980009270

Wilson Garden

WILSON GARDEN 7th Cross, 3BHK Luxury flat for sale, 1650 sftwith high-end interior, With 2 carpark 500 mtrs from Metro station, 2.40 Crores. Call: 8884855000.

Jayanagar

JAYANAGAR 4TH 'T'Block, 2 BHK Apartment for Sale, 1580sft.,Near Cakewala, 10,000/-Sft. Contact- 9886655869.

Sites

Anjanapura

SALE BDA 30X40 Anjanapura 11 Block North Facing 6500/ Also 20X30 2nd Block 30 lakh negotiable, good location, near Bannerghatta Road. 9945373839/ 9620041313

Banashankari

SALE BDA 30x40 BSK 6th stage 9th Block west facing Rate 64 lakh also 20x30 south facing 30 feet Road 39 lakh. 9945373839/ 9620041313

Nagarabhavi

SALE NAGARBAVI, ITI, Chandra Layout BDA 30x40 Ground Parking, Lift, Room 1st, 2nd, 3rd, Triplex 4 BHK Fully Furnished, Italian Marble: 9663746333/ 9449812176

Vishweshwariah Layout

VISHVESHWARAIAH LAYOUT 1st Blk, Site #722, 50x80 west facing 100Ft road, commerical good location immd. construction 13,000/- nego, 9845132011/ 9663554448

32X48 WEST FACING SITE SALE, BBMP A-KHATA, ATTACHED 8TH BLOCK S.M. VISHWESHWARAIAH LAYOUT. CALL: 9845139576

Industrial & Factory

General

SALE/ RENT. Peenya- 10000 to 25000 sqft. Dobespet- half acre to 20 acres. NAIDU: 9902030789

J P Nagar

SALE- INDUSTRIAL PLOT 4000/ 6000/ 8000sft Pipeline Road, Jaraganahalli, near JP-Nagar Metro station. Call Verna Developers: 9620253180/ 9353128035

BUILDERS ESSENTIAL

Building Contractors

CONSTRUCTION OF residential and commercial buildings done. Architect designed, Vaastu compliant, Model based, Fast track construction and Genuine materials. Also STRUCTURE construction is done at 40-45% of the total building cost. Elan Constructions: 9980883950

JOB OPPORTUNITIES

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

General

WANTED- A leading NEET Training Academy of Bangalore is looking for Telecallers with min 5 years of experience. Should be fluent in English, Kannada and Hindi. Interested candidates may contact: 7411966445 or 8660344276

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Hospital & Medical Jobs

FULL TIME Dental Assistant needed for the reputed Clove Dental chain of clinics. Role includes travelling to different clinics in 8km radius whenever required. Benefits: PF, ESI, travel reimbursement when sent to multiple clinics. Base location: Kanakapura and Basaveshwara Nagar. Contact on: 8971773888/ 9611546440/ 8309552991.

Overseas

JOBS IN EU overseas Email Resume: andrewmanager@swedishkott.com Contact: 8122183425

Part-Time Jobs

THOSE WHO Are Lost Job, MNC Provide Work From Home 30 to 35K: 7019215243/ 9886641282

Wanted

WANTED TEMPLE PRIEST/ Poojari for Krishna And Ganesha Temple, Doddabommasandra Near BEL-Factory: 8884488887/ 9035815667

AUTOMOTIVE

Four Wheelers Selling

Toyota

ACCIDENT VEHICLE KA-05-MS-1960, Innova 2.5G, 2015. Contact :9844166795. Reg post

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted& Agriculture Lands Call: 7411265189

WANTED BUSINESS Partner Non Veg Hotel 5 to 10 Lakhs Investment Daily Income: 9606701007/ 8892501007

PUBLIC NOTICE

PUBLIC NOTICE

This is to inform the public that my client is purchasing from **Purnima N.** W/o. Late Lakshminarasimhaiah N. Aged about 47 years, Residing at No. 23/A, New No. 9, 6th Main, 2nd Cross, Katriguppe East, BSK 3rd Stage, Bangalore - 560 085, more fully described in the Schedule below and hereinafter referred to as "Schedule Property". If any person has any objections, right, title, interest or ownership over the above property and for purchase of Schedule Property by my client, the same shall be intimated/ communicated to the undersigned Advocate in writing with documentary proof of their claim/objections within **7 (Seven) days** from the date of this notice. If no objections are received from any person within the aforesaid time, my client will proceed further to complete the sale transaction as if there are no objections from any one and thereafter no claim will be entertained from any person by my client.

SCHEDULE PROPERTY

All that piece and parcel of immovable property No 9 situated at No. 23/A, New No. 9, 6th Main, 2nd Cross, Katriguppe East, BSK 3rd Stage, Bangalore - 560 085 at measuring East to West 30 Feet and North to South - 40 feet and bounded on the: East by: Property No 40, West by: Property No.23 North by: G. Veerappa Property South by: BDA Road

U. R. Nayak, Advocate
11, Pattallamma Temple Street,
Basavanagudi, Bangalore-560 004
Mobile: 9343752537
Bangalore
Date: 25-02-2022

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

SEARCH FOR MISSING PERSON

General Public is hereby informed that **Mr. Hemanth Kumar H V** S/o Venkatesh H R worked us with as Assistant Manager-Business Development from 20-Aug-2020. As per records he was residing at #23/2, Vijayalakshmi Layout, Abbigere, Jalahalli West, Bangalore-560015, Ph no: +91-9353374278 is missing since 28-01-2021 with company laptop and cash amount of 1.50 Lakshs from **Indus Intex Pvt Ltd, Bangalore.** In this regard a case GSC No: P01349210600194 dated 25-03-2021 has lodged at PS.RMC yard, Bangalore. Sincere efforts have been made by local police to trace out the missing **Mr. Hemanth Kumar H V**

If anyone has any information about this missing person please inform undersigned. Ph No: 080-40902226/41229897

PERSONAL

Change of Name

I,DR.MYTHILI KRISHNAMURTHY R/a E10/2,Vijay Kiran Apartment,32 Victoria-Road, Bangalore-47, have-changed my-minor Son's name-from SYHAN D'SOUZA KRISHNAMURTHY to SYHAN KRISHNAMURTHY,for all-purposes. vide-affidavit dated 24-2-2022,before Notary Lakshminarayana, Bangalore.

I,CALVIN MOHAN residing at No.11A,Ave maria,4th 'B'Cross, Muniswamappa Road, Banjara-Layout, Hormavu, Bangalore-43 have changed my-name-to Calvin Jude vide-affidavit dated.16-02-2022 before Notary Uday Kumar.K Bangalore.

I, NIHARIKA D/o Bhrungeesh. N aged 31 years, R/at 409, 2nd floor, flat #4, 7th A main, HRBR LAYOUT, FIRST BLOCK, KALYANA NAGARA, BANGALORE-43, have changed my name as Niharika. B vide affidavit dated 23.2.2022 before Addl. Chief Metropolitan Magistrate, Small causes court, Bangalore.

Lost

LOST

I, Parthasarathy S. have misplaced Sale Deed with Document No. Identification: Site No.67, 68, 69 and 70 Survey No. 581/1, 582/1 and 582/2 situated at Nallur Village, Hosur **Finders please contact: 9035482996**

ಕಳೆದಿದೆ

ವಿ. ಕೃಷ್ಣಪ್ಪ, ಬಿನ್ ಲೇಟ್ ವೆಂಕಟರಮಣಪ್ಪ ಬೊಮ್ಮಸಂದ್ರ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ ಇಲ್ಲಿ ವಾಸವಾಗಿದ್ದು ದಿನಾಂಕ 12-07-2017 ರಂದು ಬೊಮ್ಮಸಂದ್ರ ದಿಂದ ಬೆಂಗಳೂರಿಗೆ ಬಸ್ಸಿನಲ್ಲಿ ಹೋಗುತ್ತಿದ್ದಾಗ ಹೆಬ್ಬಗೋಡಿ ಹತ್ತಿರ ನನ್ನ ವಿಭಾಗದ ಪತ್ರ ಅದರ ನಂ. ಜೆಗಿಎನ್-1-03948-2013-14/ ಸಿಡಿ ನಂ. ಜೆಗಿಎನ್ ಡಿ319 ದಾಖಲಾತಿಗಳು ಕಳೆದುಹೋಗಿರುತ್ತದೆ. ಜಿ.ಎಸ್.ಸಿ (GSC No) PO1333170601160 ಕಂಪ್ಲೆಂಟ್ ದಿನಾಂಕ: 03-12-2017. ಯಾರಿಗಾದರೂ ಸಿಕ್ಕಿದ್ದಲ್ಲಿ ಸಂಪರ್ಕಿಸಿ: 9845798200 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ.

DH DECCAN HERALD ಪ್ರಜಾವಾಣಿ

BOOK YOUR REAL ESTATE
Classified Advertisement
In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಪ್ರೆಸ್‌ಕ್ಲಬ್ ಆಫ್ ಬೆಂಗಳೂರು: ಸಾಧಕರಿಗೆ ಪ್ರಶಸ್ತಿ ಪ್ರದಾನ

'ಪ್ರಜಾಪ್ರಭುತ್ವದ ಜೀವಾಳವೇ ಮಾಧ್ಯಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರೋಗ್ಯಕರ ಸಮಾಜ ನಿರ್ಮಾಣ ಮತ್ತು ಅಭಿವೃದ್ಧಿಯಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರವಹಿಸುತ್ತಿವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಗುರುವಾರ ಆಯೋಜಿಸಿದ್ದ ವರ್ಷದ ವ್ಯಕ್ತಿ ಮತ್ತು ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಪ್ರಜಾಪ್ರಭುತ್ವದಲ್ಲಿ ಮಾಧ್ಯಮಗಳ ಹೊಣೆಗಾರಿಕೆ ಹೆಚ್ಚು. ಮಾಧ್ಯಮ ರಂಗ ಪ್ರಜಾಪ್ರಭುತ್ವದ ಜೀವಾಳ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಮಾಧ್ಯಮಗಳು ದನಿಯಾಗಬೇಕು' ಎಂದು ಹೇಳಿದರು.

ಶಾಸಕ ಬಿ.ಎಸ್. ಯಡಿಯೂರಪ್ಪ ಮಾತನಾಡಿ, 'ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪತ್ರಕರ್ತರಿಗೆ ಪರಿಹಾರ ನೀಡುವ ಕೆಲಸ ಮಾಡಿದ್ದೇನೆ. ಸಂವಿಧಾನದ ನಾಲ್ಕನೇ ಅಂಗವೆಂದು ಪರಿಗಣಿಸಿರುವ ಮಾಧ್ಯಮ ಕ್ಷೇತ್ರದ ನಂಬಿಕೆ ಎಂದಿಗೂ ಕಡಿಮೆಯಾಗಬಾರದು' ಎಂದರು.

ನಗರದಲ್ಲಿ ಗುರುವಾರ 'ಪ್ರೆಸ್ ಕ್ಲಬ್ ಆಫ್ ಬೆಂಗಳೂರು' ಆಯೋಜಿಸಿದ್ದ ವರ್ಷದ ವ್ಯಕ್ತಿ ಮತ್ತು ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶಾಸಕ ಬಿ.ಎಸ್ ಯಡಿಯೂರಪ್ಪ ಅವರಿಗೆ 2021ನೇ ಸಾಲಿನ ವರ್ಷದ ವ್ಯಕ್ತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ಎಡದಿಂದ) ಪ್ರೆಸ್ ಕ್ಲಬ್ ಅಧ್ಯಕ್ಷ ಕೆ. ಸದಾಶಿವ ಶೆಣೈ, ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು, ಸಚಿವರಾದ ಮುರುಗೇಶ್ ನಿರಾಣಿ, ಮುನಿರತ್ನ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರೆಸ್ ಕ್ಲಬ್ ಪ್ರಧಾನ ಕಾರ್ಯದರ್ಶಿ ಕಿರಣ್ ಎಚ್.ವಿ ಇದ್ದರು ಪ್ರಜಾವಾಣಿ ಚಿತ್ರ

ನಟ ಸುದೀಪ್ ಮಾತನಾಡಿ, 'ಮೊದಲ ದಿನ ಹಾಗೂ ಕೆಟ್ಟ ದಿನಗಳ ಸಂದರ್ಭದಲ್ಲಿ ನನ್ನ ಬಗ್ಗೆ ಲೇಖನಗಳನ್ನು ಬರೆದಿರುವವರನ್ನು ಮರೆಯುವುದಿಲ್ಲ' ಎಂದರು.

ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಪತ್ರಕರ್ತ ಎಚ್.ಆರ್. ರಂಗನಾಥ್ ಮತ್ತು ನಟ ರಮೇಶ್ ಅರವಿಂದ್ ಅವರು ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಗೌರವ ಪುರಸ್ಕಾರ ನೀಡಿದರು.

ಪ್ರಶಸ್ತಿ ಪುರಸ್ಕೃತರು: 2021ನೇ ಸಾಲಿನ ವರ್ಷದ ವ್ಯಕ್ತಿ ಪ್ರಶಸ್ತಿಯನ್ನು ಶಾಸಕ ಬಿ.ಎಸ್.ಯಡಿಯೂರಪ್ಪ ಹಾಗೂ 2020ನೇ ಸಾಲಿನ ವರ್ಷದ ವ್ಯಕ್ತಿ ಪ್ರಶಸ್ತಿಯನ್ನು ವಿಪ್ರೋ ಸಂಸ್ಥೆ ಅಧ್ಯಕ್ಷ ಅಜೀಂ ಪ್ರೇಮ್ ಜೀ, 2020ನೇ ಸಾಲಿನ ವಿಶೇಷ ಪ್ರಶಸ್ತಿಯನ್ನು ಅಕ್ಷರ ಸಂತ ಹರೇಕಳ ಹಾಜಬ್ಬ ಮತ್ತು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹಾಗೂ 2021 ಸಾಲಿನ ವಿಶೇಷ ಪ್ರಶಸ್ತಿಯನ್ನು ಕೋವಿಡ್ ತಜ್ಞರ ಸಮಿತಿ ಸದಸ್ಯ ಡಾ. ದೇವಿಪ್ರಸಾದ್ ಶೆಟ್ಟಿ ಮತ್ತು ನಟ ಸುದೀಪ್ ಅವರಿಗೆ ನೀಡಿ ಗೌರವಿಸಲಾಯಿತು.

ಪತ್ರಕರ್ತರಾದ ಪದ್ಮರಾಜ ದಂಡಾವತಿ, ಎಂ.ಕೆ. ಭಾಸ್ಕರ ರಾವ್, ರಂಜಾನ್ ದರ್ಗಾ, ಛಾಯಾಗ್ರಾಹಕ ವಿಶ್ವನಾಥ್ ಸುವರ್ಣ, 'ಪ್ರಜಾವಾಣಿ'ಯ ಸುದ್ದಿ ಸಂಪಾದಕ ಯತೀಶ್ ಕುಮಾರ್ ಜಿ.ಡಿ. ಮತ್ತು ವರದಿಗಾರ ವಿಭಾಗದ ಮುಖ್ಯಸ್ಥ ವೈ.ಗ. ಜಗದೀಶ್ ಸೇರಿದಂತೆ 41 ಮಂದಿಗೆ 2020 ಮತ್ತು 2021ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಹೊಟ್ಟೆಯಲ್ಲಿ ₹ 7 ಕೋಟಿ ಮೌಲ್ಯದ ಡ್ರಗ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಟ್ಟೆಯಲ್ಲಿ ಬಚ್ಚಿಟ್ಟುಕೊಂಡು ಸಾಗಿಸುತ್ತಿದ್ದ ₹ 7 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿರುವ ಕಸ್ಟಮ್ಸ್ ಅಧಿಕಾರಿಗಳು, ಉಗಾಂಡ ಪ್ರಜೆಯೊಬ್ಬರನ್ನು ಬಂಧಿಸಿದ್ದಾರೆ.

'ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶಾರ್ಜಾದಿಂದ ಬಂದಿಳಿದಿದ್ದ ವಿಮಾನದಲ್ಲಿ ಡ್ರಗ್ಸ್ ಸಾಗಿಸುತ್ತಿದ್ದ ಮಾಹಿತಿ ಬಂದಿತ್ತು. ಕಾರ್ಯಾಚರಣೆ ನಡೆಸಿದಾಗ ಡ್ರಗ್ಸ್ ಸಾಗಣೆ ಪತ್ತೆಯಾಯಿತು' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ವಿಮಾನದಲ್ಲಿ ಪ್ರಯಾಣಿಸಿದ್ದ ಎಲ್ಲರನ್ನೂ ಲೋಹ ಶೋಧಕದ ಮೂಲಕ ತಪಾಸಣೆ ನಡೆಸಲಾಯಿತು. ಒಬ್ಬ ಪ್ರಯಾಣಿಕನ ಮೇಲೆ ಅನುಮಾನ ಬಂದಿತ್ತು. ಆತನನ್ನು ವಿಶೇಷ ಕೊಠಡಿಗೆ ಕರೆದೊಯ್ದು ಪುನಃ ತಪಾಸಣೆ ನಡೆಸಲಾಯಿತು. ಆತನ ಹೊಟ್ಟೆಯಲ್ಲಿ ಡ್ರಗ್ಸ್ ಇರುವುದು ಖಾತ್ರಿಯಾಗಿತ್ತು.'

'ಪ್ರಯಾಣಿಕನನ್ನು ಆಸ್ಪತ್ರೆಗೆ ಕರೆದೊಯ್ದು ವೈದ್ಯರಿಂದ ಶಸ್ತ್ರಚಿಕಿತ್ಸೆ ಮಾಡಿಸಲಾಯಿತು. ಆತನ ಹೊಟ್ಟೆಯಲ್ಲಿದ್ದ 1 ಕೆ.ಜಿ ತೂಕದ 79 ಹೆರಾಯಿನ್ ಮಾತ್ರೆಗಳನ್ನು ವೈದ್ಯರು ಹೊರಗೆ ತೆಗೆದಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಮಾತ್ರೆ ನುಂಗಿ ಸಾಗಣೆ: 'ಹೆರಾಯಿನ್'w ಮಾತ್ರೆಗಳನ್ನು ನುಂಗಿ ಹೊಟ್ಟೆಯಲ್ಲಿಟ್ಟುಕೊಂಡು ಸಾಗಿಸುತ್ತಿದ್ದ ವ್ಯಕ್ತಿಯನ್ನು ಕಳೆದ ವರ್ಷ ಬಂಧಿಸಲಾಗಿತ್ತು. ಈಗ ಅದೇ ಮಾದರಿಯಲ್ಲಿ ಡ್ರಗ್ಸ್ ಸಾಗಿಸುತ್ತಿದ್ದ ಉಗಾಂಡ ಪ್ರಜೆ ಸಿಕ್ಕಿಬಿದ್ದಿದ್ದಾನೆ. ಇದೊಂದು ದೊಡ್ಡ ಜಾಲವಿರುವ ಮಾಹಿತಿ ಇದೆ' ಎಂದೂ ಕಸ್ಟಮ್ಸ್ ಮೂಲಗಳು ಹೇಳಿವೆ.

'ಕರ್ನಾಟಕ ಹಾಗೂ ತಮಿಳುನಾಡಿನಲ್ಲಿರುವ ಪೆಡ್ಲರ್‌ಗಳಿಗೆ ಹೆರಾಯಿನ್ ತಲುಪಿಸುವುದು ಉಗಾಂಡ ಪ್ರಜೆಯ ಉದ್ದೇಶವಾಗಿತ್ತು' ಎಂದೂ ತಿಳಿಸಿವೆ.

ನೋವು ನಿವಾರಕ ಬೆಲ್ಟ್‌ನಲ್ಲಿ ಚಿನ್ನ

ನೋವು ನಿವಾರಕ ಬೆಲ್ಟ್‌ನಲ್ಲಿ ಚಿನ್ನ ಬಚ್ಚಿಟ್ಟುಕೊಂಡು ಸಾಗಿಸುತ್ತಿದ್ದ ಪ್ರಯಾಣಿಕನನ್ನು ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ. ಆತನಿಂದ ₹ 7 ಲಕ್ಷ ಮೌಲ್ಯದ 1 ಕೆ.ಜಿ 400 ಗ್ರಾಂ ಚಿನ್ನ ಜಪ್ತಿ ಮಾಡಿದ್ದಾರೆ.

'ದುಬೈನಿಂದ ವಿಮಾನದಲ್ಲಿ ಬಂದಿದ್ದ ಆರೋಪಿ, ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ನಿಲ್ದಾಣದಲ್ಲಿ ಇಳಿದಿದ್ದ. ಆತನನ್ನು ತಪಾಸಣೆ ನಡೆಸಿದಾಗ ಬೆಲ್ಟ್ ಸಿಕ್ಕಿತ್ತು. ಬಿಚ್ಚಿ ನೋಡಿದಾಗ ಚಿನ್ನವಿತ್ತು' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಪಿ.ಐಶ್ವರ್ಯಾಗೆ ಮೊದಲ ರ್‍ಯಾಂಕ್

ಪಿ.ಐಶ್ವರ್ಯಾ

ಸಕಲೇಶಪುರ: ಕರ್ನಾಟಕ ಲೋಕ ಸೇವಾ ಆಯೋಗವು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳಿಗೆ ನಡೆಸಿದ ಪರೀಕ್ಷೆಯಲ್ಲಿ ಸಕಲೇಶಪುರದ ಚಂಪಕನಗರ ನಿವಾಸಿ ಎಚ್.ಎಂ. ವಿನಯಕುಮಾರ್ ಪತ್ನಿ ಪಿ.ಐಶ್ವರ್ಯಾ ಮೊದಲ ರ್‍ಯಾಂಕ್ ಗಳಿಸಿದ್ದಾರೆ. ಅವರು ಅರಸೀಕೆರೆಯಲ್ಲಿ ಕೃಷಿ ಅಧಿಕಾರಿಯಾಗಿದ್ದಾರೆ.

ಅವಿರೋಧ ಆಯ್ಕೆ

ಬೆಂಗಳೂರು: ರಾಷ್ಟ್ರೀಯ ಸಹಕಾರ ಹೈನು ಮಹಾಮಂಡಳ ನಿಯಮಿತ (ಎನ್‌ಸಿಡಿಎಫ್‌ಐ) ಆನಂದ್ (ಗುಜರಾತ್) ಇದರ ಆಡಳಿತ ಮಂಡಳಿಯ ನಿರ್ದೇಶಕರಾಗಿ ಕೆಎಂಎಫ್ ಅಧ್ಯಕ್ಷ ಮತ್ತು ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೋವಿಡ್: ಚಿಕಿತ್ಸೆಗೆ ಪರೀಕ್ಷೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಪ್ರಕರಣಗಳ ಸಂಖ್ಯೆ ನಿಯಂತ್ರಣದಿಂದಾಗಿ ಕೋವಿಡೇತರ ಚಿಕಿತ್ಸೆಗೆ ಆದ್ಯತೆ ನೀಡಬೇಕು. ವಿವಿಧ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರು ಸೋಂಕಿನ ಲಕ್ಷಣ ಹೊಂದಿರದಿದ್ದರೆ ಆಸ್ಪತ್ರೆ ದಾಖಲಾತಿ, ಶಸ್ತ್ರಚಿಕಿತ್ಸೆ, ತಪಾಸಣೆ ಸೇರಿದಂತೆ ವಿವಿಧ ಸಂದರ್ಭದಲ್ಲಿ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕಾಗಿಲ್ಲ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಈ ಬಗ್ಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ. 'ಕೋವಿಡ್ ಕಾಣಿಸಿಕೊಂಡ ಬಳಿಕ ಕೋವಿಡೇತರ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಚಿಕಿತ್ಸೆಯಲ್ಲಿ ವ್ಯತ್ಯಯವಾಗಿದೆ. ಕೋವಿಡೇತರ ಚಿಕಿತ್ಸೆಗಳು ಹಾಗೂ ರೋಗಿಗಳ ದಾಖಲಾತಿ ವಿಳಂಬವಾಗದಂತೆ ಆಸ್ಪತ್ರೆಗಳು ನೋಡಿಕೊಳ್ಳಬೇಕು. ಕೋವಿಡ್ ಮೂರು ಅಲೆಗಳಲ್ಲಿ ಆಸ್ಪತ್ರೆಗಳಲ್ಲಿನ ಮೂಲಸೌಕರ್ಯಗಳನ್ನು ವೃದ್ಧಿಸಲಾಗಿದೆ. ಎಲ್ಲರಿಗೂ ಕೋವಿಡ್ ಪರೀಕ್ಷೆ ನಡೆಸಬೇಕಾದ ಅಗತ್ಯವಿಲ್ಲ' ಎಂದು ಹೇಳಿದ್ದಾರೆ.

'ಸೋಂಕಿನ ಲಕ್ಷಣಗಳು ಇರದ ಹೊರರೋಗಿಗಳು ಹಾಗೂ ಒಳರೋಗಿಗಳಿಗೆ ಕೋವಿಡ್ ಪರೀಕ್ಷೆ ನಡೆಸಬೇಕಾಗಿಲ್ಲ. ಸೋಂಕಿನ ಲಕ್ಷಣ ಹೊಂದಿರುವವರಿಗೆ ಪರೀಕ್ಷೆ ನಡೆಸಿ, ಪ್ರತ್ಯೇಕ ವಾಸಕ್ಕೆ ಒಳಪಡಿಸಬೇಕು. ಕೋವಿಡ್ ಮಾರ್ಗಸೂಚಿ ಅನುಸಾರ ಚಿಕಿತ್ಸೆ ನೀಡಬೇಕು' ಎಂದು ತಿಳಿಸಿದ್ದಾರೆ.





ಎನ್‌ಟಿಐ ಹೌಸಿಂಗ್ ಸೊಸೈಟಿ: ನಾಗರಿಕ ಸೌಕರ್ಯಗಳಿಗೆ ಜಾಗ ಕಾಯ್ದಿರಿಸದೇ ಶೇ 70ರಷ್ಟು ನಿವೇಶನಗಳ ಬಿಡುಗಡೆ

ಎನ್‌ಟಿಐ ಲೇಔಟ್‌ನಲ್ಲಿ ಉದ್ಯಾನಗಳೇ ಮಾಯ!

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ರಾಷ್ಟ್ರೀಯ ಕ್ಷಯರೋಗ ಸಂಸ್ಥೆ (ಎನ್‌ಟಿಐ) ಹೌಸಿಂಗ್ ಸೊಸೈಟಿ ಅಭಿವೃದ್ಧಿಪಡಿಸಿರುವ ರಾಜೀವ್‌ಗಾಂಧಿ ಬಡಾವಣೆ ಹಲವು ಅಕ್ರಮ ಮತ್ತು ಗೊಂದಲಗಳ ಗೂಡಾಗಿ ಮಾರ್ಪಟ್ಟಿದೆ. ನಾಗರಿಕ ಸೌಕರ್ಯಗಳಿಗೆ (ಸಿ.ಎ) ಮೀಸಲಿಡಬೇಕಿದ್ದ ಜಾಗ ಭೂ ಕಬಳಿಕೆದಾರರ ಪಾಲಾಗಿದೆ. ಬಡಾವಣೆಯಲ್ಲಿ ಉದ್ಯಾನಗಳೇ ಮಾಯವಾಗಿವೆ.

ಕೊಡಿಗೇಹಳ್ಳಿ, ಕೋತಿಹೊಸಹಳ್ಳಿ ಮತ್ತು ಬ್ಯಾಟರಾಯನಪುರದ ವಿವಿಧ ಸರ್ವೆ ನಂಬರ್‌ಗಳಲ್ಲಿ 214 ಎಕರೆ ಜಾಗವನ್ನು ಕಂದಾಯ ಇಲಾಖೆ ಸ್ವಾಧೀನ ಮಾಡಿಕೊಂಡಿತು. ಅದನ್ನು ವಸತಿ ಬಡಾವಣೆಯಾಗಿ ಅಭಿವೃದ್ಧಿಪಡಿಸಲು ಎನ್‌ಟಿಐ ಹೌಸಿಂಗ್ ಸೊಸೈಟಿಗೆ ಹಸ್ತಾಂತರ ಮಾಡಿತು. ಬಿಡಿಎ ಕಾಯ್ದೆ ಪ್ರಕಾರ, ಬಡಾವಣೆಯಲ್ಲಿ ಶೇ 45ರಷ್ಟು ಜಾಗವನ್ನು ರಸ್ತೆ, ಉದ್ಯಾನ, ಆಟದ ಮೈದಾನ ಮುಂತಾದ ನಾಗರಿಕ ಸೌಕರ್ಯಗಳಿಗಾಗಿ ಮೀಸಲಿಡಬೇಕು. ಮಂಜೂರಾದ ಬಡಾವಣೆ ನಕ್ಷೆಗೆ ಅನುಗುಣವಾಗಿ ಉದ್ಯಾನಕ್ಕೆ ಮೀಸಲಿಟ್ಟ ಜಾಗಕ್ಕೆ ಬೇಲಿ ಹಾಕಬೇಕು. ಆ ಬಳಿಕವಷ್ಟೇ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಬಿಡುಗಡೆ ಮಾಡಿ ಸದಸ್ಯರಿಗೆ ಹಂಚಿಕೆ ಮಾಡಲು ಅನುಮತಿ ನೀಡಲಾಗುವುದು ಎಂಬ ಷರತ್ತನ್ನು ಬಿಡಿಎ ವಿಧಿಸಿತ್ತು.

ಮೊದಲ ಹಂತದಲ್ಲಿ 162 ಎಕರೆ 9 ಗುಂಟೆ ಜಾಗಕ್ಕೆ ಮಾತ್ರ ಯೋಜನಾ ಮಂಜೂರಾತಿಯನ್ನು ಬಿಡಿಎ ನೀಡಿತು. ಒಟ್ಟು 2,102 ನಿವೇಶನಗಳಲ್ಲಿ ಶೇ 60ರಷ್ಟನ್ನು ಅಂದರೆ 1,265 ನಿವೇಶನಗಳನ್ನು 2010ರಲ್ಲಿ ಬಿಡುಗಡೆ ಮಾಡಿತು. 2015ರಲ್ಲಿ ಮತ್ತೆ ಶೇ 10ರಷ್ಟು, ಅಂದರೆ 630 ನಿವೇಶನಗಳನ್ನು ಬಿಡುಗಡೆ ಮಾಡಿತು.

ಹೊರ ವಲಯ ಒಳ ಬೇಗುದಿ

ಉದ್ಯಾನಕ್ಕಾಗಿ ಗೊತ್ತುಪಡಿಸಲಾದ ರಸ್ತೆ ಮತ್ತು ರೈಲು ಮಾರ್ಗದ ನಡುವಿನ ಜಾಗ

ಸೊಸೈಟಿ ನೀಡಿರುವ ಪರಿತ್ಯಾಜನಾ ಪತ್ರದ ಪ್ರಕಾರ, ಶೇ 45ರಷ್ಟು ಜಾಗವನ್ನು ಸಿ.ಎ ನಿವೇಶನಗಳಿಗೆ ಕಾಯ್ದಿರಿಸಲಾಗಿದೆ. ಒಟ್ಟು 97,882 ಚದರ ಮೀಟರ್ (10.53 ಲಕ್ಷ ಚದರ ಅಡಿ) ಜಾಗವನ್ನು 29 ಉದ್ಯಾನಗಳಿಗೆ ಕಾಯ್ದಿರಿಸಲಾಗಿದೆ ಎಂದು ಮಂಜೂರಾದ ನಕ್ಷೆ ಮತ್ತು ಕಾಗದ ಪತ್ರಗಳಲ್ಲಿ ತೋರಿಸಲಾಗಿದೆ. ನಕ್ಷೆಯಲ್ಲಿ ತೋರಿಸಿದಷ್ಟು ಉದ್ಯಾನಗಳು ಬಡಾವಣೆಯಲ್ಲಿ ಇಲ್ಲ. ಕೆಲವೆಡೆ ಉದ್ಯಾನಗಳಿವೆಯಾದರೂ ಅವು ನಿಗದಿತ ಅಳತೆಯಷ್ಟಿಲ್ಲ. ಚೈನ್‌ಲಿಂಕ್ ಬೇಲಿಗಳಂತೂ ಇಲ್ಲವೇ ಇಲ್ಲ.

ಉದಾಹರಣೆಗೆ ಪರಿತ್ಯಾಜನಾ ಪತ್ರದಲ್ಲಿ ನೀಡಿರುವ ಪರಿಷ್ಕೃತ ಪಟ್ಟಿ ಪ್ರಕಾರ, ಉದ್ಯಾನ ಸಂಖ್ಯೆ-1ರಲ್ಲಿ 952 ಚದರ ಮೀಟರ್ (10,247 ಚದರ ಅಡಿ) ಜಾಗ ಇರಬೇಕು. ಮಂಜೂರಾದ ನಕ್ಷೆಯಲ್ಲೂ ಇದನ್ನು ಉಲ್ಲೇಖಿಸಲಾಗಿದೆ. ಪಶ್ಚಿಮ ಮತ್ತು ಉತ್ತರಕ್ಕೆ ಜಿಕೆವಿಕೆ, ಪೂರ್ವಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಜಿಕೆವಿಕೆ ಮತ್ತು ಸೊಸೈಟಿ ಜಾಗ ಎಂದು ಹೇಳಲಾಗಿದೆ. 'ಪ್ರಜಾವಾಣಿ' ತಂಡ ಸ್ಥಳಕ್ಕೆ ತೆರಳಿ ನಕ್ಷೆಯನ್ವಯ ಉದ್ಯಾನ ಇದೆಯೇ ಎಂದು ಪರಿಶೀಲನೆ ನಡೆಸಿತು. ಅಲ್ಲಿ ರಸ್ತೆಗೆ ಹೊಂದಿಕೊಂಡಂತೆಯೇ ಪಶ್ಚಿಮ ಮತ್ತು ಉತ್ತರಕ್ಕೆ ಜಿಕೆವಿಕೆ ಆವರಣ ಗೋಡೆ ಇದೆ. ಆದರೆ, ಉದ್ಯಾನವಾಗಲಿ, ಉದ್ಯಾನಕ್ಕೆ ಮೀಸಲಿಟ್ಟ ಜಾಗವಾಗಲಿ ಕಾಣಿಸುವುದಿಲ್ಲ.

ಅದೇ ರಸ್ತೆಯಲ್ಲಿ ಬಲ ತಿರುವು ಪಡೆದು ಮುಂದೆ ಸಾಗಿದರೆ ರಸ್ತೆಯ ಕೊನೆಯಲ್ಲಿ ಖಾಸಗಿ ಆಸ್ತಿಯ ಪಕ್ಕದಲ್ಲಿ 4,532.57 ಚದರ ಮೀಟರ್ (48,790 ಚದರ ಅಡಿ) ಜಾಗದಲ್ಲಿ ಉದ್ಯಾನ ಸಂಖ್ಯೆ-4 ಇದೆ ಎಂದು ನಕ್ಷೆಯಲ್ಲಿ ಉಲ್ಲೇಖಿಸಲಾಗಿದೆ. ಅದನ್ನು ಹುಡುಕಿಕೊಂಡು ಹೋದರೆ, ರಸ್ತೆ ಕೊನೆಯವರೆಗೂ ಎಲ್ಲೂ ಉದ್ಯಾನ ಕಾಣಸಿಗದು. ಎದುರಿಗೆ ಖಾಸಗಿ ಆಸ್ತಿಯ ಕಾಂಪೌಂಡ್ ಸಿಗುತ್ತದೆ. ಉದ್ಯಾನಕ್ಕೆ ಮೀಸಲಿಟ್ಟಿರುವ ಅಷ್ಟು ದೊಡ್ಡ ಅಳತೆಯ ಜಾಗವೂ ಕಾಣಿಸುವುದಿಲ್ಲ.

ಕೊಡಿಗೇಹಳ್ಳಿ ರೈಲು ನಿಲ್ದಾಣಕ್ಕೆ ಹೊಂದಿಕೊಂಡಂತೆ ರಸ್ತೆ ಮತ್ತು ರೈಲು ಮಾರ್ಗದ ಮಧ್ಯದಲ್ಲಿ ಉದ್ಯಾನ ಸಂಖ್ಯೆ 13 (6691.69 ಚದರ ಮೀಟರ್) ಮತ್ತು 14 (3891.33 ಚದರ ಮೀಟರ್) ಇದೆ ಎಂದು ನಕ್ಷೆ ಹೇಳುತ್ತದೆ. ರೈಲ್ವೆ ಮಾರ್ಗದ ಪಕ್ಕದಲ್ಲೇ ರಸ್ತೆ ಇದೆ. ರಸ್ತೆ ಮತ್ತು ರೈಲು ಮಾರ್ಗದ ಮಧ್ಯದಲ್ಲಿ ಉದ್ಯಾನ ಇದೆ ಎಂಬುದನ್ನು ಬರಿಗಣ್ಣಿನಿಂದ ಗುರುತಿಸಲು ಯಾರಿಂದಲೂ ಸಾಧ್ಯವಿಲ್ಲ. ಇರುವ ಸಣ್ಣ ಜಾಗ ರೈಲ್ವೆ ಇಲಾಖೆಗೆ ಸೇರಿದ್ದೋ, ರಸ್ತೆ ಜಾಗವೋ ಎಂಬುದೂ ಸ್ಪಷ್ಟವಾಗುವುದಿಲ್ಲ. ಇದು ಉದ್ಯಾನಕ್ಕೆ ಕಾಯ್ದಿರಿಸಿದ ಜಾಗ ಎಂದು ಭಾವಿಸಿಕೊಂಡರೂ ಅಲ್ಲಿ ಚೈನ್‌ಲಿಂಕ್ ಬೇಲಿಯಂತೂ ಇಲ್ಲವೇ ಇಲ್ಲ.

'ನಾಗರಿಕ ಸೌಕರ್ಯಗಳಿಗೆ ಜಾಗ ಕಾಯ್ದಿರಿಸದಿದ್ದರೂ ಶೇ 70ರಷ್ಟು ನಿವೇಶನಗಳನ್ನು ಬಿಡಿಎ ಅಧಿಕಾರಿಗಳು ಬಿಡುಗಡೆ ಮಾಡಿದ್ದಾರೆ. ಇನ್ನುಳಿದ ಶೇ 30 ರಷ್ಟು ನಿವೇಶನ ಬಿಡುಗಡೆ ಮಾಡಲು ಸಿದ್ಧತೆ ನಡೆಸಿದ್ದಾರೆ. ಬಿಡಿಎ ನಿಯಮಗಳು ಮತ್ತು ನಕ್ಷೆಗಳು ಕಾಗದಲ್ಲಷ್ಟೇ ಉಳಿದಿವೆ' ಎಂದು ಸ್ಥಳೀಯರು ದೂರುತ್ತಾರೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸೊಸೈಟಿಯ ಪದಾಧಿಕಾರಿಗಳು ಲಭ್ಯರಾಗಲಿಲ್ಲ.

'ಕ್ರಿಮಿನಲ್ ಪ್ರಕರಣ ದಾಖಲಿಸಬೇಕು'

'ಮಂಜೂರಾದ ನಕ್ಷೆ ಪ್ರಕಾರ ಉದ್ಯಾನಕ್ಕೆ ಜಾಗ ಮೀಸಲಿಡದೆ ನಿವೇಶನ ಹಂಚಿಕೆ ಮಾಡುವ ಮೂಲಕ ಸರ್ಕಾರ ಮತ್ತು ಅಮಾಯಕರಿಗೆ ಎನ್‌ಟಿಐ ಸೊಸೈಟಿ ಪದಾಧಿಕಾರಿಗಳು ವಂಚಿಸಿದ್ದಾರೆ. ಉದ್ಯಾನ ಜಾಗದಲ್ಲಿ ಶೇ 70ರಷ್ಟನ್ನು ನಿವೇಶನವಾಗಿ ಪರಿವರ್ತಿಸಿ ಮಾರಾಟ ಮಾಡಲಾಗಿದೆ. ಈ ಪ್ರದೇಶದಲ್ಲಿ ಚದರ ಅಡಿಗೆ ₹25 ಸಾವಿರ ದರವಿದ್ದು, ₹1,875 ಕೋಟಿ ಮೌಲ್ಯದ ಜಾಗವನ್ನು ಅಕ್ರಮವಾಗಿ ಮಾರಾಟವಾಗಿದೆ. ಮಾರಾಟ ಮಾಡಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಚಕ್ರಪಾಣಿ ಫೌಂಡೇಷನ್ ಅಧ್ಯಕ್ಷ ಕೆ.ಎನ್.ಚಕ್ರಪಾಣಿ ಅವರು ಒತ್ತಾಯಿಸಿದರು.

'ಈ ಸಂಬಂಧ ಬಿಡಿಎಗೆ ಈಗಾಗಲೇ ದೂರು ನೀಡಿದ್ದೇನೆ. ಪ್ರಕರಣವನ್ನು ಸಿಸಿಬಿಗೆ ವರ್ಗಾಯಿಸಿ ತನಿಖೆ ನಡೆಸಬೇಕು. ಸ್ಥಳ ಪರಿಶೀಲಿಸದೆ ನಿವೇಶನ ಬಿಡುಗಡೆ ಮಾಡಿರುವ ಬಿಡಿಎ ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಬೇಕು. ಬಾಕಿ ಶೇ 30ರಷ್ಟು ಅಂದರೆ 630 ನಿವೇಶನಗಳನ್ನು ಬಿಡಿಎ ಬಿಡುಗಡೆ ಮಾಡಬಾರದು' ಎಂದು ಆಗ್ರಹಿಸಿದರು.

ಮುಖ್ಯ ನ್ಯಾಯಮೂರ್ತಿಗೆ ದೂರು

ರಾಜೀವ್ ಗಾಂಧಿ ಬಡಾವಣೆಯಲ್ಲಿ ಉದ್ಯಾನ, ರಸ್ತೆ ಸೇರಿದಂತೆ ವಿವಿಧ ನಾಗರಿಕ ಸೌಕರ್ಯಗಳಿಗೆ ಶೇ 45ರಷ್ಟು ಜಾಗ ಮೀಸಲಿಡದಿರುವ ಬಗ್ಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಎನ್‌ಟಿಐ ಸೊಸೈಟಿ ಸದಸ್ಯ ಟಿ.ಸಿ. ಅಚ್ಚಯ್ಯ ದೂರು ನೀಡಿದ್ದಾರೆ.

'20 ವರ್ಷಗಳ ಹಿಂದೆಯೇ ಪೂರ್ಣ ಪ್ರಮಾಣದ ಹಣ ನೀಡಿದ್ದರೂ, ಈವರೆಗೆ ನಮಗೆ ನಿವೇಶನ ಸಿಕ್ಕಿಲ್ಲ. 150ಕ್ಕೂ ಹೆಚ್ಚು ಪ್ರಕರಣಗಳು ಸೊಸೈಟಿ ವಿರುದ್ಧ ದಾಖಲಾಗಿವೆ. ಹಂಚಿಕೆ ಮಾಡಿರುವ ನಿವೇಶನಗಳ ಅಳತೆಗಳಲ್ಲೂ ವ್ಯತ್ಯಾಸ ಇದೆ. ಸೊಸೈಟಿ ಭಾರಿ ಪ್ರಮಾಣದ ಅವ್ಯವಹಾರ ನಡೆಸಿದೆ. ಈ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ಆದೇಶಿಸಬೇಕು' ಎಂದು ಅವರು ದೂರಿನಲ್ಲಿ ಮನವಿ ಮಾಡಿದ್ದಾರೆ.

ಜಲ ದತ್ತಾಂಶ ಸಂಗ್ರಹಕ್ಕಾಗಿ ಪ್ರಯೋಗ ಶಾಲೆ

ಬೆಂಗಳೂರು: ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ (ಎನ್‌ಐಇ) ಕೊಡಗಿನ ಪುಷ್ಪಗಿರಿ ಬೆಟ್ಟದ ತಪ್ಪಲಿನಲ್ಲಿ 'ಕ್ಷೇತ್ರ ಜಲವಿಜ್ಞಾನ ಪ್ರಯೋಗ ಶಾಲೆ'ಯನ್ನು ಸ್ಥಾಪಿಸಿದೆ.

ಮುಖ್ಯವಾಗಿ, ಮಳೆಯ ತೀವ್ರತೆ, ಒಳ ಹರಿವು, ಅಂತರ್ಜಲ ಇತ್ಯಾದಿಗಳ ಬಗ್ಗೆ ನಿಖರ ಮಾಹಿತಿ ಸಂಗ್ರಹಿಸಿ ದತ್ತಾಂಶ ಸಿದ್ಧಪಡಿಸುವುದು ಈ ಪ್ರಯೋಗ ಶಾಲೆಯ ಮುಖ್ಯ ಉದ್ದೇಶ. ಜಲ ವಿಜ್ಞಾನದ ಮೂಲಭೂತ ಸಂಶೋಧನೆಯು ಜಲಾನಯನ ಕ್ಷೇತ್ರಗಳಲ್ಲೇ ಅಳವಡಿಸಿಕೊಂಡು ಅಧ್ಯಯನ ನಡೆಸಲು ತಜ್ಞರಿಗೆ ಈ ವ್ಯವಸ್ಥೆ ಸಹಕಾರಿಯಾಗಲಿದೆ ಎಂದು ಎನ್‌ಐಇಯ ಜಲಸಂಪನ್ಮೂಲ ಕೇಂದ್ರದ ಮುಖ್ಯಸ್ಥ ಯದುಪತಿ ಪುಟ್ಟಿ ತಿಳಿಸಿದ್ದಾರೆ.

ಜಲ ಮಾಪಕ

ವಿಜ್ಞಾನಿಗಳು ಸ್ವತಃ ಜಲಾನಯನ ಪ್ರದೇಶದಲ್ಲಿ ಸೌಲಭ್ಯಗಳನ್ನು ನಿರ್ಮಿಸಿಕೊಂಡು ಅಲೆದಾಡಿ ಕೆಲಸ ಮಾಡುವುದು ಕಷ್ಟ. ಅತಿಯಾದ ಮಳೆ, ಕ್ಲಿಷ್ಟವಾದ ಪ್ರದೇಶ, ಕಾಡು–ಮೇಡುಗಳಿಂದಾಗಿ ಅಧ್ಯಯನ ನಡೆಸುವುದು ಸವಾಲಿನ ಕೆಲಸವಾಗಿದೆ. ಹೀಗಾಗಿ ನಾಲ್ಕು ಗೋಡೆಗಳ ಮಧ್ಯೆ ಕುಳಿತು ಕಂಪ್ಯೂಟರ್ ಬಳಸಿ ನಡೆಸಬಹುದಾದ ಅಧ್ಯಯನಗಳೇ ಹೆಚ್ಚುತ್ತಿವೆ ಎಂದಿದ್ದಾರೆ.

ಎನ್‌ಐಇಯ ಸಿವಿಲ್ ಎಂಜಿನಿಯರಿಂಗ್ ವಿಭಾಗವು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಇಸ್ರೊ ಮತ್ತು ಕೇಂದ್ರ ಸರ್ಕಾರದ ಭೂವಿಜ್ಞಾನ ಇಲಾಖೆಯ ಅನುದಾನ ಮೂಲಕ ಕಳೆದ ಮೂರು ದಶಕಗಳಿಂದ ಕೊಡಗಿನ ಮತ್ತು ಹಾಸನ ಜಿಲ್ಲೆಯ ತೀವ್ರ ಮಳೆ ಬೀಳುವ ಜಲಾನಯನ ಪ್ರದೇಶಗಳಲ್ಲಿ ಪ್ರಾಯೋಗಿಕ ಇಳಿಮೇಡುಗಳನ್ನು ನಿರ್ಮಿಸಿ ಸಂಶೋಧನೆ ನಡೆಸುತ್ತಾ ಬಂದಿದೆ. ವಿಶ್ವಬ್ಯಾಂಕ್ ನೆರವಿನ ಮೂಲಕ ನದಿ ಹರಿವಿನ ಮಾಪನ ಸ್ಥಳಗಳನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಇಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಇಲ್ಲಿ ನಡೆದ ಸಾಕಷ್ಟು ಅಧ್ಯಯನಗಳ ಲೇಖನಗಳು ಅಂತರರಾಷ್ಟ್ರೀಯ ವಿಜ್ಞಾನದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪಶ್ಚಿಮ ಘಟ್ಟಗಳ ಮಳೆ ಮತ್ತು ನದಿ ಹರಿವಿನ ಬಗ್ಗೆ ಸಾಕಷ್ಟು ಹೊಸ ವಿಷಯಗಳು ಬೆಳಕಿಗೆ ಬಂದಿವೆ. ಇಲ್ಲಿನ ನದಿ ಹರಿವು ಮೈದಾನ ಪ್ರದೇಶದಲ್ಲಿ ಕಂಡು ಬರುವ ನೆಲದ ಮೇಲಿನ ಹರಿವಿಗಿಂತ ಭಿನ್ನವಾಗಿದೆ ಎನ್ನುತ್ತಾರೆ ಯದುಪತಿ ಪುಟ್ಟಿ.

ನೆಲದೊಳಗಿನ ನೀರಿನ ಹರಿವು ಆಳವಾದ ಮಣ್ಣಿನ ಪದರದಲ್ಲಿ ಸ್ವಾಭಾವಿಕವಾಗಿ ನಿರ್ಮಿತವಾದ ಕೊಳವೆಗಳಲ್ಲಿ ಆಗುವುದು ಎಂಬುದು ಸಾಬೀತಾಗಿದೆ. ಪಶ್ಚಿಮಘಟ್ಟದಲ್ಲಿ ಗುಪ್ತಗಾಮಿನಿಗಳು ವಾಸ್ತವ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ ಎಂದು ಹೇಳಿದರು.

ಡಿಎಚ್ ಚೇಂಜ್ ಮೇಕರ್ಸ್

'ಡೆಕ್ಕನ್ ಹೆರಾಲ್ಡ್' ಪತ್ರಿಕೆಯು ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಗುರುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ 'ಡೆಕ್ಕನ್ ಹೆರಾಲ್ಡ್ ಚೇಂಜ್ ಮೇಕರ್ಸ್ 22 ಇನ್ 2022' ಪ್ರಶಸ್ತಿ ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಪ್ರಶಸ್ತಿ ಪುರಸ್ಕೃತರಾದ ಉತ್ತರ ಕನ್ನಡ ಜಿಲ್ಲೆಯ ಮಾರುತಿ ಗೌಡ, ಬಿಳಿಗಿರಿರಂಗನಬೆಟ್ಟದ ಡಾ.ತಾನ್ಯಾ ಶೇಷಾದ್ರಿ, ಬೆಂಗಳೂರಿನ ಓಂಶಿವಪ್ರಕಾಶ್ ಎಚ್.ಎಲ್, ಉಡುಪಿ ಜಿಲ್ಲೆಯ ರವಿ ಕಟಪಾಡಿ, ಅತಿಥಿಗಳಾದ ಮಣಿಪಾಲ ಆಸ್ಪತ್ರೆಗಳ ಸಮೂಹದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಾರ್ತಿಕ್ ರಾಜಗೋಪಾಲ್, ಉದ್ಯಮಿ ಕ್ಯಾ. ಗೋಪಿನಾಥ್, ನಿವೃತ್ತ ಲೋಕಾಯುಕ್ತ ನ್ಯಾ.ಎನ್.ಸಂತೋಷ್ ಹೆಗ್ಡೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್.ಕೆ.ಅತೀಕ್, ನ್ಯಾ.ಎಚ್.ಎ.ಮೋಹನ್, ಪ್ರಶಸ್ತಿ ಪುರಸ್ಕೃತರಾದ ಮಂಡ್ಯದ ಸಯ್ಯದ್ ಘನಿಖಾನ್, ಚಿತ್ರದುರ್ಗದ ಡಿ.ರಂಗಸ್ವಾಮಿ, ಬೆಂಗಳೂರಿನ ಮುದಿತ್ ದಂಡವತೆ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದಯಾನಂದ ಜಗದೀಶ ಅಪ್ಪಯ್ಯನವರಮಠ ಮತ್ತು ನಾಗಮಂಗಲದ ಮೊಹಮ್ಮದ್ ಕಲೀಮುಲ್ಲಾ, (ಕುಳಿತವರು ಎಡದಿಂದ) ಉತ್ತರ ಕನ್ನಡ ಜಿಲ್ಲೆಯ ದರ್ಶನ್ ಹರಿಕಾಂತ್, ಬಿಳಿಗಿರಿರಂಗನಬೆಟ್ಟದ ಡಾ.ಪ್ರಶಾಂತ್ ಎನ್.ಎಸ್., ಕಲಬುರಗಿಯ ಹಣಮಂತ ಹೂವಣ್ಣ ದೇವನೂರ ಮತ್ತು ಅವರ ಪತ್ನಿ ಬಸಮ್ಮ, ಚಾಮರಾಜನಗರ ಜಿಲ್ಲೆಯ ಚಮ್ಮನಹಳ್ಳದ ಡಿ.ರತ್ನಮ್ಮ, ರಾಮನಗರದ ಆಶಾ ವಿ. ಸ್ವಾಮಿ, ಹೊಸಪೇಟೆಯ ಎಸ್.ನಸ್ರೀನ್, ಕೊಪ್ಪಳದ ಭಾರತಿ ಗುಂಡ್ಲನೂರು, ದಾವಣಗೆರೆಯ ಟಿ.ವಿ.ರೇಣುಕಮ್ಮ, ಶಿವಮೊಗ್ಗದ ಅಕ್ಷತಾ ಹುಂಚದಕಟ್ಟೆ, ಬೆಂಗಳೂರಿನ ಅಭಿಷೇಕ್ ಕೃಷ್ಣಗೋಪಾಲ್, ಓಟಗಾರ್ತಿ ಪ್ರಿಯಾ ಮೋಹನ್ ಅವರ ತಾಯಿ ಚಂದ್ರಕಲಾ (ಮಗಳ ಪರವಾಗಿ ಪ್ರಶಸ್ತಿ ಸ್ವೀಕರಿಸಿದರು) ಮತ್ತು ಬೆಂಗಳೂರಿನ ಕರ್ನಾಟಕ ಸಂಗೀತ ಹಾಡುಗಾರರಾದ ಚಂದ್ರಕಲಾ ಮತ್ತು ರಾಹುಲ್ ಆರ್.ವೆಲ್ಲಾಳ್ ಇದ್ದಾರೆ

–ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಗಡಿ ಕನ್ನಡಿಗ ಕನ್ನಡ ತಂತ್ರಾಂಶ ಕಲಿಕಾ ಪ್ರತ್ಯೇಕ ಘಟಕ ಉದ್ಘಾಟನೆ: ಡಾ.ಸಿ. ಸೋಮಶೇಖರ್, ಗೌರವ ಅತಿಥಿ- ಪ್ರೊ. ನಾ. ಗೀತಾಚಾರ್ಯ, ಅಧ್ಯಕ್ಷತೆ- ಆರ್.ಎ. ಪ್ರಸಾದ್, ಆಯೋಜನೆ ಹಾಗೂ ಸ್ಥಳ-ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ, 6ನೇ ಅಡ್ಡ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 11.45

ಡಾ.ಸಿ. ಸೋಮಶೇಖರ್

ಯೋಗ ಚಿಂತನ: ಉದ್ಘಾಟನೆ- ಪ್ರೊ. ಕೆ.ಆರ್. ವೇಣುಗೋಪಾಲ್, ಮುಖ್ಯ ಅತಿಥಿಗಳು- ಕೆ.ಆರ್. ಸುಧೀಂದ್ರ ಶರ್ಮಾ, ಕೆ. ರಾಮಕೃಷ್ಣಯ್ಯ, ಆಯೋಜನೆ ಹಾಗೂ ಸ್ಥಳ- ಯೋಗ ವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಮಧ್ಯಾಹ್ನ 2

ನಿರ್ಭಯ ಕೇಂದ್ರ–ಸಖಿ ಒನ್ ಸ್ಟಾಪ್ ಸೆಂಟರ್ ಉದ್ಘಾಟನೆ: ಮಹಿಳೆಯರು ಮತ್ತು ಮಕ್ಕಳಿಗಾಗಿ ಸಮಗ್ರ ಬೆಂಬಲ ಕೇಂದ್ರ, ಆಯೋಜನೆ- ಬೆಂಗಳೂರು ಸಂಚಾರ ಪೊಲೀಸ್, ಸ್ಥಳ- 2ನೇ ಮಹಡಿ, ಬಿ.ಎಂ.ಟಿ.ಸಿ. ಬಸ್ ನಿಲ್ದಾಣ, ಮೆಜೆಸ್ಟಿಕ್, ಮಧ್ಯಾಹ್ನ 3.30

ದತ್ತಿ ಉಪನ್ಯಾಸ: ಪಂಡಿತ್ ಓ.ಆರ್. ರಾಮಣ್ಣ ಮತ್ತು ಪುಟ್ಟಮ್ಮ ದತ್ತಿ ಉಪನ್ಯಾಸ, ಉಪನ್ಯಾಸಕರು- ಪ್ರೊ.ಡಿ. ಅಂಜನಪ್ಪ ಚಳ್ಳಕೆರೆ, ಅಧ್ಯಕ್ಷತೆ- ಬೈರಮಂಗಲ ರಾಮೇಗೌಡ, ಸಂಯೋಜನೆ: ಬಿ.ಸಿ. ರಾಜಕುಮಾರ್, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಸಾಹಿತ್ಯ ಸಂಚಲನ ವೆಬಿನಾರ್: 'ಸೃಷ್ಟಿಸಲು ಒಂದಷ್ಟು ಸಮಯ ಕೊಡಿ!', ಉಪನ್ಯಾಸಕರು- ಡಾ.ಕೆ. ಎಸ್. ಪವಿತ್ರಾ, ಉಪಸ್ಥಿತಿ- ವನಮಾಲಾ ಸಂಪನ್ನಕುಮಾರ, ಆಶಾ ಹೆಗಡೆ, ಎಲ್. ಗಿರಿಜಾ ರಾವ್, ನಾಗರತ್ನಾ ಚಂದ್ರಶೇಖರ್, ಸರಸ್ವತಿ ನಟರಾಜ್, ರೇಣುಕಾ ದೇಸಾಯಿ, ಆಯೋಜನೆ- ಕರ್ನಾಟಕ ಲೇಖಕಿಯರ ಸಂಘ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಕಸಾಪ: ಐವರ ಜಯಂತಿ ಆಚರಣೆಗೆ ನಿರ್ಧಾರ

ಬೆಂಗಳೂರು: ನಾಲ್ವಡಿ ಕೃಷ್ಣರಾಜ ಒಡೆಯರ್ ಸೇರಿದಂತೆ ಐವರ ಜಯಂತಿಯನ್ನು ಈ ವರ್ಷದಿಂದ ಆಚರಣೆ ಮಾಡಲು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಿರ್ಧಾರ ಕೈಗೊಂಡಿದೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದಲ್ಲಿ ಕಾರ್ಯಕಾರಿ ಸಮಿತಿ ಸಭೆ ಗುರುವಾರ ನಡೆಯಿತು. ಸರ್.ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್, ಶಿಶುನಾಳ ಶರೀಫ ಹಾಗೂ ಚನ್ನಬಸವ ಪಟ್ಟದೇವರು ಅವರ ಜಯಂತಿ ಆಚರಣೆಗೆ ಸಹಮತ ವ್ಯಕ್ತವಾಯಿತು.

ಶುಕ್ರವಾರವೂ ಸಭೆ ನಡೆಯಲಿದ್ದು, ಬೈ–ಲಾ ತಿದ್ದುಪಡಿಗೆ ಸಂಬಂಧಿಸಿದಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್ ನೇತೃತ್ವದ ಸಮಿತಿಯ ಶಿಫಾರಸಿನ ಬಗ್ಗೆ ಚರ್ಚೆ ನಡೆಸಲಾಗುತ್ತದೆ.

ಮಹೇಶ್ ಜೋಶಿ

ಮೊಬೈಲ್ ಆ್ಯಪ್ ಮೂಲಕ ಚುನಾವಣೆ, ಸದಸ್ಯತ್ವಕ್ಕೆ ಶೈಕ್ಷಣಿಕ ಮಾನದಂಡ, ಸದಸ್ಯತ್ವ ಶುಲ್ಕ ₹ 500ರಿಂದ ₹ 250ಕ್ಕೆ ಇಳಿಕೆ ಸೇರಿದಂತೆ ವಿವಿಧ ಶಿಫಾರಸಿನ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯ ಮುಖಂಡರೊಂದಿಗೆ ಚರ್ಚಿಸಿದ ರಾಹುಲ್ ಗಾಂಧಿ • ಗುಂಪುಗಾರಿಕೆ ವಿರುದ್ಧ ಎಚ್ಚರಿಕೆ

‘ಹಿಜಾಬ್–ಕೇಸರಿ ಶಾಲು: ನಿಲುವು ಪ್ರಕಟಿಸಬೇಡಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಹಿಜಾಬ್– ಕೇಸರಿ ಶಾಲು ಮತ್ತಿತರ ಸೂಕ್ಷ್ಮ ವಿಷಯಗಳ ಕುರಿತು ಪಕ್ಷದ ಮುಖಂಡರು ವಿವಾದಾತ್ಮಕ ಹೇಳಿಕೆ ನೀಡಬಾರದು. ಹೈಕೋರ್ಟ್ ತೀರ್ಪು ನೀಡುವವರೆಗೂ ನಾಯಕರು ಯಾವುದೇ ನಿಲುವು ಪ್ರಕಟಿಸದಿರುವುದು ಸೂಕ್ತ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೂಚಿಸಿದ್ದಾರೆ.

ಪಕ್ಷದ ರಾಜ್ಯ ಮುಖಂಡರೊಂದಿಗೆ ಗುರುವಾರ ಇಲ್ಲಿನ ತಮ್ಮ ನಿವಾಸದಲ್ಲಿ ಸುದೀರ್ಘ ಮಾತುಕತೆ ನಡೆಸಿದ ವೇಳೆ ಅವರು ಈ ತಾಕೀತು ಮಾಡಿದರು ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ನವದೆಹಲಿಯಲ್ಲಿ ಗುರುವಾರ ಪಕ್ಷದ ರಾಜ್ಯ ಮುಖಂಡರೊಂದಿಗೆ ಸಭೆ ನಡೆಸಿ ಚರ್ಚಿಸಿದರು

‘ಬಿಜೆಪಿಯು ಹಿಜಾಬ್ ವಿವಾದವನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತ ಮತಗಳನ್ನು ಸೆಳೆಯುವ ತಂತ್ರ ಅನುಸರಿಸುತ್ತಿದೆ. ಆದರೆ, ಕಾಂಗ್ರೆಸ್ ಪಕ್ಷ ಯಾವುದೇ ಕಾರಣಕ್ಕೂ ಈ ಸಂಬಂಧ ಕಾರ್ಯಕರ್ತರಲ್ಲಿ ಗೊಂದಲ ಉಂಟಾಗದಂತೆ ನೋಡಿಕೊಳ್ಳಬೇಕು’ ಎಂದು ಅವರು ಹೇಳಿದ್ದಾಗಿ ಪಕ್ಷದ ಹಿರಿಯ ಮುಖಂಡರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

2023ರ ಏಪ್ರಿಲ್– ಮೇ ತಿಂಗಳಲ್ಲಿ ನಡೆಯಲಿರುವ ರಾಜ್ಯ ವಿಧಾನಸಭೆ ಚುನಾವಣೆಗೆ ಪಕ್ಷವನ್ನು ಸನ್ನದ್ಧಗೊಳಿಸುವ ನಿಟ್ಟಿನಲ್ಲಿ ರೂಪಿಸಬೇಕಿರುವ ಕಾರ್ಯತಂತ್ರಗಳ ಕುರಿತು ಎಲ್ಲ ಮುಖಂಡರ ಅಭಿಪ್ರಾಯ ಸಂಗ್ರಹಿಸಿದ ಅವರು, ಆಂತರಿಕ ವೈಮನಸ್ಸು ಬದಿಗಿರಿಸಿ ಪಕ್ಷ ಸಂಘಟನೆಗೆ ಒತ್ತು ನೀಡುವಂತೆ ಸಲಹೆ ನೀಡಿದರು.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದ ಅವರು, ಈಗಿನಿಂದಲೇ ಚುನಾವಣೆಗೆ ಅಣಿಯಾಗವಂತೆ ಹೇಳಿದರು.

ಟಿಕೆಟ್ ಹಂಚಿಕೆ ವಿಳಂಬ ಬೇಡ: ಚುನಾವಣೆಯಲ್ಲಿ ಸ್ಪರ್ಧಿಸುವ ಪಕ್ಷದ ಅಭ್ಯರ್ಥಿಯನ್ನು ಕನಿಷ್ಠ ಆರು ತಿಂಗಳು ಮುಂಚಿತವಾಗಿಯೇ ಘೋಷಿಸುವ ಅಗತ್ಯವಿದೆ. ನಾಮಪತ್ರ ಹಂಚಿಕೆಯ ಕೊನೆಯ ದಿನದವರೆಗೂ ಟಿಕೆಟ್ ಹಂಚುವ ಪರಿಪಾಠವನ್ನು ಕೊನೆಗಾಣಿಸಿ, ಮತದಾರರಲ್ಲಿ ಉಂಟಾಗುವ ಗೊಂದಲವನ್ನು ನಿವಾರಿಸಬೇಕು ಎಂದೂ ಮುಖಂಡರು ರಾಹುಲ್ ಗಾಂಧಿ ಅವರಲ್ಲಿ ಮನವಿ ಮಾಡಿದರು.

ಪದಾಧಿಕಾರಿಗಳ ನೇಮಕ: ಕೆಪಿಸಿಸಿ ಪದಾಧಿಕಾರಿಗಳ ನೇಮಕ ಹಾಗೂ ಕೆಲವು ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಬದಲಾವಣೆ ಪ್ರಕ್ರಿಯೆಯನ್ನೂ ಶೀಘ್ರವೇ ಅಂತಿಮಗೊಳಿಸಬೇಕು. ಈ ಮೂಲಕ ಪಕ್ಷ ಸಂಘಟನೆಯಲ್ಲಿ ಪ್ರತಿಯೊಬ್ಬರೂ ಸಕ್ರಿಯವಾಗಿ ತೊಡಗಿಕೊಳ್ಳಲು ಅನುವು ಮಾಡಿಕೊಡಬೇಕು ಎಂದೂ ರಾಜ್ಯ ನಾಯಕರು ಕೋರಿದರು.

ಪಕ್ಷದ ಹಿರಿಯ ಮುಖಂಡ ಎಂ.ವೀರಪ್ಪ ಮೊಯಿಲಿ, ಡಾ.ಜಿ. ಪರಮೇಶ್ವರ, ಎಂ.ಬಿ. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಆರ್. ಧ್ರುವನಾರಾಯಣ, ಈಶ್ವರ ಖಂಡ್ರೆ, ಸಲೀಂ ಅಹಮದ್, ಸತೀಶ ಜಾರಕಿಹೊಳಿ, ರಾಮಲಿಂಗಾರೆಡ್ಡಿ, ಮುಖಂಡರಾದ ಎಚ್.ಕೆ. ಪಾಟೀಲ, ಕೆ.ಎಚ್. ಮುನಿಯಪ್ಪ, ದಿನೇಶ್ ಗುಂಡೂರಾವ್, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಸಭೆಯಲ್ಲಿ ಹಾಜರಿದ್ದರು.

ಸುದ್ದಿ 2 ನಿಮಿಷ

ಬಜೆಟ್‌ನಲ್ಲಿ ಅಬಕಾರಿ ಇಲಾಖೆಗೆ ಹೊಸ ಸ್ವರೂಪ : ಸಿಎಂ

ಬೆಂಗಳೂರು: ‘ಪ್ರಸಕ್ತ ಸಾಲಿನ (2022-23) ಬಜೆಟ್‌ನಲ್ಲಿ ಅಬಕಾರಿ ಇಲಾಖೆಗೆ ಹೊಸ ಸ್ವರೂಪ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಜೆಟ್ ಸಿದ್ಧತೆಗೆ ಪೂರ್ವಭಾವಿಯಾಗಿ ಇಲಾಖಾವಾರು ಸಭೆ ನಡೆಸಿದ ಅವರು, ‘ಅಬಕಾರಿ ಉದ್ಯಮ ವ್ಯಾಪ್ತಿ ಹೆಚ್ಚಿಸಿಕೊಂಡಿದೆ. ಯಾವುದೇ ಉದ್ಯಮ ವ್ಯಾಪ್ತಿ ಹೆಚ್ಚಿಸಿಕೊಂಡಾಗ ಬದಲಾವಣೆ ಆಗಲು ಸಮಯ ಬೇಕಾಗುತ್ತದೆ’ ಎಂದರು.

‘ರಾಜ್ಯದಲ್ಲಿ ನಕಲಿ ಮದ್ಯ ತಯಾರಿ ಮತ್ತು ಹೊರರಾಜ್ಯದಿಂದ ಬರುವ ನಕಲಿ ಮದ್ಯ ತಡೆಗೆ ಈಗಾಗಲೇ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಸರ್ಕಾರಕ್ಕೆ ಆದಾಯ ಕೂಡ ಬರುತ್ತದೆ. ನಕಲಿ ಜಾಲದ ಹಿಂದೆ ಯಾರೇ ಭಾಗಿಯಾದರೂ ಮುಲಾಜಿಲ್ಲದೆ ಅಮಾನತು ಮಾಡುವಂತೆ ಆಯುಕ್ತರಿಗೆ ಸೂಚಿಸಿದ್ದೇನೆ’ ಎಂದರು.

‘ಅಬಕಾರಿ ಇಲಾಖೆಯಲ್ಲಿ ನಡೆಯುತ್ತಿರುವ ಕಿರುಕುಳ ತಪ್ಪಿಸಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ, ಒಟ್ಟು ವ್ಯವಸ್ಥೆಯಲ್ಲಿ ಬದಲಾವಣೆ ತರಲು ಇಲಾಖೆಗೆ ಹೊಸ ಸ್ವರೂಪ ನೀಡಲಾಗುವುದು. ಆರ್ಥಿಕ ಮಿತಿಗಳನ್ನು ನೋಡಿಕೊಂಡು ನೌಕರರಿಗೆ ಸೌಲಭ್ಯ ನೀಡಲಾಗುವುದು. ಅಲ್ಲದೆ, ಕಾನೂನುಗಳನ್ನು ಬದಲಾಯಿಸುವ ಬಗ್ಗೆಯೂ ಗಮನಹರಿಸಲಾಗುವುದು’ ಎಂದರು.

‘ಸಿಎಲ್ –7, ಸಿಎಲ್–9 ವಿಚಾರದಲ್ಲಿ ಸಾಕಷ್ಟು ದೂರುಗಳು ಬಂದಿವೆ. ಅದೆಲ್ಲವನ್ನೂ ಸರಿಪಡಿಸುವ ಕೆಲಸ ಆಗಬೇಕು. ವ್ಯಾಪಾರ, ಆದಾಯ ಮೂರು ಮುಖ್ಯ ಅಂಶಗಳನ್ನು ಇಟ್ಟುಕೊಂಡು ಕೆಲಸ ಮಾಡುವಂತೆಯೂ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದರು.

‘ಮದ್ಯ ದರ ಹೆಚ್ಚಳ ಚಿಂತನೆ ಇಲ್ಲ’

ಬೆಂಗಳೂರು: ‘ರಾಜ್ಯದಲ್ಲಿ ಮದ್ಯದ ದರ ಹೆಚ್ಚಿಸುವ ಚಿಂತನೆ ಮಾಡಿಲ್ಲ’ ಎಂದು ಅಬಕಾರಿ ಸಚಿವ ಕೆ. ಗೋಪಾಲಯ್ಯ ಹೇಳಿದರು.

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಬಜೆಟ್ ಪೂರ್ವಭಾವಿ ಸಭೆಯ ಬಳಿಕ ಮಾತನಾಡಿದ ಅವರು, ‘ಆರ್ಥಿಕ ಇಲಾಖೆಯ ಕಾರ್ಯದರ್ಶಿ ಮತ್ತು ಮುಖ್ಯಮಂತ್ರಿ ಜೊತೆ ಶುಕ್ರವಾರ (ಫೆ. 25) ಸಭೆ ನಡೆಯಲಿದೆ. ಈ ಸಭೆಯಲ್ಲಿ ಇಲಾಖೆಯ ಸ್ಥಿತಿಗತಿ ಬಗ್ಗೆ ಚರ್ಚಿಸಲಾಗುವುದು’ ಎಂದರು.

‘ಪ್ರಸಕ್ತ ವರ್ಷ ಈಗಾಗಲೇ ಇಲಾಖೆ ₹ 23,247 ಕೋಟಿ ತೆರಿಗೆ ಸಂಗ್ರಹಿಸಿದ್ದು, ಆರ್ಥಿಕ ವರ್ಷದ ಅಂತ್ಯಕ್ಕೆ ಇದು ₹ 25 ಸಾವಿರ ಕೋಟಿ ತಲುಪುವ ನಿರೀಕ್ಷೆಯಿದೆ’ ಎಂದರು.

‘ಇಲಾಖೆಯ ಆರ್ಥಿಕ ಪರಿಸ್ಥಿತಿಯನ್ನು ಪರಾಮರ್ಶಿಸಿದ ಬಳಿಕ ಕೆಲವು ಸಲಹೆ, ಸೂಚನೆಗಳನ್ನು ಮುಖ್ಯಮಂತ್ರಿ ನೀಡಿದ್ದಾರೆ. ಇಲಾಖೆಯ ಅಭಿವೃದ್ಧಿಗೂ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ’ ಎಂದರು.

ಏಕಪಕ್ಷೀಯ ತೀರ್ಮಾನ, ಸರ್ಕಾರದ ವಿರುದ್ಧ ಸದಸ್ಯರ ಅಸಮಾಧಾನ

ಸಂದರ್ಶನ ಅಂಕ ಕಡಿತ: ಕೆಪಿಎಸ್‌ಸಿಗೆ ಗೊತ್ತೇ ಇಲ್ಲ!

• ರಾಜೇಶ್ ರೈ ಚಟ್ಲ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳ ಆಯ್ಕೆಗೆ ನಡೆಯುವ ವ್ಯಕ್ತಿತ್ವ ಪರೀಕ್ಷೆಯ (ಸಂದರ್ಶನ) ಅಂಕವನ್ನು 50ರಿಂದ 25ಕ್ಕೆ ಕಡಿಮೆ ಮಾಡುವಂತೆ ಸಚಿವ ಸಂಪುಟಕ್ಕೆ ಸಲ್ಲಿಕೆಯಾಗಿದ್ದ ಪ್ರಸ್ತಾವನೆ ಬಗ್ಗೆ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಮಾಹಿತಿಯೇ ಇರಲಿಲ್ಲ!

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಈ ಪ್ರಸ್ತಾವನೆ ಸಿದ್ಧಪಡಿಸಿ, ಮುಖ್ಯಮಂತ್ರಿಯವರ ಅನುಮೋದನೆ ಪಡೆದು ಫೆ. 18ರಂದು ನಡೆದ ಸಚಿವ ಸಂಪುಟ ಸಭೆಗೆ ಮಂಡಿಸಿತ್ತು. ಸಂಪುಟ ಸಭೆ ಇದಕ್ಕೆ ಒಪ್ಪಿಗೆಯನ್ನೂ ನೀಡಿದೆ.

ಆ ಬೆನ್ನಲ್ಲೆ, ತಮ್ಮ ಜೊತೆ ಚರ್ಚಿಸದೆ ಸರ್ಕಾರ ತೆಗೆದುಕೊಂಡ ಈ ಕ್ರಮಕ್ಕೆ ಕೆಪಿಎಸ್‌ಸಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಆಯೋಗಕ್ಕೆ ಯಾವುದೇ ಮಾಹಿತಿ ನೀಡದೆ ತೆಗೆದುಕೊಂಡ ತೀರ್ಮಾನವನ್ನು ಮರು ಪರಿಶೀಲಿಸಬೇಕು ಎಂದು ಮುಖ್ಯಮಂತ್ರಿಗೆ ಕೆಪಿಎಸ್‌ಸಿ ಸದಸ್ಯರು ಮನವಿ ಸಲ್ಲಿಸಿದ್ದಾರೆ. ಅಲ್ಲದೆ, ಕಾನೂನು ಸಚಿವ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಖ್ಯಪರೀಕ್ಷೆ ಮತ್ತೆ 1,750ಕ್ಕೆ

ಮುಖ್ಯಪರೀಕ್ಷೆಯ ಅಂಕವನ್ನು 1,250ಕ್ಕೆ ಇಳಿಸಿದ್ದರಿಂದ ಹಲವರು ಒಂದೇ ರೀತಿಯ ಅಂಕ ಪಡೆಯುವ ಸಂಭವವಿದೆ. ಹೀಗಾಗಿ, ಒಟ್ಟು ಅಂಕವನ್ನು 1,750 ಉಳಿಸಿಕೊಳ್ಳಲು ಮುಖ್ಯ ಪರೀಕ್ಷೆಯ ಐದು ಪತ್ರಿಕೆಗಳ ಪ್ರತಿ ಪತ್ರಿಕೆಗಳ ಅಂಕಗಳನ್ನು 250ರಿಂದ 350ಕ್ಕೆ ಹೆಚ್ಚಿಸಬೇಕೆಂಬ ಡಿಪಿಎಆರ್ ಪ್ರಸ್ತಾವನೆಗೂ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಪ್ರಜಾವಾಣಿ ವಿಶೇಷ

ಈ ಹಿಂದೆ, ನೇಮಕಾತಿಗೆ ಮುಖ್ಯ ಪರೀಕ್ಷೆಯಲ್ಲಿ ಅರ್ಹತಾ ಪರೀಕ್ಷೆಯಾಗಿ ತಲಾ 150 ಅಂಕಗಳ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆ ಇವೆ. ಈ ಪತ್ರಿಕೆಗಳ ಅಂಕಗಳನ್ನು ಆಯ್ಕೆಗೆ ಪರಿಗಣಿಸುವುದಿಲ್ಲ. ಉಳಿದಂತೆ, 250 ಅಂಕಗಳ ಪ್ರಬಂಧ ಪತ್ರಿಕೆ, ಒಟ್ಟು 1,000 ಅಂಕಗಳ ಸಾಮಾನ್ಯ ಜ್ಞಾನದ 4 ಪತ್ರಿಕೆಗಳು, ಜೊತೆಗೆ ಒಂದು ಐಚ್ಛಿಕ ವಿಷಯದ ತಲಾ 250 ಅಂಕಗಳ ಎರಡು ಪತ್ರಿಕೆಗಳು ಇರುತ್ತಿದ್ದವು. ಹೀಗೆ 1,750 ಅಂಕಗಳಿಗೆ ಮುಖ್ಯ ಪರೀಕ್ಷೆ ನಡೆಸಲಾಗುತ್ತಿತ್ತು. ಮುಖ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ಉಲ್ಲೇಖಿಸಿ, 1:3 ಅನುಪಾತದಲ್ಲಿ 200 ಅಂಕಗಳಿಗೆ ವ್ಯಕ್ತಿತ್ವ ಪರೀಕ್ಷೆ ನಡೆಸಲಾಗುತ್ತಿತ್ತು.

ವ್ಯಕ್ತಿತ್ವದ ಪರೀಕ್ಷೆ ಅಂಕವನ್ನು 25ಕ್ಕೆ ಇಳಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ಆಗಿದೆ. ಈ ವಿಷಯದಲ್ಲಿ ಸರ್ಕಾರವೇ ‘ಸುಪ್ರೀಂ’. ವಿವೇಚನೆಯಂತೆ ತೀರ್ಮಾನ ತೆಗೆದುಕೊಂಡಿದೆ.

ಜಿ. ಸತ್ಯವತಿ, ಕಾರ್ಯದರ್ಶಿ, ಕೆಪಿಎಸ್‌ಸಿ

ಎಲ್ಲ ಅಭ್ಯರ್ಥಿಗಳು ಒಂದೇ ವಿಷಯದ ಪತ್ರಿಕೆಗಳನ್ನು ಬರೆಯಬೇಕೆಂದು ಈ ನಿಯಮಕ್ಕೆ 2020ರ ಜೂನ್ 6ರಂದು ತಿದ್ದುಪಡಿ ಮಾಡಿದ ಸರ್ಕಾರ, ತಲಾ 250 ಅಂಕಗಳ ಐಚ್ಛಿಕ ವಿಷಯದ ಪತ್ರಿಕೆಗಳನ್ನು ತೆಗೆದುಹಾಕಿತ್ತು. ಹೀಗಾಗಿ, ಮುಖ್ಯಪರೀಕ್ಷೆಯಲ್ಲಿ ಆಯ್ಕೆಗೆ ಪರಿಗಣಿಸುವ ಅಂಕಗಳನ್ನು 1,250ಕ್ಕೆ ಇಳಿಸಲಾಗಿತ್ತು.ಅಲ್ಲದೆ,ವ್ಯಕ್ತಿತ್ವಪರೀಕ್ಷೆಯಅಂಕಗಳನ್ನು 50ಕ್ಕೆ ನಿಗದಿಪಡಿಸಲಾಗಿತ್ತು.

‘ಮುಖ್ಯ ಪರೀಕ್ಷೆಯ ಒಟ್ಟು ಅಂಕಗಳು 1,250 ಆಗಿರುವುದರಿಂದ ಪರೀಕ್ಷೆ ಬರೆದ ಅಭ್ಯರ್ಥಿಗಳಲ್ಲಿ ಹಲವರು ಒಂದೇ ರೀತಿಯ ಅಂಕಗಳನ್ನು ಪಡೆಯುವ ಸಂಭವ ಇರುತ್ತದೆ. ಈ ಗೊಂದಲ ತಡೆಯಲು ಒಟ್ಟು ಅಂಕ 1,750ನ್ನು ಉಳಿಸಿಕೊಳ್ಳಲು ಮತ್ತು ವ್ಯಕ್ತಿತ್ವ ಪರೀಕ್ಷೆಯ ಅಂಕಗಳನ್ನು 50 ಅಂಕಗಳಿಂದ 25 ಅಂಕಗಳಿಗೆ ಕಡಿಮೆ ಮಾಡಲು ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳಿಗೆ ತಿದ್ದುಪಡಿ ತರುವ ಅಗತ್ಯವಿದೆ’ ಎಂದು ಡಿಪಿಎಆರ್ ಪ್ರಸ್ತಾವನೆ ಸಲ್ಲಿಸಿತ್ತು. ಆದರೆ, ಈ ಪ್ರಸ್ತಾವನೆ ಬಗ್ಗೆ ಕೆಪಿಎಸ್‌ಸಿಗೆ ಯಾವುದೇ ಮಾಹಿತಿ ಇರಲಿಲ್ಲ.

ಈ ಬಗ್ಗೆ ಪ್ರತಿಕ್ರಿಯಿಸಿದ ಆಯೋಗದ ಸದಸ್ಯರೊಬ್ಬರು, ‘ಮಾಧ್ಯಮಗಳ ಮೂಲಕ ಸಂಪುಟ ಸಭೆಯ ತೀರ್ಮಾನ ಗೊತ್ತಾಯಿತು. ಸರ್ಕಾರ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿದೆ. ಈ ಬಗ್ಗೆ ಮುಖ್ಯಮಂತ್ರಿಗೆ ಆಕ್ಷೇಪಣೆ ಸಲ್ಲಿಸಿದ್ದೇವೆ. ಮರು ಪರಿಶೀಲಿಸುವ ಬಗ್ಗೆ ಭರವಸೆ ನೀಡಿದ್ದಾರೆ’ ಎಂದರು.

‘ಎರಡು ಐಚ್ಛಿಕ ವಿಷಯಗಳನ್ನು ಕೈಬಿಟ್ಟು ಮುಖ್ಯಪರೀಕ್ಷೆಯ ಒಟ್ಟು ಅಂಕಗಳನ್ನು 1,250 ಕ್ಕೆ ಇಳಿಸುವಂತೆ ಈ ಹಿಂದೆ ಸರ್ಕಾರಕ್ಕೆ ಆಯೋಗದಿಂದ ಶಿಫಾರಸು ಮಾಡಲಾಗಿತ್ತು. ಆದರೆ, ವ್ಯಕ್ತಿತ್ವ ಪರೀಕ್ಷೆಯ ಅಂಕವನ್ನು 200 ರಿಂದ 50 ಅಂಕಕ್ಕೆ ಕಡಿಮೆ ಮಾಡುವ ತೀರ್ಮಾನವನ್ನು ಸರ್ಕಾರ ಸ್ವಯಂಪ್ರೇರಿತವಾಗಿ ತೆಗೆದುಕೊಂಡಿತ್ತು. ಆಗ ಆಯೋಗದಲ್ಲಿ ನಿರ್ಣಯ ತೆಗೆದುಕೊಂಡು ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಲಾಗಿತ್ತು’ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜಿ. ಸತ್ಯವತಿ ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಅವರನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಲಭ್ಯರಾಗಲಿಲ್ಲ.



ಶ್ರೀರಂಗಪಟ್ಟಣ ಬಳಿ ಕಾವೇರಿ ನದಿಯಲ್ಲಿ ಹರ್ಷ ಅವರ ಚಿತಾಭಸ್ಮವನ್ನು ವಿಸರ್ಜಿಸುವ ಮುನ್ನ ಚಿತಾಭಸ್ಮ ಕುಡಿಕೆಗೆ ವೈದಿಕರು ಅಸ್ಥಿ ಸಂಚಯನದ ವಿಧಿ, ವಿಧಾನಗಳನ್ನು ಪೂರೈಸಿದರು. ಪ್ರಮೋದ್ ಮುತಾಲಿಕ್, ಋಷಿಕುಮಾರ ಸ್ವಾಮೀಜಿ ಇದ್ದಾರೆ

ಹರ್ಷ ಚಿತಾಭಸ್ಮ ವಿಸರ್ಜನೆ

ಶ್ರೀರಂಗಪಟ್ಟಣ: ಶಿವಮೊಗ್ಗದಲ್ಲಿ ಹತ್ಯೆಯಾದ ಭಜರಂಗದಳ ಸಂಘಟನೆಯ ಕಾರ್ಯಕರ್ತ ಹರ್ಷ ಅವರ ಚಿತಾಭಸ್ಮವನ್ನು ಗುರುವಾರ ಪಟ್ಟಣದ ಪಶ್ಚಿಮವಾಹಿನಿ ಬಳಿ ಕಾವೇರಿ ನದಿಯಲ್ಲಿ ವಿಸರ್ಜನೆ ಮಾಡಲಾಯಿತು.

ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್, ಕಾಳಿ ಮಠದ ಋಷಿ ಕುಮಾರ ಸ್ವಾಮೀಜಿ ಪೂಜಾ ಕಾರ್ಯ ನೆರವೇರಿಸಿ ಅಸ್ಥಿಯನ್ನು ನದಿಯಲ್ಲಿ ವಿಸರ್ಜಿಸಿದರು. ಹರ್ಷ ಕುಟುಂಬದ ಯಾವೊಬ್ಬ ಸದಸ್ಯರೂ ಇರಲಿಲ್ಲ, ಬಜರಂಗದಳ, ಶ್ರೀರಾಮ ಸೇನೆಯ ನೂರಾರು ಕಾರ್ಯಕರ್ತರು ‘ಜೈಶ್ರೀರಾಮ್, ಹರ್ಷ ಅಮರ್ ರಹೇ’ ಘೋಷಣೆ ಕೂಗಿದರು.

ಚಿತಾಭಸ್ಮದ ಕುಡಿಕೆಯನ್ನು ಋಷಿ ಕುಮಾರ ಸ್ವಾಮೀಜಿ 100 ಮೀಟರ್ ದೂರ ತಲೆಯ ಮೇಲೆ ಹೊತ್ತು ನದಿ ತೀರಕ್ಕೆ ತಂದರು. ಕಾವೇರಿ ನದಿಯ ದಡದಲ್ಲಿಟ್ಟು ವಿಸರ್ಜನಾ ಪೂರ್ವ ವಿಧಿ, ವಿಧಾನ ನಡೆಸಲಾಯಿತು. ಅರ್ಚಕ ಸಂದೀಪ್ ನೇತೃತ್ವದ ವೈದಿಕರ ತಂಡ ಕುಡಿಕೆಗೆ ಸಂಚಯನಾದಿ ಕೈಂಕರ್ಯ ನೆರವೇರಿಸಿತು.

ಪೊಲೀಸ್ ಭದ್ರತೆ: ಸ್ವಾಮೀಜಿಗೆ ಸ್ಥಳೀಯ ಪೊಲೀಸರು ಭದ್ರತೆ ಒದಗಿಸಿದರು. ತುಮಕೂರು ಮಾರ್ಗವಾಗಿ ಬಂದ ಅವರನ್ನು ಶುಕ್ರವಾರ ರಾತ್ರಿ ನಾಗಮಂಗಲ ಪೊಲೀಸರು ಕರೆತಂದರು. ನಾಗಮಂಗಲ ಪ್ರವಾಸಿ ಮಂದಿರದಲ್ಲಿ ರಾತ್ರಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅವರು ಪ್ರವಾಸಿ ಮಂದಿರದಲ್ಲಿ ಮಲಗಿದ್ದಾಗ ಚಿತಾಭಸ್ಮದ ಕುಡಿಕೆಯನ್ನು ಅಪ್ಪಿ ಮಲಗಿದ್ದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಎನ್‌ಕೌಂಟರ್ ಮಾಡಿ: ಈ ಸಂದರ್ಭದಲ್ಲಿ ಮಾತನಾಡಿದ ಪ್ರಮೋದ್ ಮುತಾಲಿಕ್, ‘ಕೊಲೆಗಾರರನ್ನು ಎನ್‌ಕೌಂಟರ್ ಮಾಡಬೇಕು ಎಂದು ಗೃಹ ಸಚಿವರನ್ನು ಒತ್ತಾಯಿಸಲಾಗಿದೆ. ಇಡೀ ರಾಜ್ಯದ ಜನರಿಗೆ ಹರ್ಷನ ಸಾವಿನ ಕೋಪವಿದೆ. ಅವನ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳುವುದಿಲ್ಲ. ಕೊಲೆಗಾರರ ಸಾವಿನ ನಂತರವಷ್ಟೇ ಆತನ ಆತ್ಮಕ್ಕೆ ಶಾಂತಿ ದೊರೆಯುತ್ತದೆ’ ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ
ನಾಳೆ

ಅಭಿನವ ಬೀChi ಗಂಗಾವತಿ ಪ್ರಾಣೇಶ್ ಅವರೊಂದಿಗೆ ನಗೆ ಮಾತು
ಸೆಲೆಬ್ರಿಟಿ LIVE
ಬೆಳಿಗ್ಗೆ 11ರಿಂದ 12
ಹಿಸ್ಟರಿ ಆಫ್ ಹೇಟ್
ಮತಾಂತರ ನಿಷೇಧ- ಹಗೆತನಕ್ಕೆ ಕಾನೂನು ರೂಪ ನೀಡುವ ಯತ್ನ!

ಸಾಣೇಹಳ್ಳಿ ಶ್ರೀಗೆ ‘ರಾಷ್ಟ್ರೀಯ ಕನ್ನಡ ಭಾರತಿ ರಂಗ ಪ್ರಶಸ್ತಿ’

ಹೊಸದುರ್ಗ: ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರನ್ನು ದೆಹಲಿಯ ಕರ್ನಾಟಕ ಸಂಘ ಪ್ರಸಕ್ತ ಸಾಲಿನ ‘ರಾಷ್ಟ್ರೀಯ ಕನ್ನಡ ಭಾರತಿ ರಂಗ ಪ್ರಶಸ್ತಿ’ಗೆ ಆಯ್ಕೆ ಮಾಡಿದೆ.

ರಂಗಭೂಮಿಗೆ ಸ್ವಾಮೀಜಿ ಅವರು ನೀಡಿದ ಕೊಡುಗೆ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹ 50 ಸಾವಿರ ನಗದು, ಪ್ರಶಸ್ತಿ ಫಲಕ, ಸ್ಮರಣಿಕೆಗಳನ್ನು ಒಳಗೊಂಡಿದೆ. ಫೆ.26ರಂದು ದೆಹಲಿಯಲ್ಲಿ ನಡೆಯುವ ಸಮಾರಂಭದಲ್ಲಿ ಸ್ವಾಮೀಜಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು ಎಂದು ದೆಹಲಿಯ ಕರ್ನಾಟಕ ಸಂಘ ತಿಳಿಸಿದೆ.

ಕರ್ನಾಟಕ ಬಯಲಾಟ ಅಕಾಡೆಮಿ: ಏಪ್ರಿಲ್‌ನಲ್ಲಿ ಪ್ರಶಸ್ತಿ ಪ್ರದಾನ

ಐವರಿಗೆ ಗೌರವ, 10 ಮಂದಿಗೆ ವಾರ್ಷಿಕ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಕರ್ನಾಟಕ ಬಯಲಾಟ ಅಕಾಡೆಮಿಯು ಪ್ರಸಕ್ತ ಸಾಲಿನಲ್ಲಿ ಐವರು ಕಲಾವಿದರಿಗೆ ಗೌರವ ಪ್ರಶಸ್ತಿ, 10 ಕಲಾವಿದರಿಗೆ ವಾರ್ಷಿಕ ಪ್ರಶಸ್ತಿ ಪ್ರಕಟಿಸಿದೆ.

ಗೌರವ ಪ್ರಶಸ್ತಿ ತಲಾ ₹50 ಸಾವಿರ, ವಾರ್ಷಿಕ ಪ್ರಶಸ್ತಿ ತಲಾ ₹25 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಏಪ್ರಿಲ್ ಮೊದಲ ವಾರ ಬಾಗಲಕೋಟೆಯಲ್ಲಿ ನಡೆಯಲಿದೆ ಎಂದು ಎಂದು ಅಕಾಡೆಮಿ ರಿಜಿಸ್ಟ್ರಾರ್ ಎನ್.ಹೇಮಾವತಿ ಅವರು ತಿಳಿಸಿದ್ದಾರೆ.

ಗೌರವ ಪ್ರಶಸ್ತಿ ಪುರಸ್ಕೃತರು: ಮಂಡ್ಯ ಜಿಲ್ಲೆ ದೊಡ್ಡಬೋಗನಹಳ್ಳಿಯ ನಾಗಮ್ಮ ಕೃಷ್ಣಯ್ಯ (ಗೊಂಬೆಯಾಟ), ಬಾಗಲಕೋಟೆ ಜಿಲ್ಲೆಯ ಶಿರೂರಿನ ಶಾಂತಪ್ಪ ಬಾಡದ (ದೊಡ್ಡಾಟ), ಕೊಪ್ಪಳ ಜಿಲ್ಲೆ ಅಳವಂಡಿ ಗ್ರಾಮದ ಹನುಮಂತಪ್ಪ ಎಲಿಗಾರ (ಸಣ್ಣಾಟ), ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಇಂಗಳಗಿಯ ಎಂ.ಎಸ್. ಮಾಳವಾಡ (ದೊಡ್ಡಾಟ), ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನ ಸಿದ್ದಮ್ಮನಹಳ್ಳಿಯ ಡಿ.ಬಿ.ಶಿವಣ್ಣ.

ವಾರ್ಷಿಕ ಪ್ರಶಸ್ತಿ ಪುರಸ್ಕೃತರು: ಬೀದರ್ ಜಿಲ್ಲೆ ಔರಾದ ತಾಲ್ಲೂಕಿನ ಜಿಗರಾರ ಗ್ರಾಮದ ರಾಮಶೆಟ್ಟಿ ಬಂಬುಳಗೆ (ದೊಡ್ಡಾಟ), ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಚಿಕ್ಕಲದಿನ್ನಿಯ ನಾಗಪ್ಪ ಸೂರ್ಯವಂಶಿ (ಸಣ್ಣಾಟ), ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಲೋಕಾಪೂರದ ದುರಗವ್ವ (ಪಾರಿಜಾತ), ಹಾವೇರಿ ಜಿಲ್ಲೆ ಶಿಗ್ಗಾವಿ ತಾಲ್ಲೂಕಿನ ಗುಂಡಣ್ಣನವರ ಓಣಿ ಕಬನೂರಿನ ರಾಮಪ್ಪ ಕುರಬರ (ದೊಡ್ಡಾಟ), ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕೆರೆ ಮಾಸ್ತಿಹೊಳೆಯ ನಿಂಗನಗೌಡ ಪಾಟೀಲ (ಸಣ್ಣಾಟ).

ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ಕೊಂಕಣಗಾಂವ ಗ್ರಾಮದ ರೇವಗೊಂಡ ಬಿರಾದಾರ (ಬಯಲಾಟ), ಬಳ್ಳಾರಿ ತಾಲ್ಲೂಕು ಎಮ್ಮಿಗನೂರಿನ ಕೆ.ಹೇಮಾರಡ್ಡಿ (ಬಯಲಾಟ), ಬೆಂಗಳೂರು ನಗರದ ಡಾ. ಟಿ. ಗೋವಿಂದರಾಜು (ತೊಗಲು ಗೊಂಬೆ), ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನ ಯಲ್ಲಾಲಿಂಗ ನಗರದ ಜಿ.ವೀರನಗೌಡ ಚಂದ್ರಪ್ಪ (ದೊಡ್ಡಾಟ), ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಚಮಕೇರಿಯ ಶಿವಪ್ಪ ಕುಂಬಾರ (ಪಾರಿಜಾತ).

ಗೌರವ ಪ್ರಶಸ್ತಿ ಪುರಸ್ಕೃತರು

ನಾಗಮ್ಮ ಕೃಷ್ಣಯ್ಯ | ಶಾಂತಪ್ಪ ಬಾಡ | ಹನುಮಂತಪ್ಪ ಎಲಿಗಾರ | ಎಂ.ಎಸ್.ಮಾಳವಾಡ | ಡಿ.ಬಿ.ಶಿವಣ್ಣ

ವಾರ್ಷಿಕ ಪ್ರಶಸ್ತಿ ಪುರಸ್ಕೃತರು

ಜಿ.ವೀರನಗೌಡ ಚಂದ್ರಪ್ಪ | ನಿಂಗನಗೌಡ ಪಾಟೀಲ | ರಾಮಪ್ಪ ಕುರಬರ | ನಾಗಪ್ಪ ಸೂರ್ಯವಂಶಿ | ಡಾ.ಟಿ ಗೋವಿಂದರಾಜು | ರೇವಗೊಂಡ ಬಿರಾದಾರ

ದುರಗವ್ವ | ರಾಮಶೆಟ್ಟಿ ಬಂಬುಳಗೆ | ಕೆ.ಹೇಮಾರಡ್ಡಿ | ಶಿವಪ್ಪ ಕುಂಬಾರ

ಹಿಜಾಬ್: ಇಂದು ವಿಚಾರಣೆ ಮುಕ್ತಾಯ

ಬೆಂಗಳೂರು: ಹಿಜಾಬ್ ನಿರ್ಬಂಧ ವಿವಾದಕ್ಕೆ ಸಂಬಂಧಿಸಿದ ಎಲ್ಲ ರಿಟ್ ಅರ್ಜಿಗಳ ವಿಚಾರಣೆಯನ್ನು ಶುಕ್ರವಾರ (ಫೆ.25) ಪೂರ್ಣಗೊಳಿಸುವುದಾಗಿ ಹೈಕೋರ್ಟ್ ಮೌಖಿಕವಾಗಿ ತಿಳಿಸಿದೆ.

ಹಿಜಾಬ್ ಧರಿಸಿ ತರಗತಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಕೆಲ ಶಾಲೆ-ಕಾಲೇಜು ಆಡಳಿತ ಮಂಡಳಿಗಳ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಎಲ್ಲ ರಿಟ್ ಅರ್ಜಿಗಳ ವಿಚಾರಣೆಯನ್ನು, ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಮತ್ತು ಜೆ.ಎಂ.ಖಾಜಿ ಅವರಿದ್ದ ಮೂವರು ಸದಸ್ಯರ ಸಾಂವಿಧಾನಿಕ ನ್ಯಾಯಪೀಠ ಗುರುವಾರ ಮುಂದುವರಿಸಿತು.

ವಿಚಾರಣೆ ವೇಳೆ ಈ ವಿಷಯ ತಿಳಿಸಿದ ಮುಖ್ಯ ನ್ಯಾಯಮೂರ್ತಿಗಳು, ‘ಎಲ್ಲ ಅರ್ಜಿದಾರರು ತಮ್ಮ ಆಕ್ಷೇಪಣೆ ಅಥವಾ ವಾದ ಮಂಡನೆಯ ಅಂಶಗಳನ್ನು ಲಿಖಿತ ರೂಪದಲ್ಲಿ ಇನ್ನು ಎರಡು ಮೂರು ದಿನಗಳಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಬೇಕು’ ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿದರು.

‘ನ್ಯೂ ಹೊರೈಝನ್’ ಕಾಲೇಜು ವಿದ್ಯಾರ್ಥಿನಿಯರ ಪರ ವಾದ ಮಂಡಿಸಿದ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಅಬ್ದುಲ್ ಮಜೀದ್ ದಾರ್, ‘ವಿಗ್ರಹಗಳನ್ನು ಅಪವಿತ್ರಗೊಳಿಸಿದರೆ, ಜನರ ಭಾವನೆ ಘಾಸಿಗೊಂಡಿದೆ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಸಮಸ್ಯೆ ಉಂಟು ಮಾಡಿದೆ ಎನ್ನಬಹುದು. ಆದರೆ, ಮಹಿಳೆಯರು ತಲೆಯನ್ನು ಮುಚ್ಚುವುದು ಯಾವ ರೀತಿಯ ಸಾರ್ವಜನಿಕ ಸುವ್ಯವಸ್ಥೆಯ ಸಮಸ್ಯೆಗೆ ಎಡೆ ಮಾಡಿಕೊಡುತ್ತದೆ’ ಎಂದು ನ್ಯಾಯಪೀಠವನ್ನು ಪ್ರಶ್ನಿಸಿದರು.

‘ಭಾರತ ಹಿಂದೂ ಅಥವಾ ಇಸ್ಲಾಮಿಕ್ ರಾಷ್ಟ್ರವಲ್ಲ, ಪ್ರಜಾಸತ್ತಾತ್ಮಕ ಜಾತ್ಯತೀತ ಗಣರಾಜ್ಯ. ಇಷ್ಟು ದೊಡ್ಡ ದೇಶಕ್ಕೆ ಸ್ಕಾರ್ಫ್ ಒಂದು ಸಣ್ಣ ಸಮಸ್ಯೆ. ಸಮವಸ್ತ್ರಕ್ಕೆ ಸಮಾನವಾದ ಸ್ಕಾರ್ಫ್ ಧರಿಸಿದರೆ, ಯಾವ ಸ್ವರ್ಗ ಕುಸಿಯುತ್ತದೆ, ಸ್ಕಾರ್ಫ್ ಧರಿಸಿದರೆ, ಸಾರ್ವಜನಿಕ ಸುವ್ಯವಸ್ಥೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ’ ಎಂದು ಕೇಳಿದರು.

ಉಡುಪಿ ಪಿಯು ಕಾಲೇಜು ಉಪನ್ಯಾಸಕರ ಪರ ಹಿರಿಯ ವಕೀಲ ಗುರು ಕೃಷ್ಣಕುಮಾರ್, ‘ಸರ್ಕಾರದ ಆಕ್ಷೇಪಾರ್ಹ ಆದೇಶವು ಧಾರ್ಮಿಕ ಹಕ್ಕುಗಳಲ್ಲಿ ಮಧ್ಯಪ್ರವೇಶ ಮಾಡುವ ಉದ್ದೇಶ ಹೊಂದಿಲ್ಲ. ಶಿಕ್ಷಣದಲ್ಲಿ ಜಾತ್ಯತೀತ ಚಟುವಟಿಕೆ ಮುಂದುವರಿಸುವ ಉದ್ದೇಶದಿಂದ ಈ ಆದೇಶ ಹೊರಡಿಸಲಾಗಿದೆಯೇ ವಿನಾ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುವ ಉದ್ದೇಶದಿಂದಲ್ಲ. ಹೀಗಾಗಿ, ಅರ್ಜಿದಾರರ ವಾದವನ್ನು ಸಮರ್ಥಿಸಲು ಆಗದು’ ಎಂದರು.

‘ಇದು ಅಲ್ಲಾಹುವಿನ ಆಜ್ಞೆ’

‘ಹಿಜಾಬ್ ಮಹಿಳೆಯ ಘನತೆ ಹೆಚ್ಚಿಸುತ್ತದೆ, ಶುದ್ಧೀಕರಿಸುತ್ತದೆ. ಅಷ್ಟೇ ಅಲ್ಲ ನಮ್ರತೆಯನ್ನೂ ನೀಡುತ್ತದೆ. ಇದು ನೈತಿಕತೆಯನ್ನು ಹೆಚ್ಚಿಸುತ್ತದೆ. ಪ್ರವಾದಿಯವರು ಹೇಳಿರುವ ಎಲ್ಲದಕ್ಕೂ ನಾವು ಬದ್ಧವಾಗಿರಬೇಕು. ಅವರನ್ನು ನಿರ್ಲಕ್ಷಿಸುವಂತಿಲ್ಲ. ಇಲ್ಲವಾದರೆ ನಾವು ಮುಸ್ಲಿಮರಾಗಲು ಸಾಧ್ಯವಿಲ್ಲ. ಇದು ಅಲ್ಲಾಹುವಿನ ಆಜ್ಞೆಯಾಗಿದೆ. ಉತ್ತಮ ಜೀವನ ನಡೆಸಬೇಕಾದರೆ ನಾವು ಅದನ್ನು ಅನುಸರಿಸಬೇಕು’ ಎಂದು ಎ.ಎಂ.ದಾರ್ ಹಿಜಾಬ್ ಧಾರಣೆಯನ್ನು ಬಲವಾಗಿ ಸಮರ್ಥಿಸಿಕೊಂಡರು.

ಶಿಕ್ಷಕರು ನೀಡಿರುವ ದೂರುಗಳ ಬಗ್ಗೆ ಹಿರಿಯ ವಕೀಲ ಎಸ್.ಎಸ್. ನಾಗಾನಂದ ಅವರು ಮಾಹಿತಿ ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿದ್ದೇವೆ. ವರದಿಯನ್ನು ನ್ಯಾಯಪೀಠಕ್ಕೆ ನೀಡುತ್ತೇವೆ.

ಪ್ರಭುಲಿಂಗ ಕೆ.ನಾವದಗಿ, ಅಡ್ವೊಕೇಟ್ ಜನರಲ್

ಹಿಜಾಬ್: ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಣೆ

ಮಂಗಳೂರು: ಉಡುಪಿ ನಗರದ ಎಂಜಿಎಂ ಕಾಲೇಜಿಗೆ ಗುರುವಾರ ಹಿಜಾಬ್ ಧರಿಸಿ ಬಂದಿದ್ದ ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಲಾಯಿತು. ಹಿಜಾಬ್ ಬಿಚ್ಚಿಟ್ಟು ಕಾಲೇಜು ಪ್ರವೇಶಿಸುವಂತೆ ಪ್ರಾಂಶುಪಾಲರು ನೀಡಿದ ಸೂಚನೆ ಪಾಲಿಸದ 30ಕ್ಕೂ ಹೆಚ್ಚು ವಿದ್ಯಾರ್ಥಿನಿಯರನ್ನು ಕಾಲೇಜು ಆವರಣದಿಂದ ಹೊರಗೆ ಕಳಿಸಲಾಯಿತು.

‘ಕೇಸರಿ ಶಾಲು– ಹಿಜಾಬ್ ಸಂಘರ್ಷದ ಬಳಿಕ ಕಾಲೇಜು ಆವರಣ ಪ್ರವೇಶಿಸಲೂ ಅನುಮತಿ ನೀಡಲಾಗುತ್ತಿಲ್ಲ. ಗ್ರಂಥಾಲಯಕ್ಕೂ ಹೋಗಲು ಸಾಧ್ಯವಾಗುತ್ತಿಲ್ಲ. ಈಗಾಗಲೇ ಆಂತರಿಕ ಪರೀಕ್ಷೆಗಳಿಂದ ವಂಚಿತರಾಗಿದ್ದು, ಮಾನಸಿಕವಾಗಿ ಹಿಂಸೆ ಅನುಭವಿಸಿದ್ದೇವೆ’ ಎಂದು ವಿದ್ಯಾರ್ಥಿನಿಯರು ಅಳಲು ತೋಡಿಕೊಂಡರು.

ಮಸೀದಿ ಆವರಣಕ್ಕೆ ಬಿಯರ್ ಬಾಟಲಿ: ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ನಾವೂರು ಸಮೀಪದ ಮುರ ಜುಮ್ಮಾ ಮಸೀದಿ ಆವರಣಕ್ಕೆ ದುಷ್ಕರ್ಮಿಗಳು ಬಿಯರ್ ಬಾಟಲಿ ಎಸೆದು ದಾಂದಲೆ ನಡೆಸಿದ್ದಾರೆ.

ಬಿಜೆಪಿಗೆ ಮುಜುಗರ ತಂದ ‘ಎಂಎಲ್‌ಎ ಅಭಿಯಾನ’

ಒಂದನೇ ಪುಟದಿಂದ

ಇದುವರೆಗೂ ಹಿಂದೂಗಳ ಮತಗಳನ್ನು ಪಡೆದು ಅಧಿಕಾರ ಅನುಭವಿಸಿದವರಿಗೇ ಮತ್ತೆ ಅಧಿಕಾರ ನೀಡುವುದು ಬೇಡ. ದೇಶಭಕ್ತರ ಕುಟುಂಬದ ಸದಸ್ಯರಿಗೆ ಅವಕಾಶ ದೊರೆಯಬೇಕು. ಕೊಲೆಯಾಗುತ್ತಿರುವುದು ಶಾಸಕ, ಸಂಸದ, ಸಚಿವರ ಮಕ್ಕಳಲ್ಲ. ಬಡವರ ಮಕ್ಕಳು. ಹಿಂದುತ್ವಕ್ಕಾಗಿ ಹೋರಾಡುವ ಬಡವರ ಕುಟುಂಬಗಳಿಗೆ ಇನ್ನಾದರೂ ಗೌರವ, ಸ್ಥಾನಮಾನ ಸಿಗಬೇಕು ಎಂಬಂತಹ ಪೋಸ್ಟರ್‌ಗಳು ಹರಿದಾಡುತ್ತಿರುವುದು ಬಿಜೆಪಿ ನಾಯಕರಿಗೆ ಇರಿಸುಮುರಿಸು ಮೂಡಿಸಿದೆ.

ಗಾಯಗೊಂಡವರಿಗೆ ಸಾಂತ್ವನ: ಮೆರವಣಿಗೆ ವೇಳೆ ಗಾಯಗೊಂಡ ಹಿಂದೂ ಸಂಘಟನೆಗಳ ಮೂವರು ಕಾರ್ಯಕರ್ತರನ್ನು ಮೃತ ಹರ್ಷ ಅವರ ಕುಟುಂಬದ ಸದಸ್ಯರು ಗುರುವಾರ ಮೆಗ್ಗಾನ್ ಆಸ್ಪತ್ರೆಯಲ್ಲಿ ಭೇಟಿ ಮಾಡಿ ಸಾಂತ್ವನ ಹೇಳಿದರು. ‘ನೀವು ನಮ್ಮ ಮಗ ಹರ್ಷ ಇದ್ದಂತೆ. ನಿಮ್ಮ ಯೋಗಕ್ಷೇಮ ನಮ್ಮ ಜವಾಬ್ದಾರಿ’ ಎಂದು ಹಣಕಾಸಿನ ನೆರವು ನೀಡಿದರು.

ಎಸ್‌ಪಿ ವರ್ಗಾವಣೆ ಊಹಾಪೋಹ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀಪ್ರಸಾದ್ ಅವರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರ ವರ್ಗಾವಣೆ ಸುದ್ದಿ ಊಹಾಪೋಹವಷ್ಟೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಸ್ಪಷ್ಟಪಡಿಸಿದರು.

ಮುಂದುವರಿದ ನೆರವು: ಮೃತ ಹರ್ಷನ ಕುಟುಂಬಕ್ಕೆ ನೆರವು ನೀಡುವ ಕಾರ್ಯ ಮುಂದುವರಿದಿದೆ. ಸಚಿವರಾದ ಆರಗ ಜ್ಞಾನೇಂದ್ರ, ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಬಸನಗೌಡ ಪಾಟೀಲ ಯತ್ನಾಳ್, ಅರ್ಚಕ ವೃಂದ ಸೇರಿ ಹಲವರು ಗುರುವಾರ ಹಣಕಾಸಿನ ನೆರವು ನೀಡಿದರು.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಒಂದು ಪೋಸ್ಟರ್

ಶಿವಮೊಗ್ಗ ನಗರದಲ್ಲಿ ಶಾಲಾ, ಕಾಲೇಜು ನಾಳೆ ಆರಂಭ

ನಗರದಲ್ಲಿ ಬಂದ್ ಮಾಡಲಾಗಿದ್ದ ಶಾಲಾ, ಕಾಲೇಜುಗಳನ್ನು ಫೆ.26ರಿಂದ ಪುನರಾರಂಭಿಸುವಂತೆ ಜಿಲ್ಲಾಧಿಕಾರಿ ಸೆಲ್ವಮಣಿ ಸೂಚಿಸಿದ್ದಾರೆ.

ಫೆ.26ರ ಬೆಳಿಗ್ಗೆ 6ಕ್ಕೆ ಕರ್ಫ್ಯೂ ಅಂತ್ಯವಾಗಲಿದೆ. ನಗರ ಶಾಂತವಾಗಿದೆ. ಯಾವುದೇ ಅಹಿತಕರ ಘಟನೆಗಳು ಮರುಕಳಿಸಿಲ್ಲ. ಅಂದು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಶಾಲಾ, ಕಾಲೇಜುಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಿದ್ದಾರೆ.

ಹರ್ಷ ಹತ್ಯೆ: ಮತ್ತಿಬ್ಬರ ಬಂಧನ

ಹರ್ಷ ಹತ್ಯೆ ಪ್ರಕರಣದಲ್ಲಿ ಮತ್ತೆ ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ಆರೋಪಿಗಳ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

ಭದ್ರಾವತಿ ಹೊಸಮನೆಯ ಅಬ್ದುಲ್ ರೋಶನ್ (24), ವಾದಿ ಎ ಹುದಾ ನಗರದ ಜಾಫರ್ ಸಾದಿಕ್ ಅಲಿಯಾಸ್ ಭದ್ರಿ (55) ಬಂಧಿತರು.

ಹರ್ಷ ಹತ್ಯೆ ಪ್ರಕರಣದ ತ್ವರಿತ ವಿಚಾರಣೆಗೆ ಕೋರ್ಟ್‌ಗೂ ಮನವಿ ಮಾಡಲಾಗುವುದು. ವಿಶೇಷ ವಕೀಲರನ್ನು ನೇಮಿಸಲಾಗುವುದು. ಎಲ್ಲ ಆರೋಪಿಗಳಿಗೂ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಲಾಗುವುದು.

ಆರಗ ಜ್ಞಾನೇಂದ್ರ, ಗೃಹ ಸಚಿವ

ಹಿಂದೂಗಳ ಸಮಾಧಿಯ ಮೇಲೆ ರಾಜಕಾರಣ ಮಾಡುವುದಿಲ್ಲ. ಅವರ ರಕ್ಷಣೆಗೆ ಬದ್ಧ. ಶಿವಮೊಗ್ಗದ ಘಟನೆಯೇ ಕೊನೆ ಎಂದು ಪ್ರತಿಜ್ಞೆ ಮಾಡುತ್ತೇವೆ. ಕಾರ್ಯಕರ್ತರ ನಿರೀಕ್ಷೆ ಹುಸಿಗೊಳಿಸುವುದಿಲ್ಲ.

ಬಸನಗೌಡ ಪಾಟೀಲ ಯತ್ನಾಳ್, ವಿಜಯಪುರ ಶಾಸಕ

ನೆಹರೂ–ಗಾಂಧಿ ಕುಟುಂಬದ ಒಂದು ಕಾಲದ ಭದ್ರಕೋಟೆಯ ಮೇಲೆ ವಿವಿಧ ಪಕ್ಷಗಳ ಕಣ್ಣು

ಅಮೇಠಿಯಲ್ಲಿ ವಲಸೆ ಮುಖಂಡರ ಹಣಾಹಣಿ

ಅಮೇಠಿ (ಪಿಟಿಐ): ಈ ಮೊದಲು, ನೆಹರೂ-ಗಾಂಧಿ ಕುಟುಂಬದ 'ಭದ್ರ-ಕೋಟೆ'ಯಾಗಿದ್ದ ಉತ್ತರ ಪ್ರದೇಶದ ಅಮೇಠಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಈ ಬಾರಿ ಪಕ್ಷಾಂತರಿಗಳನ್ನು ಮುಂದಿಟ್ಟುಕೊಂಡು ಗೆಲ್ಲಲು ಹೊರಟಿವೆ. ಈ ಕ್ಷೇತ್ರದ ಮೇಲಿದ್ದ ಹಿಡಿತವನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಬಿಜೆಪಿ ಹಿಡಿತ ಬಿಗಿಯಾಗಿದೆ.

2019ರಲ್ಲಿ ಕಾಂಗ್ರೆಸ್‌ನಿಂದ ಹೊರ ಬಂದಿದ್ದ ಹಿರಿಯ ಮುಖಂಡ ಸಂಜಯ್ ಸಿಂಹ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಕಾಂಗ್ರೆಸ್ ಪಕ್ಷವೂ ಸಹ ಪಕ್ಷಾಂತರಿ ಆಶಿಶ್ ಶುಕ್ಲಾ ಅವರನ್ನು ಉಮೇದು ವಾರರನ್ನಾಗಿ ಘೋಷಿಸಿದೆ. ಬಿಎಸ್‌ಪಿಯಲ್ಲಿದ್ದ ಶುಕ್ಲಾ 2017ರಲ್ಲಿ ಬಿಜೆಪಿ ಸೇರಿದ್ದರು. ಈಗ ಚುನಾವಣೆಯಲ್ಲಿ ಸ್ಪರ್ಧಿಸುವ ಸಲುವಾಗಿ ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಫೆ. 27ರಂದು ಇಲ್ಲಿ ಮತದಾನ ನಡೆಯಲಿದೆ. ಸಿಂಹ ಅವರನ್ನು ಅಮೇಠಿಯ ಅಭ್ಯರ್ಥಿ ಎಂದು ಬಿಜೆಪಿ ಘೋಷಿಸಿದ ತಕ್ಷಣವೇ ಶುಕ್ಲಾ ಅವರು ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಅವರನ್ನು ಅಮೇಠಿಯ ಕಾಂಗ್ರೆಸ್ ಅಭ್ಯರ್ಥಿ ಎಂದು ಘೋಷಿಸಲಾಯಿತು. ಇಂದಿರಾ ಗಾಂಧಿ ಅವರ ಅವಧಿಯಿಂದಲೂ ಈ ಕ್ಷೇತ್ರದ ಉಮೇದುವಾರಿಕೆಯು ದೇಶದ ಗಮನ ಸೆಳೆದಿದೆ.

ಪಕ್ಷ ಸೇರುತ್ತಿದ್ದಂತೆಯೇ ಸಿಂಹ ಮತ್ತು ಶುಕ್ಲಾ ಅವರು ಹೊಸ ಪಕ್ಷಗಳಿಗೆ ತಮ್ಮ ನಿಷ್ಠೆಯನ್ನು ಪ್ರದರ್ಶಿಸಿದ್ದಾರೆ. ತಮ್ಮ ಪಕ್ಷಗಳ ಪ್ರಣಾಳಿಕೆ ಹಿಡಿದು ಮತದಾರರ ಮನೆ ಬಾಗಿಲು ಬಡಿಯುತ್ತಿದ್ದಾರೆ. ಈ ಮಧ್ಯೆ, ಸಮಾಜವಾದಿ ಪಕ್ಷ (ಎಸ್‌ಪಿ), ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಗಾಯತ್ರಿ ಪ್ರಜಾಪತಿ ಅವರ ಪತ್ನಿಯನ್ನು ಇಲ್ಲಿಂದ ಕಣಕ್ಕಿಳಿಸಿದೆ. ಮಾಯಾವತಿ ನೇತೃತ್ವದ ಬಿಎಸ್‌ಪಿಯು ತನ್ನ ಹಳೆಯ ದಲಿತ–ಬ್ರಾಹ್ಮಣ ಸೂತ್ರವನ್ನು ನೆಚ್ಚಿಕೊಂಡಿದ್ದು, ರಾಗಿಣಿ ತಿವಾರಿ ಅವರನ್ನು ಹೆಸರಿಸಿದೆ.

ರಾಹುಲ್ ಗಾಂಧಿ ಅವರ ವಿರುದ್ಧ ಬಿಜೆಪಿ ನಾಯಕಿ, ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು 2014ರ ಲೋಕ ಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ ಬಳಿಕ ಅಮೇಠಿ ಕದನ ಹೆಚ್ಚು ಕಾವು ಪಡೆಯಿತು. ಈ ಚುನಾವಣೆಯಲ್ಲಿ ಅವರು ಸೋತರೂ, 2019ರಲ್ಲಿ ರಾಹುಲ್ ವಿರುದ್ಧ ಜಯಭೇರಿ ಬಾರಿಸಿದ್ದರು.

2017ರ ವಿಧಾನಸಭಾ ಚುನಾವಣೆಯಲ್ಲೂ ಬಿಜೆಪಿ ಇಲ್ಲಿ ಹೊಸ ಇತಿಹಾಸ ಬರೆಯಿತು. ಅಮೇಠಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಐದು ವಿಧಾನಸಭಾ ಕ್ಷೇತ್ರಗಳ ಪೈಕಿ ನಾಲ್ಕು ವಿಧಾನಸಭಾ ಕ್ಷೇತ್ರಗಳನ್ನು ಪಕ್ಷ ತನ್ನ ತೆಕ್ಕೆಗೆ ತೆಗೆದುಕೊಂಡಿತು. ಉಳಿದಿದ್ದ ಗೌರಿಗಂಜ್ ಕ್ಷೇತ್ರವು ಎಸ್‌ಪಿ ಪಾಲಾಯಿತು. ಕಾಂಗ್ರೆಸ್ ತನ್ನ ಭದ್ರ ನೆಲೆಯಲ್ಲಿ ಒಂದೂ ಕ್ಷೇತ್ರ ಗೆಲ್ಲದೆ ಸೊನ್ನೆ ಸುತ್ತಿತ್ತು.

ಅಮೇಠಿಯಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ 'ಜನವಿಶ್ವಾಸ ಯಾತ್ರೆ'ಯಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಸಂಸದೆ ಸ್ಮೃತಿ ಇರಾನಿ–ಪಿಟಿಐ ಸಂಗ್ರಹ ಚಿತ್ರ

ಹೇಗಿದೆ ಜನಮನ...

'ನಾನು ಹುಡುಗಿ, ಹೋರಾಡಬಲ್ಲೆ' ಎಂಬ ಘೋಷಣೆಯೊಂದಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಆರಂಭಿಸಿದ ಅಭಿಯಾನವೂ ಪ್ರಭಾವ ಬೀರಿಲ್ಲ ಎನ್ನುತ್ತಾರೆ ಕಾಲೇಜು ಹುಡುಗಿಯರು.

'ನಾವು ಓದಬೇಕೇ ಅಥವಾ ಗೂಂಡಾಗಳ ವಿರುದ್ಧ ಹೋರಾಡಬೇಕೇ' ಎಂದು ವಿದ್ಯಾರ್ಥಿನಿ ಪ್ರೀತಿ ಅವರು ಪ್ರಶ್ನಿಸುತ್ತಾರೆ. ತಮ್ಮ ಪ್ರದೇಶದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುವವರಿಗೆ ಮಾತ್ರ ತಮ್ಮ ಮತ ಎನ್ನುತ್ತಾರೆ ಪಾಂಡೆಪುರ ಬಜಾರ್‌ನ ನಿವಾಸಿಗಳಾದ ಜಲಂಗ್ ಬಹದ್ದೂರ್ ಸಿಂಗ್, ಲೋಕನಾಥ್ ಯಾದವ್ ಹಾಗೂ ರಾಮ್ ಬಹದ್ದೂರ್ ಯಾದವ್.

ರಾಹುಲ್ ಗಾಂಧಿ ಅವರ ವರ್ಚಸ್ಸೇ, ಜಾತಿ ಸಮೀಕರಣವಾಗಲೀ ಇಲ್ಲಿ ನಡೆಯುವುದಿಲ್ಲ ಎನ್ನುತ್ತಾರೆ ಸ್ಥಳೀಯ ಬಿಜೆಪಿ ಮುಖಂಡ ರಾಜೇಶ್ ಅಗ್ರಹರಿ. ಪೆಟ್ರೋಲಿಯಂ ಸಚಿವಾಲಯ, ಸಿಆರ್‌ಪಿಎಫ್ ಕ್ಯಾಂಪ್ ಹಾಗೂ ಏಮ್ಸ್ ರಾಷ್ಟ್ರೀಯ ಹೆದ್ದಾರಿಗಳ ಸಾಧ್ಯವಾಗದ್ದನ್ನು ಸ್ಮೃತಿ ಇರಾನಿ ಅವರು ಸಾಧಿಸಿದ್ದಾರೆ ಎನ್ನುತ್ತಾರೆ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಪ್ರಶಾಂತ್ ತ್ರಿಪಾಠಿ. 'ರಾಹುಲ್ ಗಾಂಧಿ ಅವರು ಅಮೇಠಿಯಲ್ಲಿ ಗೌರಿಗಂಜ್‌ನಲ್ಲಿ ಒಂದೇ ಒಂದು ಟಿವಿ ಸ್ಟುಡಿಯೊ ತೆರೆದಿಲ್ಲ. ಸ್ಮೃತಿ ಇರಾನಿ ಅವರ ಕ್ಷೇತ್ರಕ್ಕೆ ಒಂದಷ್ಟು ಅನುದಾನ ಘಟಕ ತಂದಿದ್ದಾರೆ' ಎಂಬುದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ದುರ್ಗೇಶ್ ತ್ರಿಪಾಠಿ ಅವರ ಮಾತು.

ಕಾರ್ಯತಂತ್ರ

- ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹಾಗೂ ಅಮೇಠಿ ಸಂಸದೆ ಸ್ಮೃತಿ ಇರಾನಿ ಅವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಸಿಂಹ ಅವರು ಮತ ಕೇಳುತ್ತಿದ್ದಾರೆ
- ಒಂದೊಮ್ಮೆ ರಾಹುಲ್ ಗಾಂಧಿ ವಿರುದ್ಧ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಒಂದು ಲಕ್ಷಕ್ಕೂ ಹೆಚ್ಚು ಮತ ಗಳಿಸಿದ್ದ ಶುಕ್ಲಾ ಅವರು ಪ್ರಿಯಾಂಕಾ ಗಾಂಧಿ ಅವರ 'ನಾನು ಹುಡುಗಿ ಹೋರಾಡಬಲ್ಲೆ' ಅಭಿಯಾನ ಹಾಗೂ ಪಕ್ಷದ ಪ್ರಣಾಳಿಕೆಯನ್ನು ಮುಂದಿಟ್ಟುಕೊಂಡು ಜನರ ಬಳಿ ಹೋಗುತ್ತಿದ್ದಾರೆ
- ಎಸ್‌ಪಿ ಸರ್ಕಾರದಲ್ಲಿ ಸಚಿವರಾಗಿದ್ದ ಹಾಗೂ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಗಾಯತ್ರಿ ಪ್ರಜಾಪತಿ ಅವರಿಗೆ ನ್ಯಾಯ ದೊರಕಿಸುವ ಉದ್ದೇಶದಿಂದ ಅವರ ಪತ್ನಿ ಮಹಾರಾಜಿ ಪ್ರಜಾಪತಿ ಅವರು ಸ್ಪರ್ಧಿಸುತ್ತಿದ್ದಾರೆ.
- ಬ್ರಾಹ್ಮಣ-ದಲಿತ ಮತಗಳನ್ನು ಕ್ರೋಡೀಕರಿಸಲು ಬಿಎಸ್‌ಪಿ ಉದ್ದೇಶಿಸಿದೆ

ಮತಬ್ಯಾಂಕ್ ಕಳೆದುಕೊಳ್ಳುವ ಭೀತಿ: ಪ್ರಧಾನಿ ಮೋದಿ ಲೇವಡಿ

ಅಮೇಠಿ (ಉತ್ತರ ಪ್ರದೇಶ) (ಪಿಟಿಐ): ತಮ್ಮ ಮತಬ್ಯಾಂಕ್ ಕಳೆದುಕೊಳ್ಳುವ ಭೀತಿಯಿಂದ, ಅಹಮದಾಬಾದ್ ಸ್ಫೋಟ ಪ್ರಕರಣದ ತೀರ್ಪನ್ನು ಸ್ವಾಗತಿಸುವ ಧೈರ್ಯವನ್ನು ಪ್ರತಿಪಕ್ಷಗಳು ತೋರಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಆರೋಪಿಸಿದ್ದಾರೆ.

ಅಮೇಠಿ, ಪ್ರಯಾಗರಾಜ್ ಹಾಗೂ ಸುಲ್ತಾನ್‌ಪುರದಲ್ಲಿ ಸರಣಿ ಚುನಾವಣಾ ಸಮಾವೇಶಗಳನ್ನು ಉದ್ದೇಶಿಸಿ ಪ್ರಧಾನಿ ಮಾತನಾಡಿದರು. ಕಾಶಿ ಹಾಗೂ ಅಯೋಧ್ಯೆಯಲ್ಲಿ ತಾವು ಕೈಗೊಂಡ ಅಭಿವೃದ್ಧಿ ಕೆಲಸಗಳನ್ನು ಪ್ರತಿಪಕ್ಷಗಳು ಕೋಮುದೃಷ್ಟಿಯಿಂದ ನೋಡುತ್ತಿವೆ ಎಂದು ಅವರು ಪ್ರಯಾಗರಾಜ್‌ನಲ್ಲಿ ಆರೋಪಿಸಿದರು. 'ಪ್ರಯಾಗರಾಜ್' ಎಂಬ ಹೆಸರು ಹೆಮ್ಮೆಯ ಪ್ರತೀಕ. ಆದರೆ ಈ ಹೆಸರನ್ನು ವಿರೋಧಿಸುವವರು ಜನರಿಗಾಗಿ ಏನನ್ನು ಮಾಡಬಲ್ಲರು' ಎಂದು ಪ್ರಧಾನಿ ಟೀಕಿಸಿದರು. ಯೋಗಿ ಆದಿತ್ಯನಾಥ ಅವರ ಸರ್ಕಾರವು ಅಲಹಾಬಾದ್ ಅನ್ನು ಪ್ರಯಾಗರಾಜ್ ಎಂದು ಬದಲಿಸಿತ್ತು.

'ಭಾರತದಲ್ಲಿರುವ ತೀರ್ಥ-ಕ್ಷೇತ್ರಗಳಿಗೆ ಭೇಟಿ ನೀಡಲು ನಾವು ಅವಕಾಶ ಕಲ್ಪಿಸಿದರೆ, ಪ್ರತಿಪಕ್ಷಗಳು ಇದನ್ನು ಕೋಮುದೃಷ್ಟಿಯಿಂದ ನೋಡುತ್ತವೆ' ಎಂದು ಪ್ರಧಾನಿ ಮೋದಿ ಆರೋಪಿಸಿದರು.

ಚುನಾವಣಾ ಕಣದಲ್ಲಿ...

- ಉತ್ತರ ಪ್ರದೇಶದಲ್ಲಿ ಬುಧವಾರ ನಡೆದ ನಾಲ್ಕನೇ ಹಂತದ ಮತದಾನದಲ್ಲಿ ಶೇ 61.5ರಷ್ಟು ಜನರು ಮತ ಚಲಾಯಿಸಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ. ರಾಜ್ಯದ 403 ವಿಧಾನಸಭಾ ಕ್ಷೇತ್ರಗಳ ಪೈಕಿ 231 ಕ್ಷೇತ್ರಗಳ ಮತದಾನ ಪೂರ್ಣಗೊಂಡಿದೆ
- ಉತ್ತರಾಖಂಡದಲ್ಲಿ ಚಲಾವಣೆಯಾದ ಅಂಚೆ ಮತಪತ್ರಗಳನ್ನು ತಿರುಚಲಾಗಿದೆ ಎಂಬ ಆರೋಪವನ್ನು ಗಂಭೀರವಾಗಿ ಪರಿಗಣಿಸಿರುವ ಚುನಾವಣಾ ಆಯೋಗ, ವರದಿ ನೀಡುವಂತೆ ಪಿತೋರಗಢ ಜಿಲ್ಲಾಧಿಕಾರಿಗೆ ಸೂಚನೆ ನೀಡಿದೆ. ಸೇನಾ ಸಮವಸ್ತ್ರದಲ್ಲಿದ್ದ ವ್ಯಕ್ತಿಯೊಬ್ಬರು ಹಲವು ಅಂಚೆ ಮತಗಳ ಮೇಲೆ ಸಹಿ ಮಾಡುತ್ತಿರುವ ದೃಶ್ಯ ಇರುವ ವಿಡಿಯೊವನ್ನು ಬುಧವಾರ ಬಿಡುಗಡೆ ಮಾಡಿದ್ದ ರಾಜ್ಯ ಕಾಂಗ್ರೆಸ್ ನಾಯಕ ಹರೀಶ್ ರಾವತ್ ಅವರು ತನಿಖೆಗೆ ಆಗ್ರಹಿಸಿದ್ದರು

ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಪ್ರತಾಪಗಡದಲ್ಲಿ ಗುರುವಾರ ನಡೆಸಿದ ಪ್ರಚಾರದ ವೇಳೆ ಜನ ಕಿಕ್ಕಿರಿದು ಸೇರಿದ್ದರು –ಪಿಟಿಐ ಚಿತ್ರ

ಗೋವಾ: ಪಕ್ಷಾಂತರಿ ಶಾಸಕರ ಅರ್ಜಿ ವಜಾ

ಪಣಜಿ (ಪಿಟಿಐ): ತಮ್ಮ ಪಕ್ಷಗಳನ್ನು ತೊರೆದು 2019ರಲ್ಲಿ ಆಡಳಿತಾರೂಢ ಬಿಜೆಪಿ ಸೇರಿದ 12 ಶಾಸಕರನ್ನು ಅನರ್ಹಗೊಳಿಸಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ವಜಾಗೊಳಿಸಿದ್ದ ಗೋವಾ ವಿಧಾನಸಭಾ ಸ್ಪೀಕರ್ ಆದೇಶವನ್ನು ಬಾಂಬೆ ಹೈಕೋರ್ಟ್‌ನ ಗೋವಾ ಪೀಠ ಗುರುವಾರ ಎತ್ತಿ ಹಿಡಿದಿದೆ.

ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಪಕ್ಷದ 10 ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿ ಗೋವಾ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗಿರೀಶ್ ಚೋಡಣಕರ್ ಅವರು 2019ರ ಜುಲೈನಲ್ಲಿ ಅರ್ಜಿ ಸಲ್ಲಿಸಿದ್ದರು. ಮಹಾರಾಷ್ಟ್ರವಾದಿ ಗೋಮಾಂತಕ್ ಪಕ್ಷದ ಇಬ್ಬರು ಶಾಸಕರು ಬಿಜೆಪಿ ಸೇರಿದ್ದನ್ನು ಪ್ರಶ್ನಿಸಿ ಆ ಪಕ್ಷದ ಶಾಸಕ ಸುದಿನ್ ಧವಳಿಕರ್ ಅವರು ಅದೇ ವರ್ಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಮೈಸೂರು ಸಕ್ಕರೆ ಕಂಪನಿ ನಿಯಮಿತ
ಸಕ್ಕರೆ ನಗರ, ಮಂಡ್ಯ.–571 402
ಮೊಬೈಲ್ ನಂ.9945754010 / 9480837958
ಸಂಖ್ಯೆ: ಕಂ.ಕಾ/ಷೇರು/ನ./17/2021–22 ದಿ:16.02.2022

ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿಯ ಷೇರುದಾರರಿಗೆ ಸೂಚಿಸುವುದೇನೆಂದರೆ, ಷೇರುದಾರರು ವಾರ್ಷಿಕ ಸಭೆ ಹಾಗೂ ಇತರೆ ಸಭೆ ಹಾಜರಾಗಿ ಸಿಡಿಎಸ್‌ಎಲ್/ಎನ್‌ಎಸ್‌ಡಿಎಲ್ ಮುಖಾಂತರ ಇ–ವೋಟಿಂಗ್ ಮಾಡಲು ಅವಶ್ಯಕ ದಾಖಲಾತಿಗಳನ್ನು ನವೀಕರಿಸುವುದು ಕಡ್ಡಾಯವಾಗಿರುವುದರಿಂದ ನಿಗಮದ ಎಲ್ಲಾ ಷೇರುದಾರರು ತಮ್ಮ ಆಧಾರ್ ಸಂಖ್ಯೆ, ಪಾನ್ ಸಂಖ್ಯೆ, ದೂರವಾಣಿ ಸಂಖ್ಯೆ ಮತ್ತು ಇ–ಮೇಲ್ ವಿಳಾಸವನ್ನು ದಿನಾಂಕ : **21.03.2022ರ ಸಂಜೆ 5.00 ಗಂಟೆಯೊಳಗೆ** ಈ ಕೆಳಕಂಡ ವಿಳಾಸಗಳಿಗೆ ಪೋಟೋ ಪ್ರತಿಯನ್ನು ಸಲ್ಲಿಸತಕ್ಕದ್ದು.
(1) ಕಂಪನಿ ಕಾರ್ಯದರ್ಶಿ ಕಛೇರಿ, ಮೈಸೂರು ಸಕ್ಕರೆ ಕಂಪನಿ ನಿ., ಸಕ್ಕರೆ ನಗರ, ಮಂಡ್ಯ–571402. (2) ಕೇಂದ್ರ ಕಛೇರಿ, ಮೈಸೂರು ಸಕ್ಕರೆ ಕಂಪನಿ ನಿ., ಮೈಷುಗರ್ ಕಟ್ಟಡ, ಜೆ.ಸಿ.ರಸ್ತೆ, ಬೆಂಗಳೂರು–560002 ಹಾಗೂ **pamd_msco@yahoo.com** ಗೂ ಪೋಟೋ ಪ್ರತಿಯನ್ನು ಇ–ಮೇಲ್ ಮಾಡುವುದರ ಮೂಲಕ ತಮ್ಮ ದಾಖಲಾತಿಗಳನ್ನು ನವೀಕರಿಸಬೇಕೆಂದು ತಿಳಿಯಪಡಿಸಲಾಗಿದೆ.
ವಾಸಾಸಂಇ/ಸನಿ–ಮಂಡ್ಯ/ಎಂಸಿಎ/660/2021–22 ಸಹಿ/–ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ
ಸಂ: ಕಾನಿಕ/ಗ್ರಾಕುನೀ&ನೈ/ವಿ/ಬ/ಜೆಇ–1/Rurnbun/SW/ 2021-22/1836 ದಿನಾಂಕ: 23.02.2022

ಇ–ಟೆಂಡರು ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ – 2000 ರಂತೆ)
ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ ಬಳ್ಳಾರಿ. ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮತ್ತು ಸಂಡೂರು ತಾಲೂಕಿಗೆ ರೂರ್ಬನ್ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಓ.ಹೆಚ್.ಟಿ ಮತ್ತು ಪೈಪ್ ಲೈನ್ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಯೋಜನೆಯಡಿ ಅನುಮೋದನೆಗೊಂಡಿರುವ ಶುದ್ಧಕುಡಿಯುವ ನೀರಿನ ಘಟಕ ನಿರ್ಮಾಣ ಕಾಮಗಾರಿಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **(www.eproc.karnataka.gov.in)** ವೆಬ್ ಸೈಟ್ ನ್ನು ಸಂಪರ್ಕಿಸಲು ಕೋರಿದೆ. ಹಾಗೂ ಇ–ಪ್ರೋಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ : 24.02.2022 ರಿಂದ **Download** ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 10.03.2022 ರಂದು ಸಂಜೆ 4.00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11.03.2022 ಸಮಯ ಸಂಜೆ 5.00 ಗಂಟೆ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆಯನ್ನು ತಾಂತ್ರಿಕ ಬಿಡ್‌ಲ್ಲಿ ಅರ್ಹತೆ ಹೊಂದಿದವರಿಗೆ ತಿಳಿಸಲಾಗುವುದು ಹಾಗೂ ದಿನಾಂಕ 03.02.2022 ರಂದು ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ. ಬ್ಯಾಂಕ್ ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂನ್ಟೋನ್ ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ. ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿ: 07.03.2022 ರ 16.00 ಗಂಟೆಯವರೆಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದು.
ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾಕುನೀ&ನೈ.ವಿಭಾಗ, ಬಳ್ಳಾರಿ.

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಕಮಿಷನರ್ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು,
ಫೋನ್: 080-22211086 / 22212137. ಫ್ಯಾಕ್ಸ್: 080 22210117

ತಿದ್ದುಪಡಿ

ದಿನಾಂಕ: **24-02-2022** ರಂದು ಈ ಪ್ರತಿಕೆಯಲ್ಲಿ ಪ್ರಕಟವಾದ ಟೆಂಡರ್ ಸಂಖ್ಯೆ: **No: CPE(2)/UF SUPPLY-22/2021-22, ದಿನಾಂಕ 22.02.2022** ಟೆಂಡರ್ ಪ್ರಕಟಣೆಯಲ್ಲಿ ಬೆಂಗಳೂರು ವಿಭಾಗದ 5 ಜಿಲ್ಲೆಗಳ ಬದಲಾಗಿ ಬೆಂಗಳೂರು ವಿಭಾಗದ 1 ಜಿಲ್ಲೆಯೆಂದು ಓದಿಕೊಳ್ಳುವುದು. ಹೆಚ್ಚಿನ ಮಾಹಿತಿಗಾಗಿ ಈ ಸಂಬಂಧ ಟೆಂಡರ್ ದಾಸ್ತಾವೇಜು **https://eproc.karnataka.gov.in** ಮತ್ತು **http://www.schooleducation.kar.nic.in** ಗಳಲ್ಲಿ ಲಭ್ಯವಿದೆ.
DIPR/DDU/AAPL/RO3527/21-22
ಸಹಿ/–
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
ಕೋವಿಡ್-19 - ಗಾಬರಿ ಬೇಡ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು – 560 009.
ದೂರವಾಣಿ ಸಂ: 080–22876553, ಫ್ಯಾಕ್ಸ್: 080–22340139
ಇ–ಮೇಲ್: directorayush@gmail.com, jdayushme@gmail.com
ಸಂಖ್ಯೆ: ಆಯುಷ್/07/ವೈಶಿ(2)/2021–22. ದಿನಾಂಕ: 04–01–2022.

: ಪತ್ರಿಕಾ ಪ್ರಕಟಣೆ :

ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಪದವಿ ವ್ಯಾಸಂಗ ಮಾಡಲು ಪಾರಂಪರಿಕ ವೈದ್ಯರ ಮಕ್ಕಳಿಗೆ ವಿಶೇಷ ಪ್ರಕರಣದಡಿ ಪ್ರವೇಶಾತಿ ಪರಿಗಣಿಸಿ 2017–18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಕೆಳಕಂಡ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸರ್ಕಾರಿ ಕೋಟಾ ಸೀಟುಗಳಲ್ಲಿ ಎರಡು ಸೀಟುಗಳನ್ನು ಮೀಸಲಿರಿಸಿದೆ.

ಮಹಾವಿದ್ಯಾಲಯದ ಹೆಸರು : 1) ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಳ್ಳಾರಿ. **ಸೀಟುಗಳ ಸಂಖ್ಯೆ** : 01, 2) ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರು. **ಸೀಟುಗಳ ಸಂಖ್ಯೆ** : 01.

ಭಾರತ ಸರ್ಕಾರದ, ಆಯುಷ್ ಮಂತ್ರಾಲಯ, ನವದೆಹಲಿ, ಇವರ ಸೂಚನೆಯಂತೆ 2018–19ನೇ ಶೈಕ್ಷಣಿಕ ಸಾಲಿನಿಂದ ಆಯುಷ್ ಪದವಿ ಕೋರ್ಸ್‌ಗಳಿಗೆ NEET ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗಿರುತ್ತದೆ, ಆದ್ದರಿಂದ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ನಿಯಮಾನುಸಾರ NEET ಪರೀಕ್ಷೆಯಲ್ಲಿ ಅರ್ಹತೆಯನ್ನು ಹೊಂದಿದ ವಿದ್ಯಾರ್ಥಿಗಳ NEET ಜೇಷ್ಠತೆಯ ಆಧಾರದ ಮೇರೆಗೆ ಅವಕಾಶ ಕಲ್ಪಿಸಲಾಗುವುದು. ಪಾರಂಪರಿಕ ವೈದ್ಯರ ಮಕ್ಕಳು 2021–22ನೇ ಶೈಕ್ಷಣಿಕ ಸಾಲಿನಲ್ಲಿ NEET ಪರೀಕ್ಷೆಯಲ್ಲಿ ಭಾಗವಹಿಸಿ ಅರ್ಹತೆ ಪಡೆದ ವಿದ್ಯಾರ್ಥಿಗಳು ಮಾತ್ರ ಅರ್ಜಿಗಳನ್ನು ಈ ಪ್ರಕಟಣೆಯ ದಿನಾಂಕದ 15 ದಿನಗಳ ಒಳಗಾಗಿ ಆಯುಷ್ ನಿರ್ದೇಶನಾಲಯ. ಧನ್ವಂತರಿ ರಸ್ತೆ, ಬೆಂಗಳೂರು, ಇಲ್ಲಿಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ವಿವರಗಳಿಗಾಗಿ ಆಯಾ ಜಿಲ್ಲೆಗಳ ಜಿಲ್ಲಾ ಆಯುಷ್ ಅಧಿಕಾರಿಗಳನ್ನು ಸಂಪರ್ಕಿಸುವುದು.
ಸಹಿ/–
ವಾ.ಸಾ.ಸಂ.ಇ/ಬೆಂ.ನಗರ/3528/ಆಕಾರ್/2021–22 ಆಯುಕ್ತರು.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಾರ್ಯಾಲಯ,
ಜಲಮಂಡ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580001.
ದೂರವಾಣಿ :0836–2447090 ಫ್ಯಾಕ್ಸ್ : 0836–2446890
ಸಂ.ಕಜಮ/ಮುಅ(ಧಾ)/ಆಶ್ರೇಕಾಪಾಅ(ಬೆ)/ಉಮುಅ–1/ತಾಸ–2/ಸಅ–2/ಟೆಂಡರ್/2021–22/1757 ದಿನಾಂಕ: 24–02–2022

ತಿದ್ದುಪಡಿ

ಕಾಮಗಾರಿಯ ಹೆಸರು: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಕಾರ್ಯಕ್ರಮದಡಿಯಲ್ಲಿ ಕಾರವಾರ ನಗರಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ, ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು. **ವರ್ಕ್–ಇಂಡೆಂಟ್/3046/4ನೇ ಕರೆ**
ದಿನಾಂಕ: 11–02–2022 ರಂದು **"ಪ್ರಜಾವಾಣಿ", "ಹೊಸದಿಗಂತ"** (ಎಲ್ಲಾ ಆವೃತ್ತಿಗಳಲ್ಲಿ) **"ಕನ್ನಡಮ್ಮ"** ಹಾಗೂ **"ದಿ ಹಿಂದೂ"** (ಎಲ್ಲಾ ಕರ್ನಾಟಕ ಆವೃತ್ತಿಗಳಲ್ಲಿ) ಪ್ರಕಟಿಸಲಾದ ಮೇಲಿನ ಕಾಮಗಾರಿಯ ಅಲ್ಪಾವಧಿ ಟೆಂಡರ್ ಅಧಿಸೂಚನೆಯತ್ತ ಗಮನ ಸೆಳೆಯಲಾಗಿದೆ.
ಟೆಂಡರ್ ದಿನಾಂಕಗಳಲ್ಲಿ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.
1) ಬಿಡ್ ಸಲ್ಲಿಸಲು/ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : 08–03–2022 17:30 ಗಂಟೆಯ ವರೆಗೆ
2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 10–03–2022 11:00 ಗಂಟೆಯ ನಂತರ
ಮೇಲಿನ ವಿವರಗಳನ್ನು ಹೊರತುಪಡಿಸಿ ಟೆಂಡರ್ ಅಧಿಸೂಚನೆಯಲ್ಲಿನ ಉಳಿದ ಮಾಹಿತಿಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.
ಸಹಿ/–(ಕೆ. ವಿ. ಶ್ರೀಕೇಶವ)
ಮುಖ್ಯ ಅಭಿಯಂತರು
ವಾ.ಸಾ.ಇ./ಧಾರವಾಡ/1064/2021–22ದೇಶಪಾಂಡೆಪಬ್ಲಿಸಿಟಿ ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಧಾರವಾಡ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ–3:ಟೆಂಡರ್–114:2021–22 ದಿನಾಂಕ: 22.01.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿಯ ಹೆಸರು: ಇ– ಪ್ರೊಕ್ಯೊರ್‌ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ: ಲೆಕ್ಕ ಶೀರ್ಷಿಕೆ: 5054–04–337–0–01–422 ಜಿಲ್ಲಾ ಮತ್ತು ಆತರೆ ರಸ್ತೆಗಳು–ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಪಿ): (1) ಹೊಸದುರ್ಗ ಪಟ್ಟಣದ ಟಿ.ಬಿ. ಸರ್ಕಲ್ ಬಸವರಾಜಪ್ಪನವರ ಮನೆಯಿಮದ ಈರಭೋವಿ ಮನೆಯವರೆಗೆ ತಡೆಗೋಡೆ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿ. (ವ.ಇ–148140) ಟೆಂಡರ್ ಮೊತ್ತ: ರೂ. 100.00 ಲಕ್ಷ. **ಲೆಕ್ಕ ಶೀರ್ಷಿಕೆ: 5054–04–337–0–01–423 ಜಿಲ್ಲಾ ಮತ್ತು ಇತರೆ ರಸ್ತೆಗಳು – ಗಿರಿಜನ ಉಪಯೋಜನೆ (ಟಿ.ಎಸ್.ಪಿ):** (2) ಹೊಸದುರ್ಗ ತಾಲ್ಲೂಕಿನ ಸಿದ್ಧರಾಮನಗರದ ಪರಣ್ಣರ ತಿಮ್ಮಣ್ಣನ ಮನಯಿಂದ ಬೈಪಾಸ್ ರಸ್ತಯ ಕರಿಯಣ್ಣರ ರವಿಯವರ ಮನೆಯವರೆಗೆ (ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿಯ ಹಾಸ್ಟೆಲ್‌ವರೆಗೆ) ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ. (ವ.ಇ– 148436). ಟೆಂಡರ್ ಮೊತ್ತ: ರೂ. 100.00 ಲಕ್ಷ. **ಲೆಕ್ಕ ಶೀರ್ಷಿಕೆ: 3054–03–337–0–05–200 ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ (ಅತೀವೃಷ್ಟಿ ಮಳೆಹಾನಿ) ಯೋಜನೆ:** (3) ಹೊಸದುರ್ಗ ತಾಲ್ಲೂಕಿನ ರಾಜ್ಯ ಹೆದ್ದಾರಿ–48ರ ವಿಶ್ವನಾಥನ ಹಳ್ಳಿಯಿಂದ ಶಿರಾ ಗಡಿ ಮಾರ್ಗ ಚಿಕ್ಕಜಾಜೂರು, ಚಿತ್ರಹಳ್ಳಿ, ಹೆಚ್.ಡಿ.ಪುರ, ಮಾಡದಕೆರೆ, ಭರಮಗಿರಿ, ದೊಡ್ಡಘಟ್ಟ, ಆದಿವಾಲ, ರಂಗನಾಥಪುರ ರಸ್ತೆಯ ಕಿ.ಮೀ. 49.70ರಿಂದ 50.40 ಕಿ.ಮೀ.ವರೆಗೆ (ನಾಕೀಕೆರೆ ಗ್ರಾಮ ಪರಿಮಿತಿ) ರಸ್ತೆ ಅಭಿವೃದ್ಧಿ. (ವ.ಇಂ.149411) ಟೆಂಡರ್ ಮೊತ್ತ: ರೂ. 100.00 ಲಕ್ಷ.
ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 03.03.2022, ಸಮಯ 17:30. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 04.03.2022, ಸಮಯ 16:00. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 05.03.2022, ಸಮಯ 16:01. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 07.03.2022, ಸಮಯ 11:00.
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080–25501216 ಮತ್ತು 080–25501227ರಿಂದ ಮಾಹಿತಿ ಪಡೆಯಬಹುದು.
RO No. 976: DIPR/CTA/MCA/2021-22 ಸಹಿ/– ಕಾರ್ಯಪಾಲಕ ಅಭಿಯಂತರರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋ.ಇ ವಿಭಾಗ, ಶಿವಮೊಗ್ಗ.
ಸಂಖ್ಯೆ :ಕಾಪಾಅ/ಶಿವಿಶಿ/ಎಇ–3/ಐಎಫ್‌ಟಿ–48/2021–22
ದಿನಾಂಕ: 21.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಪರಿಶಿಷ್ಟಜಾತಿಯ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು
1. 5054–04–337–0–01–135 ಎಸ್.ಡಿ.ಪಿ (ಎಸ್.ಸಿ.ಪಿ) ಶಿಕಾರಿಪುರ 1 ಕಾಮಗಾರಿ
2. 5054–04–337–0–01–136 ಎಸ್.ಡಿ.ಪಿ (ಟಿ.ಎಸ್.ಪಿ) ಶಿಕಾರಿಪುರ 1 ಕಾಮಗಾರಿ
ಎಲ್ಲಾ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು
3. 3054–04–337–1–10–200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಶಿಕಾರಿಪುರ 1 ಕಾಮಗಾರಿ
4. 3054–03–337–0–05–200 ರಾ.ಹೆ ನಿರ್ವಹಣೆ ಶಿಕಾರಿಪುರ 2 ಕಾಮಗಾರಿ
5. 3054–03–337–0–05–200 ರಾ.ಹೆ ನಿರ್ವಹಣೆ (ಮಳೆಹಾನಿ ಕಾಮಗಾರಿ) ಶಿಕಾರಿಪುರ 1 ಕಾಮಗಾರಿ
6. 3054–04–337–1–10–200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ (ಮಳೆಹಾನಿ ಕಾಮಗಾರಿ) ಶಿಕಾರಿಪುರ 2 ಕಾಮಗಾರಿ
7. 2059–80–053–4–00–200 ನಿರ್ವಹಣೆ ಸೊರಬ ತಾಲ್ಲೂಕು 1 ಕಾಮಗಾರಿ

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ಕ್ರಸಂ:1,2,3,4,5,9 ರ ದಿನಾಂಕ:22–02–2022 ರಿಂದ 28–02–2022 ರವರೆಗೆ ಹಾಗೂ ಕ್ರಸಂ:6,7,8 ದಿನಾಂಕ:25–02–2022 ರಿಂದ ದಿನಾಂಕ:04–03–2022 ರವರೆಗೆ. ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : ಎಲ್ಲಾ ಕಾಮಗಾರಿಗಳಿಗೆ 3 ತಿಂಗಳು
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.
ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–164/02/ಎಂಸಿಎ/21–22/1293

ನಗರಸಭಾ ಕಾರ್ಯಾಲಯ, ಚನ್ನಪಟ್ಟಣ
ರಾಮನಗರ ಜಿಲ್ಲೆ – 560160
ದೂರವಾಣಿ: 080–27251235, Janahitha (Helpline): 080-23108108
Website: www.channapatnacity.mrc.gov.in, e-Mail: itstaff_ulb_channapatna@yahoo.co.in
ಸಂಖ್ಯೆ: ನಸಚ/ಸಕಾಅ(ಪ)/ಸಿಆರ್/15ನೇಹ.ಕಾ.ಯೋ–3/2021–22 ದಿನಾಂಕ: 24.02.2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಚನ್ನಪಟ್ಟಣ ನಗರಸಭೆಗೆ 2021–22ನೇ ಸಾಲಿನ 15ನೇ ಹಣಕಾಸು ಯೋಜನೆಯಡಿಲ್ಲಿ ಮಂಜೂರಾಗಿರುವ ಅನುದಾನದಲ್ಲಿ **ವಿವಿಧ ವಾಹನ, ಸಾಧನ ಮತ್ತು ಸಲಕರಣೆ ಹಾಗೂ ಯಂತ್ರೋಪಕರಣ ಖರೀದಿ ಮಾಡಲು 05 ಸಂಖ್ಯೆಯ ಟೆಂಡರ್‌ಗಳನ್ನು** ಇ–ಪ್ರೊಕ್ಯೂಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದ್ದು, ನೋಂದಾಯಿತ ಅರ್ಹ ಸರಬರಾಜುದಾರರು / ಬಿಡ್ಡರ್‌ಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ Goods Indent No. (1) **13544**, (2) **13545**, (3) **13548**, (4) **13549**, (5) **13550** ಗಳಿದ್ದು, ಅಂದಾಜು ಮೊತ್ತವು ಕ್ರಮವಾಗಿ, **ರೂ. 2.13 ಲಕ್ಷಗಳಿಂದ ರೂ. 30.00 ಲಕ್ಷಗಳವರೆಗೆ** ಹಾಗೂ ಇ.ಎಂ.ಡಿ ಮೊತ್ತವು ಕ್ರಮವಾಗಿ **ರೂ. 6,000 ರಿಂದ ರೂ. 59,000 ಗಳಿರುತ್ತದೆ.** ಹೆಚ್ಚಿನ ವಿವರಗಳು / ಷರತ್ತುಗಳಿಗಾಗಿ ಕಛೇರಿ ವೆಬ್‌ಸೈಟ್ **(www.channapatnacity.mrc.gov.in)** ವಿಳಾಸದಲ್ಲಿ ಮತ್ತು ಟೆಂಡರ್ ಬಗ್ಗೆ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **www.eproc.karnataka.gov.in** ನಲ್ಲಿ ಪಡೆಯಬಹುದಾಗಿದೆ. ಸದರಿ ಟೆಂಡರ್‌ಗಳನ್ನು **ದಿನಾಂಕ: 10.03.2022 ಸಂಜೆ 5:00** ಗಂಟೆಯೊಳಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹಾಗೂ **ದಿನಾಂಕ 11.03.2022 ಸಂಜೆ 5:01** ಗಂಟೆಯ ನಂತರ ಈ ಮೇಲ್ಕಂಡ ಟೆಂಡರ್ ಇಂಡೆಂಟ್‌ಗಳನ್ನು ತೆರೆಯಲಾಗುವುದು.

ಸಹಿ/–	ಸಹಿ/–	ಸಹಿ/–
(ಶ್ರೀ ಪ್ರಶಾಂತ್ ಪಿ)	(ಶ್ರೀಮತಿ ಹಸೀನಾ ಫರ್ಹೀನ್)	(ಶ್ರೀ ಶಿವನಂಕರಿಗೌಡ)
ಅಧ್ಯಕ್ಷರು,	ಉಪಾಧ್ಯಕ್ಷರು	ಪೌರಾಯುಕ್ತರು
ನಗರಸಭೆ, ಚನ್ನಪಟ್ಟಣ	ನಗರಸಭೆ, ಚನ್ನಪಟ್ಟಣ	ನಗರಸಭೆ, ಚನ್ನಪಟ್ಟಣ

ವಾಸಾಸಂಇ/ರಾನ/ಬ್ರಾಂಚ್/517/2021–22

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2021–22/6663 ದಿನಾಂಕ: 22/02/2022

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶೀರ್ಷಿಕೆ 4059–ಲೋಇ ಕಟ್ಟಗಳು ಅಡಿ 1 ಕಾಮಗಾರಿ & ಲೆಕ್ಕ ಶೀರ್ಷಿಕೆ 5054–ಎಸ್.ಸಿ.ಪಿ ಅಡಿ 2 ಕಾಮಗಾರಿಗಳು, ಹೀಗೆ ಒಟ್ಟು 3 ಕಾಮಗಾರಿಗಳು ಇದ್ದು, ಗುತ್ತಿಗೆ ಮೊತ್ತ ಕನಿಷ್ಟ ರೂ. 87.72 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 220.59 ಲಕ್ಷ ಇರುವ ಕಾಮಗಾರಿಗಳಿಗೆ ಗುತ್ತಿಗೆ ಕರೆಯಲಾಗಿದೆ.
ಕ್ರ.ಸಂ. 2 & 3 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು (Two Cover System).
1)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 28–02–2022(ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:03–03–2022 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 05–03–2022 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕ್ರ.ಸಂ. 1 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು (Two Cover System).
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:03–03–2022 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ :05–03–2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ :08–03–2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):10–03–2022 (ಸಾಯಂ ಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1634/MCA/2021-22

PUBLIC NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_VE_11_14_FULLY_BUILT
YOM – 2019
REG No – KA53D9643
Min Reserve Price –972900 /-
2) CB_PC300_Exc
YOM – 2017
SL No – N300369
Min Reserve Price – 2659000/-
3) TATA - CB_TATA Magic
YOM – 2018
Reg No – KA17D3468
Min Reserve Price –243000/-
4) CB_FORCE TEMPO TRAVELLER Fully Built
YOM – 2019
Reg No – ka17d7292
Min Reserve Price –468000/-
5) CB_SML S7 Bus
YOM – 2019
Reg No – KA17D7293
Min Reserve Price –721000/-
6) CB_MAHINDRA BLAZO25 FBT TIPPER
YOM – 2019
Reg No – KA22D2540
Min Reserve Price –1556500/-
7) CB_VE_10_75_CAB_CHASSIS_TANKER
YOM – 2019
Reg No – KA03AH5653
Min Reserve Price –607000/-
8) CB_JS205
YOM – 2019 Sl No – NONREGPUNJD20BVJ2752290
Min Reserve Price –2462000/-
9) CB_AL U TIPPERS U2518 CAB CHASSIS TIPPER
YOM – 2019 Sl No – NRMB1HTLHD9JPXF7656

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. from 25.02.2022
(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Pradeep. S
Kotak Mahindra Bank Ltd.
Contact / 080 - 61563913

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625 Web: www.federalbank.co.in
BGRR/PvtSale/2021-22 **PUBLIC NOTICE GOLD AUCTION** 24/02/2022
Notice is hereby given to the public in general and the account holders in particular that e-auction of the pledged gold ornaments in the below mentioned account/s will be conducted by Federal Bank Ltd, on 04.03.2022 through online portal, https://gold.samil.in Interested buyers may log on to the auction portal or contact the Bank at contact@federalbank.co.in for further information.

Branch name	Rupeek	Branch name	Rupeek	Branch name	Rupeek
Bangalore J P Nagar	18276100232756/85255	Bangalore J P Nagar	18276100240429/2104953	Bangalore J P Nagar	18276100236278/2099952
Bangalore J P Nagar	18276100240973/2105763	Bangalore J P Nagar	18276100239538/2063015	Bangalore J P Nagar	18276100217252/2062095
Bangalore J P Nagar	18276100234240/2097403	Bangalore J P Nagar	18276100232715/2095286	Bangalore J P Nagar	18276100241559/2106616
Bangalore J P Nagar	18276100240544/2105174	Bangalore J P Nagar	18276100240353/2104939	Bangalore J P Nagar	18276100243985/2109915
Bangalore J P Nagar	18276100243498/2109051	Bangalore J P Nagar	18276100233556/2096121	Bangalore J P Nagar	18276100232582/2095346
Bangalore J P Nagar	18276100264809/2133321	Bangalore J P Nagar	18276100231469/2093793	Bangalore J P Nagar	18276100260757/2129640
Bangalore J P Nagar	18276100258835/2127260	Bangalore J P Nagar	18276100235684/2099349	Bangalore J P Nagar	18276100256409/2124421
Bangalore J P Nagar	18276100240809/2105441	Bangalore J P Nagar	18276100258132/2083664	Bangalore J P Nagar	18276100213939/2056800
Bangalore J P Nagar	18276100256912/2124805	Bangalore J P Nagar	18276100239975/2104572	Bangalore J P Nagar	18276100234281/2097503
Bangalore J P Nagar	18276100264890/2133271	Bangalore J P Nagar	18276100256896/2124711	Bangalore J P Nagar	18276100237482/2101334
Bangalore J P Nagar	18276100237474/2101335	Bangalore J P Nagar	18276100260195/2128894	Bangalore J P Nagar	18276100230644/2092784
Bangalore J P Nagar	18276100239504/2104000	Bangalore J P Nagar	18276100264452/2133036	Bangalore J P Nagar	18276100237441/2101084
Bangalore J P Nagar	18276100233648/2096568	Bangalore J P Nagar	18276100238837/2103294	Bangalore J P Nagar	18276100234216/2097402
Bangalore J P Nagar	18276100258553/2126927	Bangalore J P Nagar	18276100200019/2035451	Bangalore J P Nagar	18276100188958/82971
Bangalore J P Nagar	18276100242029/2106987	Bangalore J P Nagar	18276100240569/2068305	Bangalore J P Nagar	18276100216288/2059929
Bangalore J P Nagar	18276100240833/2105427	Bangalore J P Nagar	18276100211941/2052095	Bangalore J P Nagar	18276100229893/2052723
Bangalore J P Nagar	18276100241864/2106819	Bangalore J P Nagar	18276100212758/2054111	Bangalore J P Nagar	18276100243399/2108790
Bangalore J P Nagar	18276100240163/2104653	Bangalore J P Nagar	18276100240866/2105625	Bangalore J P Nagar	18276100239983/2104388
Bangalore J P Nagar	18276100234356/103251	Bangalore J P Nagar	18276100234372/2036332	Bangalore J P Nagar	18276100240536/2105104
Bangalore J P Nagar	18276100210349/77352	Bangalore J P Nagar	18276100233762/2096558	Bangalore J P Nagar	18276100239280/2027629
Bangalore J P Nagar	18276100241641/2106651	Bangalore J P Nagar	18276100257191/2125220		

Bangalore 24-02-2022 Vice President & Zonal Head

ರಷ್ಯಾ ಗುರುವಾರ ಮುಂಜಾನೆ ನಡೆಸಿದ ವಾಯು ಮತ್ತು ಕ್ಷಿಪಣಿ ದಾಳಿಯಿಂದ ಉಕ್ರೇನ್‌ನ ಮಾರಿಯುಪೋಲ್‌ನ ಹೊರ ವಲಯದಲ್ಲಿನ ರಾಡಾರ್ ಮತ್ತು ಮಿಲಿಟರಿ ಸೌಲಭ್ಯದ ಉಪಕರಣಗಳು ಹೊತ್ತಿ ಉರಿದವು (ಮೊದಲ ಚಿತ್ರ). ದಾಳಿ ಆರಂಭವಾಗುತ್ತಿದ್ದಂತೆಯೇ ಜನರು ಕೀವ್ ನಗರ ತೊರೆಯಲು ಬ್ಯಾಗ್ ಮತ್ತು ಸೂಟ್‌ಕೇಸ್‌ಗಳ ಜತೆ ಮೆಟ್ರೊ ನಿಲ್ದಾಣಕ್ಕೆ ಬಂದರು. – ಎಪಿ, ಪಿಟಿಐ, ಎಎಫ್‌ಪಿ ಚಿತ್ರಗಳು

ತುರ್ತು ಶೃಂಗಸಭೆಯಲ್ಲಿ ಯುರೋಪ್ ಒಕ್ಕೂಟ ತೀರ್ಮಾನ; ದಾಳಿ ನಿಲ್ಲಿಸಲು ವಿಶ್ವಸಂಸ್ಥೆ ಮನವಿ

ರಷ್ಯಾ ವಿರುದ್ಧ ಕಠಿಣ ಆರ್ಥಿಕ ನಿರ್ಬಂಧ

ಬ್ರಸೆಲ್ಸ್, ಕೀವ್, ಮಾಸ್ಕೊ, ಲಂಡನ್, ವಿಶ್ವಸಂಸ್ಥೆ: (ಎಪಿ/ಎಎಫ್‌ಪಿ/ಪಿಟಿಐ/ರಾಯಿಟರ್ಸ್): ರಷ್ಯಾ ಸೇನೆಯು ಉಕ್ರೇನ್ ಮೇಲೆ ದಾಳಿ ನಡೆಸಿರುವುದರಿಂದ ಬಲವಾದ ಮತ್ತು ಕಠಿಣ ನಿರ್ಬಂಧಗಳನ್ನು ರಷ್ಯಾ ಮೇಲೆ ಹೇರುವ ನಿರ್ಧಾರವನ್ನು ಯುರೋಪ್ ಒಕ್ಕೂಟ ಗುರುವಾರ ತುರ್ತು ಶೃಂಗಸಭೆಯಲ್ಲಿ ತೆಗೆದುಕೊಂಡಿದೆ.

ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ 'ಯುರೋಪ್‌ನಲ್ಲಿ ಸ್ಥಿರತೆ ಮತ್ತು ಅಂತರರಾಷ್ಟ್ರೀಯವಾಗಿ ಸಂಪೂರ್ಣ ಶಾಂತಿ ಸ್ಥಾಪಿಸುವುದು ಇದರ ಗುರಿ. ನಾವು ಇದಕ್ಕೆ ರಷ್ಯಾ ಅಧ್ಯಕ್ಷ ವಾಡ್ಲಿಮಿರ್ ಪುಟಿನ್ ಅವರನ್ನು ಹೊಣೆಗಾರರನ್ನಾಗಿ ಮಾಡುತ್ತೇವೆ' ಎಂದು ಹೇಳಿದರು.

'ನಾವು ಉದ್ದೇಶಿತ ಮತ್ತು ಭಾರಿ ನಿರ್ಬಂಧಗಳ ಪ್ಯಾಕೇಜ್ ಅನ್ನು ಅನುಮೋದನೆಗಾಗಿ ಯುರೋಪ್ ನಾಯಕರ ಮುಂದಿಡಲಿದ್ದೇವೆ' ಎಂದು ಅವರು ಹೇಳಿದರು.

ಬ್ರಿಟನ್ ವಿರೋಧ: ರಷ್ಯಾದ ಸೇನಾ ಕಾರ್ಯಾಚರಣೆಯನ್ನು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಖಂಡಿಸಿದ್ದಾರೆ.

'ಉಕ್ರೇನ್ ಮೇಲೆ ಅಪ್ರಚೋದಿತ ದಾಳಿ ಪ್ರಾರಂಭಿಸುವ ಮೂಲಕ ಪುಟಿನ್ ರಕ್ತಪಾತ ಮತ್ತು ವಿನಾಶದ ಮಾರ್ಗ ಆರಿಸಿಕೊಂಡಿದ್ದಾರೆ' ಎಂದು ಅವರು ಟ್ವೀಟ್‌ನಲ್ಲಿ ಕಿಡಿಕಾರಿದ್ದಾರೆ.

'ಉಕ್ರೇನ್ ಮೇಲೆ ರಷ್ಯಾ ದಾಳಿಯಿಂದಾಗಿ ದಿಗ್ಭ್ರಮೆಯಾಗಿದೆ. ರಷ್ಯಾ ವಿರುದ್ಧ ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಕುರಿತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ಚರ್ಚೆ ನಡೆಸಿದ್ದೇನೆ' ಎಂದು ಜಾನ್ಸನ್ ಹೇಳಿದ್ದಾರೆ.

ರಾಜತಾಂತ್ರಿಕ ಸಂಬಂಧ ಕಡಿತ: 'ನಾವು ರಷ್ಯಾದೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಂಡಿದ್ದೇವೆ. ಆತ್ಮಸಾಕ್ಷಿಯನ್ನು ಕಳೆದುಕೊಳ್ಳದ ರಷ್ಯಾದ ಎಲ್ಲ ನಾಗರಿಕರೂ ಈ ಯುದ್ಧದ ವಿರುದ್ಧ ಹೊರ ಬಂದು ಪ್ರತಿಭಟಿಸುವ ಸಮಯವಿದು' ಎಂದೂ ಉಕ್ರೇನ್ ಅಧ್ಯಕ್ಷರು ಟ್ವೀಟ್ ಮಾಡಿದ್ದಾರೆ.

'ಎರಡನೇ ವಿಶ್ವ ಯುದ್ಧದ ವೇಳೆ ನಾಜಿ ಜರ್ಮನಿಯ ರೀತಿಯಲ್ಲಿಯೇ ರಷ್ಯಾ ನಮ್ಮ ಮೇಲೆ ದಾಳಿ ನಡೆಸಿದೆ. ಆದರೆ, ಉಕ್ರೇನ್ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಿದೆ. ತನ್ನ ಸ್ವಾತಂತ್ರ್ಯ ಬಿಟ್ಟುಕೊಡುವುದಿಲ್ಲ' ಎಂದೂ ಅವರು ತಿಳಿಸಿದ್ದಾರೆ.

ಸೇನಾ ದಾಳಿ ನಿಲ್ಲಿಸಿ: ಉಕ್ರೇನ್ ವಿರುದ್ಧದ ಯುದ್ಧವನ್ನು ಮಾನವೀಯತೆಯ ದೃಷ್ಟಿಯಿಂದ ನಿಲ್ಲಿಸುವಂತೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಮನವಿ ಮಾಡಿದ್ದಾರೆ.

ಭದ್ರತಾ ಮಂಡಳಿಯ ತುರ್ತು ಸಭೆಯಲ್ಲಿ ಮಾತನಾಡಿದ ಅವರು, 'ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ನನ್ನ ಅವಧಿಯಲ್ಲಿ ಇಂದು ಅತ್ಯಂತ ದುಃಖದ ದಿನ' ಎಂದು ಭಾವುಕವಾಗಿ ಬಣ್ಣಿಸಿದರು.

ಯುದ್ಧ ಕೊನೆಗೊಳಿಸಲು ಮೋದಿ ಮನವಿ

ನವದೆಹಲಿ (ಎಎಫ್‌ಪಿ): ಉಕ್ರೇನ್ ಬಿಕ್ಕಟ್ಟು ಕುರಿತು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ದೂರವಾಣಿ ಮೂಲಕ ಮಾತನಾಡಿದ್ದು, ತಕ್ಷಣವೇ ಹಿಂಸಾಚಾರವನ್ನು ನಿಲ್ಲಿಸುವಂತೆ ಮನವಿ ಮಾಡಿದ್ದಾರೆ ಎಂದು ಪ್ರಧಾನಿ ಕಚೇರಿಯ ಹೇಳಿಕೆ ತಿಳಿಸಿದೆ.

'ಯುದ್ಧವನ್ನು ತಕ್ಷಣವೇ ನಿಲ್ಲಿಸುವಂತೆ ಮೋದಿ ಅವರು ಮನವಿ ಮಾಡಿದ್ದಾರೆ. ರಾಜತಾಂತ್ರಿಕ ಮಾತುಕತೆಗಳು ಮತ್ತು ಸಂವಾದದ ಹಾದಿಗೆ ಮರಳಲು ಎಲ್ಲಾ ಕಡೆಯಿಂದ ಸಂಘಟಿತ ಪ್ರಯತ್ನಗಳು ನಡೆಯಬೇಕು ಎಂದು ಅವರು ಸಲಹೆ ನೀಡಿದ್ದಾರೆ. ರಷ್ಯಾ ಮತ್ತು ನ್ಯಾಟೊ ನಡುವಿನ ಭಿನ್ನಾಭಿಪ್ರಾಯಗಳನ್ನು ಮಾತುಕತೆ ಮೂಲಕ ಮಾತ್ರ ಪರಿಹರಿಸಬಹುದು ಎಂದು ತಮ್ಮ ಹಿಂದಿನ ಹೇಳಿಕೆಯನ್ನು ಅವರು ಪುನರುಚ್ಚರಿಸಿದ್ದಾರೆ' ಎಂದು ಹೇಳಿಕೆ ತಿಳಿಸಿದೆ.

ಉಕ್ರೇನ್‌ನಲ್ಲಿರುವ ವಿದ್ಯಾರ್ಥಿಗಳು ಸೇರಿದಂತೆ ಭಾರತೀಯರನ್ನು ಮರಳಿ ಕರೆತರುವುದಕ್ಕೆ ಹೆಚ್ಚಿನ ಆದ್ಯತೆ ನೀಡುವ ಕುರಿತು ಚರ್ಚಿಸಿದರು ಎಂದು ಹೇಳಿಕೆ ತಿಳಿಸಿದೆ.

ಭಾರತ ತಟಸ್ಥ: ರಂಜನ್ ಸಿಂಗ್

ನವದೆಹಲಿ: ರಷ್ಯಾ–ಉಕ್ರೇನ್ ಸಂಘರ್ಷಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ವಿದೇಶಾಂಗ ಸಚಿವಾಲಯದ ರಾಜ್ಯ ಖಾತೆ ಸಚಿವ ಡಾ.ರಾಜಕುಮಾರ್ ರಂಜನ್ ಸಿಂಗ್, 'ಭಾರತದ ನಿಲುವು ತಟಸ್ಥವಾಗಿರಲಿದೆ ಮತ್ತು ಎರಡೂ ಕಡೆಯಿಂದ ಶಾಂತಿಯುತ ಪರಿಹಾರ ನಿರೀಕ್ಷಿಸುತ್ತೇವೆ' ಎಂದು ತಿಳಿಸಿದ್ದಾರೆ.

'ರಷ್ಯಾ–ಉಕ್ರೇನ್ ಸಂಘರ್ಷದ ಪರಿಸ್ಥಿತಿಯನ್ನು ನಾವು ಗಂಭೀರವಾಗಿ ಅವಲೋಕನ ಮಾಡುತ್ತಿದ್ದೇವೆ. ಭಾರತೀಯರು, ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳ ಸುರಕ್ಷತೆಗೆ ಗಮನ ಹರಿಸಿದ್ದೇವೆ' ಎಂದು ವಿದೇಶಾಂಗ ಸಚಿವಾಲಯದ ಮೂಲಗಳು ತಿಳಿಸಿವೆ.

ಉಕ್ರೇನ್ ರಾಯಭಾರಿ ಬೇಸರ

ರಷ್ಯಾ–ಉಕ್ರೇನ್ ಸಂಘರ್ಷ ಅಂತ್ಯಗೊಳಿಸಲು ಭಾರತ ಮಧ್ಯಪ್ರವೇಶ ಮಾಡಬೇಕು ಎಂದು ಭಾರತದಲ್ಲಿರುವ ಉಕ್ರೇನ್ ರಾಯಭಾರಿ ಡಾ ಇಗೊರ್ ಪೊಲಿಖಾ ಮನವಿ ಮಾಡಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿರುವ ಅವರು, ಉಕ್ರೇನ್ ಬಿಕ್ಕಟ್ಟಿನ ಬಗ್ಗೆ ಭಾರತದ ತಟಸ್ಥ ನಿಲುವು ಬೇಸರ ತರಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಪುಟಿನ್ ಅವರೊಂದಿಗೆ ಮಾತನಾಡಬಲ್ಲರು. ಇತಿಹಾಸದಲ್ಲಿ ಹಲವು ಬಾರಿ ಭಾರತ ಶಾಂತಿ ಸ್ಥಾಪಿಸುವ ಪಾತ್ರ ನಿರ್ವಹಿಸಿದೆ. ಈ ಯುದ್ಧ ನಿಲ್ಲಿಸಲು ನಿಮ್ಮ ಬಲವಾದ ಬೆಂಬಲವನ್ನು ನಾವು ಕೋರುತ್ತೇವೆ' ಎಂದು ಅವರು ತಿಳಿಸಿದ್ದಾರೆ.

14 ಜನರಿದ್ದ ಉಕ್ರೇನ್ ಮಿಲಿಟರಿ ವಿಮಾನವು ಗುರುವಾರ ರಾಜಧಾನಿ ಕೀವ್‌ನ ದಕ್ಷಿಣದಲ್ಲಿ ಪತನಗೊಂಡಿದ್ದು, ತುರ್ತು ಸೇವೆ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸಿದರು – ಎಎಫ್‌ಪಿ ಚಿತ್ರ

182 ನಾಗರಿಕರು ಭಾರತಕ್ಕೆ ವಾಪಸ್

ನವದೆಹಲಿ: ವಿದ್ಯಾರ್ಥಿಗಳು ಸೇರಿ ದೇಶದ 182 ನಾಗರಿಕರನ್ನು ಉಕ್ರೇನ್‌ನಿಂದ ಕರೆತಂದಿರುವ ವಿಶೇಷ ವಿಮಾನವು ದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಗುರುವಾರ ಬಂದಿಳಿದಿದೆ.

'ಉಕ್ರೇನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟಿದ್ದ ಉಕ್ರೇನ್‌ನ ವಿಶೇಷ ವಿಮಾನವು ದೆಹಲಿ ವಿಮಾನ ನಿಲ್ದಾಣಕ್ಕೆ ಗುರುವಾರ ಬೆಳಿಗ್ಗೆ 7.45ಕ್ಕೆ ಬಂದಿಳಿದಿದೆ' ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಉಕ್ರೇನ್‌ನಿಂದ ವಿಶೇಷ ವಿಮಾನಗಳ ಹಾರಾಟ ರದ್ದು: ಉಕ್ರೇನ್ ವಾಯುಪ್ರದೇಶ ಸಂಪೂರ್ಣ ಮುಚ್ಚಿರುವ ಹಿನ್ನೆಲೆಯಲ್ಲಿ ಕೀವ್‌ಗೆ ವಿಶೇಷ ವಿಮಾನಗಳ ಹಾರಾಟ ಸಂಪೂರ್ಣ ರದ್ದುಗೊಳಿಸಲಾಗಿದೆ ಎಂದು ಉಕ್ರೇನ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ತಿಳಿಸಿದೆ.

ಯುದ್ಧಪೀಡಿತ ಉಕ್ರೇನ್‌ನಿಂದ ವಿದ್ಯಾರ್ಥಿಗಳು ಸೇರಿದಂತೆ ಭಾರತೀಯ ನಾಗರಿಕರನ್ನು ಸ್ಥಳಾಂತರಿಸಲು ಪರ್ಯಾಯ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ ಎಂದು ರಾಯಭಾರಿ ಕಚೇರಿಯು ಟ್ವೀಟ್ ಮೂಲಕ ತಿಳಿಸಿದೆ.

ಉಕ್ರೇನ್–ರಷ್ಯಾ ಸೇನಾ ಸಾಮರ್ಥ್ಯ

ಉಕ್ರೇನ್ ಮೇಲೆ ಹಿಡಿತ ಸಾಧಿಸುವ ಪಣ ತೊಟ್ಟಿರುವ ರಷ್ಯಾ, ನಿರೀಕ್ಷೆಯಂತೆ ಸಂಪೂರ್ಣ ಮಿಲಿಟರಿಯೊಂದಿಗೆ ಉಕ್ರೇನ್ ಮೇಲೆರಗಿದೆ. ಈ ವಿದ್ಯಮಾನ ಮೂರನೇ ಮಹಾಯುದ್ಧಕ್ಕೆ ಕಾರಣವಾಗಿಬಿಡಬಹುದೇ? ಎಂದು ವಿಶ್ವ ಸಮುದಾಯ ಕಳವಳಪಡುತ್ತಿದೆ.

ರಷ್ಯಾ ಅಧ್ಯಕ್ಷ ಪುಟಿನ್ ಆದೇಶದಂತೆ ಸುಮಾರು 1 ಲಕ್ಷಕ್ಕೂ ಹೆಚ್ಚು ರಷ್ಯಾ ಸೈನಿಕರು ಗುರುವಾರ ಬೆಳಗಿನ ಜಾವ ಉಕ್ರೇನ್ ಗಡಿಗೆ ಮುತ್ತಿಗೆ ಹಾಕಿದ್ದಾರೆ. ಈಗಾಗಲೇ ಉಕ್ರೇನ್‌ನ ಪ್ರಮುಖ ನಗರಗಳ ಮೇಲೆ (ಕೀವ್, ಖಾರ್‌ಕೀವ್) ಕ್ಷಿಪಣಿ ದಾಳಿಯನ್ನು ರಷ್ಯಾ ನಡೆಸಿದೆ. ಸಾವು–ನೋವು ಆಗಿದ್ದು, ಆಸ್ತಿ–ಪಾಸ್ತಿ ನಷ್ಟವಾಗಿದೆ.

ಈ ಎರಡೂ ದೇಶಗಳ ಸೇನಾ ಬಲ ಹೋಲಿಸಿ ನೋಡುವುದಾದರೆ ರಷ್ಯಾ ಮತ್ತು ಉಕ್ರೇನ್ ನಡುವೆ ಅಜಗಜಾಂತರ ವ್ಯತ್ಯಾಸ ಇದೆ. ಅದಾಗ್ಯೂ ರಷ್ಯಾ ವಿರುದ್ಧ ಉಕ್ರೇನ್ ಪ್ರಬಲ ಪ್ರತಿರೋಧ ತೋರುತ್ತಿದೆ.

ಇನ್ನೊಂದೆಡೆ ಯುರೋಪ್ ಒಕ್ಕೂಟ ಉಕ್ರೇನ್ ಬೆನ್ನಿಗೆ ನಿಲ್ಲುವುದಾಗಿ ಘೋಷಿಸಿದೆ. ಆದರೆ, ರಷ್ಯಾದ ಸೇನಾ ಬಲದ ಮುಂದೆ ಯುರೋಪ್ ಒಕ್ಕೂಟ ರಾಷ್ಟ್ರಗಳ ಸೇನಾ ಬಲವೂ ಕಡಿಮೆಯೇ ಎನ್ನುವುದು ತಜ್ಞರ ವಿಶ್ಲೇಷಣೆ.

ರಷ್ಯಾ	ಉಕ್ರೇನ್
8.50 ಲಕ್ಷ ಎಲ್ಲ ಸೇನಾ ವಿಭಾಗದಲ್ಲಿ ಸಕ್ರಿಯ ಸೇನಾ ಸಿಬ್ಬಂದಿ	2.50 ಲಕ್ಷ ಸಕ್ರಿಯ ಸೇನಾ ಸಿಬ್ಬಂದಿ
12,500 ಸೇನಾ ಟ್ಯಾಂಕ್‌ಗಳು	2,600 ಸೇನಾ ಟ್ಯಾಂಕ್‌ಗಳು
30,000ಕ್ಕೂ ಅಧಿಕ ಸಶಸ್ತ್ರ ವಾಹನಗಳು	12,000 ಸಶಸ್ತ್ರ ವಾಹನಗಳು
14,000ಕ್ಕೂ ಅಧಿಕ ಫಿರಂಗಿಗಳು	3,000 ಫಿರಂಗಿಗಳು
600ಕ್ಕೂ ಅಧಿಕ ಬೃಹತ್ ನೌಕೆಗಳು	30 ಬೃಹತ್ ನೌಕೆಗಳು
70 ಬೃಹತ್ ಜಲಾಂತರ್ಗಾಮಿ	ಜಲಾಂತರ್ಗಾಮಿ ಒಂದೂ ಇಲ್ಲ
4,100 ಯುದ್ಧ ವಿಮಾನಗಳು, ಇದರಲ್ಲಿ 722 ಫೈಟರ್ ಜೆಟ್‌ಗಳು	318 ಯುದ್ಧ ವಿಮಾನಗಳು, ಇದರಲ್ಲಿ 69 ಫೈಟರ್ ಜೆಟ್‌ಗಳು
1,520 ಕ್ಷಿಪಣಿ ಉಡಾವಣಾ ವಾಹನಗಳು	81 ಕ್ಷಿಪಣಿ ಉಡಾವಣಾ ವಾಹನಗಳು
5.11 ಲಕ್ಷ ಕೋಟಿ ರೂಪಾಯಿ (67.7 ಶತಕೋಟಿ ಅಮೆರಿಕ ಡಾಲರ್)' ರಕ್ಷಣಾ ವಲಯಕ್ಕೆ ವಾರ್ಷಿಕ ವಿನಿಯೋಗಿಸುವ ಮೊತ್ತ	44.6 ಸಾವಿರ ಕೋಟಿ ರೂಪಾಯಿ (5.9 ಶತಕೋಟಿ ಅಮೆರಿಕ ಡಾಲರ್) ರಕ್ಷಣಾ ವಲಯಕ್ಕೆ ವಾರ್ಷಿಕ ವಿನಿಯೋಗಿಸುವ ಮೊತ್ತ (2020ರ ಮಾಹಿತಿ)

(ಆಧಾರ: Stockholm International Peace Research Institute (SIPRI)).

ಮುಂಬೈನಲ್ಲಿ ಗುರುವಾರ ಕಲಾವಿದರು ಚಿತ್ರ ಬಿಡಿಸುವ ಮೂಲಕ ಉಕ್ರೇನ್ ಮೇಲೆ ರಷ್ಯಾ ಯುದ್ಧ ಸಾರಿರುವುದನ್ನು ಖಂಡಿಸಿದರು – ಪಿಟಿಐ ಚಿತ್ರ

ವಿದ್ಯಾರ್ಥಿ ನಿಲಯದ ಸಮೀಪವೇ ಬಾಂಬ್ ದಾಳಿ: ಆತಂಕದಲ್ಲಿ ಪೋಷಕರು

ಉಕ್ರೇನ್‌ನಲ್ಲಿ ಸಿಲುಕಿದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಯುದ್ಧಪೀಡಿತ ಉಕ್ರೇನ್‌ನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಹಲವು ವಿದ್ಯಾರ್ಥಿಗಳು ಸಿಲುಕಿಕೊಂಡಿದ್ದಾರೆ. ಭಾರತಕ್ಕೆ ಮರಳಲು ವಿಮಾನ ಟಿಕೆಟ್ ಕಾಯ್ದಿರಿಸಿದ್ದರೂ ಪರಿಸ್ಥಿತಿ ಬಿಗಡಾಯಿಸಿರುವುದರಿಂದ ವಿದ್ಯಾರ್ಥಿಗಳು ಹಾಗೂ ಪೋಷಕರು ಆತಂಕಕ್ಕೆ ಒಳಗಾಗಿದ್ದಾರೆ. ಬಹುತೇಕ ವಿದ್ಯಾರ್ಥಿಗಳು ಉಕ್ರೇನ್‌ನ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದಾರೆ.

ಯುದ್ಧಪೀಡಿತ ಉಕ್ರೇನ್‌ನಲ್ಲಿ ವಿಜಯಪುರ ಜಿಲ್ಲೆಯ 10 ವಿದ್ಯಾರ್ಥಿಗಳು ಸೇರಿದಂತೆ ರಾಜ್ಯದ 180 ವೈದ್ಯಕೀಯ ವಿದ್ಯಾರ್ಥಿಗಳು ಸಿಲುಕಿಕೊಂಡಿದ್ದಾರೆ. ಉಕ್ರೇನ್‌ನ ಖಾರ್ಕಿವ್ ಇಂಟರ್ ನ್ಯಾಷನಲ್ ಮೆಡಿಕಲ್ ಕಾಲೇಜಿಗೆ ರಾಜ್ಯದ ವಿದ್ಯಾರ್ಥಿಗಳು ಅಧ್ಯಯನಕ್ಕೆ ತೆರಳಿದ್ದಾರೆ. ಸುಮನ್ ರಾಣೆಬೆನ್ನೂರು ಎಂಬುವವರು ತಮ್ಮ ಏಜೆನ್ಸಿ ಮೂಲಕ ಪ್ರತಿ ವರ್ಷ ಈ ವಿ.ವಿಗೆ ರಾಜ್ಯದ ವಿದ್ಯಾರ್ಥಿಗಳನ್ನು ಕಳುಹಿಸಿಕೊಡುತ್ತಾರೆ ಎಂದು ತಿಳಿದು ಬಂದಿದೆ.

'ಉಕ್ರೇನ್‌ನಿಂದ ಭಾರತಕ್ಕೆ ಮರಳಲು ₹1.5 ಲಕ್ಷ ಹಣ ಸಂದಾಯ ಮಾಡಿ ವಿಮಾನ ಪ್ರಯಾಣಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಕೊನೇ ಕ್ಷಣದಲ್ಲಿ ವಿಮಾನ ರದ್ದಾದ ಕಾರಣ ಮಗಳು ಅಲ್ಲಿಯೇ ಉಳಿಯುವಂತಾಗಿದೆ' ಎಂದು ವಿಜಯಪುರ ಜಿಲ್ಲೆ ತಾಳಿಕೋಟೆ ತಾಲ್ಲೂಕಿನ ತಮದಡ್ಡಿಯ ವೈದ್ಯಕೀಯ ವಿದ್ಯಾರ್ಥಿನಿ ಸುಚಿತ್ರಾ ಅವರ ತಂದೆ ವಿಜಯಪುರ ಡಿಸಿಸಿ ಬ್ಯಾಂಕಿನ ಫೀಲ್ಡ್ ಆಫೀಸರ್ ಮಲ್ಲನಗೌಡ ಕವಡಿಮಟ್ಟಿ 'ಪ್ರಜಾವಾಣಿ' ತಿಳಿಸಿದರು.

'ಮಗನಿಗೆ ಕರೆ ಮಾಡಿ ಮಾತಾಡಿದ್ದೇನೆ. ಅವರ ಹಾಸ್ಟೆಲ್ ಸಮೀಪದಲ್ಲಿ ಬಾಂಬ್ ಸದ್ದು ಕೇಳಿಸುತ್ತಿದೆಯಂತೆ. ಪರಿಸ್ಥಿತಿ ಗಂಭೀರವಾಗಿದೆ ಎಂದು ಹೇಳಿದ್ದಾನೆ. ನಮಗೂ ಆತಂಕವಾಗಿದೆ' ಎಂದು ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಕಿರಣ್ ಸವದಿ ಅವರ ತಂದೆ ಲಕ್ಷ್ಮಣ ಸವದಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಉಕ್ರೇನ್‌ನಲ್ಲಿ ಸಿಲುಕಿರುವ ಕರ್ನಾಟಕದ ವಿದ್ಯಾರ್ಥಿಗಳು– (ಉಕ್ರೇನ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿಜಯಪುರದ ಸುಚಿತ್ರಾ ಅವರು ಕಳುಹಿಸಿರುವ ಚಿತ್ರ)

ಉಕ್ರೇನ್‌ನ ಖಾರ್ಕಿವ್ ರಾಷ್ಟ್ರೀಯ ವೈದ್ಯಕೀಯ ವಿಶ್ವವಿದ್ಯಾಲಯ ಸಮೀಪದ ಕಟ್ಟಡದಲ್ಲಿ ರಷ್ಯಾದ ರಾಷ್ಟ್ರಧ್ವಜ ಹಾರಿಸುತ್ತಿರುವುದು ಚಿತ್ರ/ಚೈತ್ರಾ ಸಂಶಿ

ಉಕ್ರೇನ್‌ನಲ್ಲಿ ಸಿಲುಕಿರುವ ರಾಜ್ಯದ ವಿದ್ಯಾರ್ಥಿಗಳು

ಜಿಲ್ಲೆ	ವಿದ್ಯಾರ್ಥಿಗಳ ಸಂಖ್ಯೆ
ವಿಜಯಪುರ	10
ಹಾವೇರಿ	9
ರಾಯಚೂರು	7
ದಾವಣಗೆರೆ	5
ಬಾಗಲಕೋಟೆ	4
ಶಿವಮೊಗ್ಗ	3
ಬೆಳಗಾವಿ	2
ದಕ್ಷಿಣ ಕನ್ನಡ	2
ಕಲಬುರಗಿ	2
ಬೀದರ್	2
ರಾಮನಗರ	2
ಚಿಕ್ಕಮಗಳೂರು	2
ಧಾರವಾಡ	1
ಗದಗ	1
ಉತ್ತರ ಕನ್ನಡ	1
ಕೊಪ್ಪಳ	1
ಚಿತ್ರದುರ್ಗ	1
ಚಿಕ್ಕಬಳ್ಳಾಪುರ	1
ಉಡುಪಿ	1
ಮೈಸೂರು	1

'ಕೈಯಲ್ಲಿ ಜೀವ ಹಿಡಿದು ದಿನ ಎಣಿಸುತ್ತಿದ್ದೇನೆ'

'ಸದ್ಯಕ್ಕೆ ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದೇನೆ. ಹಾಸ್ಟೆಲ್‌ಗೆ ಒಂದು ಕಿ.ಮೀ ದೂರದಲ್ಲಿ ದಾಳಿ ನಡೆದಿದೆ. ಕೈಯಲ್ಲಿ ಜೀವ ಹಿಡಿದುಕೊಂಡು ದಿನ ಎಣಿಸುತ್ತಿದ್ದೇನೆ. ಉಕ್ರೇನ್‌ನ ಒಂದೊಂದೇ ಕಟ್ಟಡಗಳನ್ನು ರಷ್ಯಾ ಸೈನಿಕರು ವಶಪಡಿಸಿಕೊಳ್ಳುತ್ತಿದ್ದಾರೆ. ತಮ್ಮ ದೇಶದ ಧ್ವಜಗಳನ್ನು ಹಾರಿಸುತ್ತಿದ್ದಾರೆ. ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದರೆ ಬಂಕರ್ ಒಳಗೆ ಸುರಕ್ಷಿತ ತಾಣಕ್ಕೆ ಕರೆದುಕೊಂಡು ಹೋಗುವುದಾಗಿ ಹಾಸ್ಟೆಲ್‌ನವರು ತಿಳಿಸಿದ್ದಾರೆ. ಅಲ್ಲಿಯವರೆಗೂ ಹಾಸ್ಟೆಲ್‌ನಲ್ಲಿಯೇ ಇರುವಂತೆ ಸೂಚಿಸಿದ್ದಾರೆ' ಎಂದು ಉಕ್ರೇನ್‌ನಲ್ಲಿರುವ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಯರಗುಪ್ಪಿ ಗ್ರಾಮದ ವಿದ್ಯಾರ್ಥಿನಿ ಚೈತ್ರಾ ಸಂಶಿ ಪ್ರತಿಕ್ರಿಯಿಸಿದ್ದಾರೆ.

> **ಯುದ್ಧದಿಂದ ನಾವು ಆತಂಕಗೊಂಡಿದ್ದೇವೆ. ಇಲ್ಲಿ ನೀರು, ಆಹಾರದ ಕೊರತೆ ಕಾಡುತ್ತಿದೆ. ರಾಯಭಾರಿ ಕಚೇರಿಗೆ ಮಾಹಿತಿ ನೀಡಿದರೂ ಇದುವರೆಗೆ ಯಾರೂ ತಮ್ಮನ್ನು ಸಂಪರ್ಕಿಸಿಲ್ಲ**
> **ಪ್ರವೀಣ ಅಜರೆಡ್ಡಿ,** ಉಕ್ರೇನ್‌ನಲ್ಲಿ ಸಿಲುಕಿರುವ ಹಾವೇರಿಯ ವಿದ್ಯಾರ್ಥಿ

ವಿದ್ಯಾರ್ಥಿಗಳ ಕರೆತರಲು ಕ್ರಮ: ಸಿಎಂ

ಬೆಂಗಳೂರು: 'ಉಕ್ರೇನ್‌ನಲ್ಲಿ ಸಿಲುಕಿರುವ ರಾಜ್ಯದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, '10ಕ್ಕೂ ಹೆಚ್ಚು ಕನ್ನಡಿಗ ವಿದ್ಯಾರ್ಥಿಗಳು ಸಿಲುಕಿದ್ದು, ಅವರ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯಲಾಗುತ್ತಿದೆ. ಉಕ್ರೇನ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿಯೊಂದಿಗೂ ಸಂಪರ್ಕ ಸಾಧಿಸಲಾಗಿದೆ' ಎಂದರು.

'ರಷ್ಯಾ ಮತ್ತು ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಸುಮಾರು ಭಾರತದ ವಿದ್ಯಾರ್ಥಿಗಳು ವಿಮಾನ ನಿಲ್ದಾಣಕ್ಕೆ ತಲುಪುವಾಗ ಯುದ್ಧ ಆರಂಭ ಆಗಿದ್ದರಿಂದ 100 ವಿದ್ಯಾರ್ಥಿಗಳು ಎರಡು ಬಸ್‌ಗಳಲ್ಲಿ ಸಿಲುಕಿಕೊಂಡಿದ್ದಾರೆ' ಎಂದರು. 'ಭಾರತೀಯ ವಿದ್ಯಾರ್ಥಿಗಳ ಸುರಕ್ಷಿತವಾಗಿರಲು ಭಾರತೀಯ ರಾಯಭಾರ ಕಚೇರಿ ಸೂಕ್ತ ಮಾರ್ಗದರ್ಶನ ನೀಡಿದೆ. ವಿಮಾನಗಳು ಮತ್ತೆ ಆರಂಭವಾದಾಗ ವಿದ್ಯಾರ್ಥಿಗಳನ್ನು ಭಾರತಕ್ಕೆ ಸುರಕ್ಷಿತವಾಗಿ ಕರೆತರಲು ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಕೇಂದ್ರ ವಿದೇಶಾಂಗ ಕಾರ್ಯದರ್ಶಿಯೊಂದಿಗೂ ಸಂಪರ್ಕದಲ್ಲಿದ್ದು, ಕೇಂದ್ರ ವಿದೇಶಾಂಗ ಸಚಿವರೊಂದಿಗೂ ಚರ್ಚಿಸಲಾಗುವುದು' ಎಂದರು.

'ಉಕ್ರೇನ್‌ನಿಂದ ಕಳೆದ ವಾರವೇ 200 ಭಾರತೀಯರು ಮರಳಿದ್ದು, ಯುದ್ಧದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ಇರಲಿಲ್ಲವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ವಿದ್ಯಾರ್ಥಿಗಳು ತಂಡಗಳಲ್ಲಿ ಭಾರತಕ್ಕೆ ಮರಳುತ್ತಿದ್ದು, ಈ ತಂಡ ಕಡೆಯದಾಗಿತ್ತು' ಎಂದರು.

'ದೇಶ ರಕ್ಷಿಸಲು ಬಯಸುವ ಎಲ್ಲರಿಗೂ ಶಸ್ತ್ರಾಸ್ತ್ರ'



ಝೆಲೆನ್‌ಸ್ಕಿ

ಕೀವ್: 'ದೇಶವನ್ನು ರಕ್ಷಿಸಲು ಬಯಸುವ ಎಲ್ಲರಿಗೂ ನಾವು ಶಸ್ತ್ರಾಸ್ತ್ರಗಳನ್ನು ನೀಡುತ್ತೇವೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿಕೆ ನೀಡಿದ್ದಾರೆ.

ಈ ಕುರಿತು ಗುರುವಾರ ಟ್ವೀಟ್ ಮಾಡಿರುವ ಅವರು, 'ನಮ್ಮ ನಗರಗಳ ರಸ್ತೆಗಳಲ್ಲಿ ಉಕ್ರೇನ್ ಪರ ನಿಲ್ಲಲು ಸಿದ್ಧವಾಗಿರಿ. ದೇಶವನ್ನು ರಕ್ಷಿಸಲು ಬಯಸುವ ಎಲ್ಲರಿಗೂ ನಾವು ಶಸ್ತ್ರಾಸ್ತ್ರಗಳನ್ನು ನೀಡುತ್ತೇವೆ' ಎಂದು ತಿಳಿಸಿದ್ದಾರೆ.

'ಕೈಯಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದು ದೇಶವನ್ನು ರಕ್ಷಿಸಲು ಸಿದ್ಧವಾಗಿರುವ ನಾಗರಿಕರ ಮೇಲಿನ ಎಲ್ಲಾ ನಿರ್ಬಂಧಗಳನ್ನು ನಾವು ತೆಗೆದುಹಾಕುತ್ತೇವೆ' ಎಂದೂ ಝೆಲೆನ್‌ಸ್ಕಿ ಹೇಳಿದ್ದಾರೆ.

'ನಾವು ರಷ್ಯಾದೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಂಡಿದ್ದೇವೆ. ಆತ್ಮಸಾಕ್ಷಿಯನ್ನು ಕಳೆದುಕೊಳ್ಳದ ರಷ್ಯಾದ ಎಲ್ಲ ನಾಗರಿಕರೂ ಈ ಯುದ್ಧದ ವಿರುದ್ಧ ಹೊರ ಬಂದು ಪ್ರತಿಭಟಿಸುವ ಸಮಯವಿದು' ಎಂದೂ ಉಕ್ರೇನ್ ಅಧ್ಯಕ್ಷರು ಟ್ವೀಟ್ ಮಾಡಿದ್ದಾರೆ.

'ಎರಡನೇ ವಿಶ್ವ ಯುದ್ಧದ ಸಂದರ್ಭದಲ್ಲಿ, ನಾಜಿ ಜರ್ಮನಿಯ ರೀತಿಯಲ್ಲಿಯೇ ರಷ್ಯಾ ನಮ್ಮ ಮೇಲೆ ದಾಳಿ ನಡೆಸಿದೆ. ದುಷ್ಟ ಮಾರ್ಗವನ್ನು ರಷ್ಯಾ ಅನುಸರಿಸಿದೆ. ಆದರೆ, ಉಕ್ರೇನ್ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಿದೆ. ಮಾಸ್ಕೊ ಯಾವ ಕ್ರಮ ಕೈಗೊಂಡರೂ, ಉಕ್ರೇನ್ ತನ್ನ ಸ್ವಾತಂತ್ರ್ಯವನ್ನು ಬಿಟ್ಟುಕೊಡುವುದಿಲ್ಲ' ಎಂದೂ ಝೆಲೆನ್‌ಸ್ಕಿ ತಿಳಿಸಿದ್ದಾರೆ.

ಪಾಶ್ಚಿಮಾತ್ಯ ದೇಶಗಳು ಮತ್ತು ವಿಶ್ವ ಸಮುದಾಯದ ಎಚ್ಚರಿಕೆಯನ್ನು ಧಿಕ್ಕರಿಸಿ ರಷ್ಯಾದ ಅಧ್ಯಕ್ಷ ವಾಡ್ಲಿಮಿರ್ ಪುಟಿನ್ ಗುರುವಾರ ಉಕ್ರೇನ್‌ನಲ್ಲಿ 'ಮಿಲಿಟರಿ ಕಾರ್ಯಾಚರಣೆ' ಘೋಷಿಸಿದ್ದಾರೆ. ತಮ್ಮ ಶಸ್ತ್ರಾಸ್ತ್ರಗಳನ್ನು ತ್ಯಜಿಸುವಂತೆ ಉಕ್ರೇನ್ ಸೈನಿಕರಿಗೆ ಅವರು ಕರೆ ನೀಡಿದ್ದಾರೆ.

ರಷ್ಯಾ ಕ್ರಮವನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್, ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಸೇರಿದಂತೆ ಹಲವು ರಾಷ್ಟ್ರಗಳ ನಾಯಕರು ಖಂಡಿಸಿದ್ದಾರೆ.

'ಭಾರತೀಯರ ಕರೆತರದೆ ಕೈಚೆಲ್ಲಿದ ಕೇಂದ್ರ'

ನವದೆಹಲಿ (ಪಿಟಿಐ): ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿರುವ ಅಂದಾಜು 20,000 ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ವ್ಯವಸ್ಥೆ ಮಾಡದ ಕೇಂದ್ರ ಸರ್ಕಾರ ಕೈಚೆಲ್ಲಿ ಕುಳಿತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಉನ್ನತ ವಿದ್ಯಾಭ್ಯಾಸಕ್ಕೆ ಉಕ್ರೇನ್‌ಗೆ ತೆರಳಿರುವ ಸಾವಿರಾರು ವಿದ್ಯಾರ್ಥಿಗಳು ಸೇರಿದಂತೆ 20,000ಕ್ಕೂ ಅಧಿಕ ಭಾರತೀಯರು ಆತಂಕದಲ್ಲಿ ಕಾಲ ಕಳೆಯುತ್ತಿದ್ದರೆ, ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರದಲ್ಲಿ ನಿರತರಾಗಿದ್ದಾರೆ ಎಂದು ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ ಟ್ವೀಟ್ ಮೂಲಕ ಟೀಕಿಸಿದ್ದಾರೆ.

ಸಂಕಷ್ಟದ ಸಮಯದಲ್ಲಿ ಮೌನವಾಗಿರುವುದು ಮೋದಿ ಸರ್ಕಾರಕ್ಕೆ ಅಭ್ಯಾಸವಾಗಿಬಿಟ್ಟಿದೆ. ಅಪಾಯದಲ್ಲಿರುವ ಭಾರತೀಯರನ್ನು ಸಕಾಲದಲ್ಲಿ ವಾಪಸ್ ಕರೆಸಲು ವ್ಯವಸ್ಥೆ ಮಾಡದಿರುವುದೇ 'ಸ್ವಾವಲಂಬನೆ'ಯ ಧ್ಯೇಯವೇ? ಎಂದು ಅವರು ಪ್ರಶ್ನಿಸಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ಆಕ್ರಮಣ

ಒಂದನೇ ಪುಟದಿಂದ

ಪೂರ್ವ ಉಕ್ರೇನ್‌ನ ನಾಗರಿಕರನ್ನು ರಕ್ಷಿಸಲು ದಾಳಿ ಅನಿವಾರ್ಯವಾಗಿತ್ತು ಎಂದು ಅವರು ಹೇಳಿದ್ದಾರೆ.

ನ್ಯಾಟೊಗೆ ಉಕ್ರೇನ್ ಸೇರ್ಪಡೆಯನ್ನು ತಡೆಯಬೇಕು ಎಂಬ ತಮ್ಮ ಬೇಡಿಕೆಯನ್ನು ಅಮೆರಿಕ ಮತ್ತು ಅದರ ಮಿತ್ರ ದೇಶಗಳು ನಿರ್ಲಕ್ಷಿಸಿವೆ ಎಂದು ಪುಟಿನ್ ಆರೋಪಿಸಿದ್ದಾರೆ. ಉಕ್ರೇನ್ ಅನ್ನು ವಶಕ್ಕೆ ಪಡೆಯುವುದು ತಮ್ಮ ಉದ್ದೇಶವಲ್ಲ, ಆ ದೇಶದ ಸೇನೆಯು ಇಲ್ಲದಂತೆ ಮಾಡುವುದು ಮತ್ತು ಅಪರಾಧ ಎಸಗಿದವರಿಗೆ ಶಿಕ್ಷೆ ನೀಡುವುದು ಉದ್ದೇಶ ಎಂದು ಅವರು ಹೇಳಿಕೊಂಡಿದ್ದಾರೆ. ಆಕ್ರಮಣವನ್ನು ಪುಟಿನ್ ಅವರು 'ವಿಶೇಷ ಸೇನಾ ಕಾರ್ಯಾಚರಣೆ' ಎಂದು ಬಣ್ಣಿಸಿದ್ದಾರೆ.

ಉಕ್ರೇನ್‌ನ ವಾಯುನೆಲೆಗಳು ಮತ್ತು ಇತರ ಸೇನಾ ಸೊತ್ತುಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಜನದಟ್ಟಣೆಯ ಪ್ರದೇಶದ ಮೇಲೆ ದಾಳಿ ನಡೆಸಿಲ್ಲ ಎಂದು ರಷ್ಯಾ ಹೇಳಿದೆ. ನಾಗರಿಕರಿಗೆ ಯಾವ ಬೆದರಿಕೆಯೂ ಇಲ್ಲ ಎಂದೂ ಹೇಳಿದೆ.

ಕೀವ್‌ನಲ್ಲಿ ಮೊದಲ ಸ್ಫೋಟಗಳ ಸಂದರ್ಭದಲ್ಲಿ ಜನರು ಬೀದಿಯಲ್ಲಿ ಕಿರುಚಾಡುತ್ತಿದ್ದ ದೃಶ್ಯ ಕಂಡುಬಂತು. ಸ್ವಲ್ಪ ಕಾಲದ ಬಳಿಕ ನಗರವು ಸಹಜ ಸ್ಥಿತಿಗೆ ಮರಳಿದೆ.

ರಷ್ಯಾ ಪಡೆಗಳು ಚೆರನಿಹಿವ್ ಪ್ರದೇಶದಲ್ಲಿ 10–20 ಕಿ.ಮೀ.ನಷ್ಟು ಉಕ್ರೇನ್‌ನ ಒಳಗೆ ಬಂದಿವೆ ಎಂದು ಉಕ್ರೇನ್ ಅಧ್ಯಕ್ಷರ ಸಲಹೆಗಾರರೊಬ್ಬರು ಹೇಳಿದ್ದಾರೆ. ಆದರೆ, ರಾಜಧಾನಿ ಕೀವ್ ಸುರಕ್ಷಿತವಾಗಿದೆ ಎಂದು ತಿಳಿಸಿದ್ದಾರೆ.

ಉಕ್ರೇನ್ ಮೇಲೆ ಯುದ್ಧವು ಬೀರುವ ಪರಿಣಾಮ ಘೋರವಾಗಿರುತ್ತದೆ. ಅದರ ಜತೆಗೆ, ಜಾಗತಿಕವಾಗಿಯೂ ಪ್ರತಿಕೂಲ ಪರಿಣಾಮವನ್ನು ಬೀರಬಹುದು. ರಷ್ಯಾ ಮೇಲೆ ಹೇರಲಾದ ಆರ್ಥಿಕ ಮತ್ತು ಇತರ ರೀತಿಯ ನಿರ್ಬಂಧಗಳು ಇಡೀ ಜಗತ್ತಿನ ಮೇಲೆಯೂ ಪರಿಣಾಮ ಉಂಟು ಮಾಡಲಿದೆ. ಯುರೋಪ್‌ಗೆ ತೈಲ ಪೂರೈಕೆ ಏರುಪೇರಾಗಲಿದೆ. ಇದರಿಂದ ಜಾಗತಿಕ ಹಣಕಾಸು ವ್ಯವಸ್ಥೆಗೆ ಹೊಡೆತ ಬೀಳಲಿದೆ. ಶೀತಲ ಸಮರ ನಂತರ ಇದ್ದ ಸಮತೋಲನಕ್ಕೆ ಈಗಿನ ಯುದ್ಧವು ದೊಡ್ಡ ಬೆದರಿಕೆಯಾಗಿದೆ. ವಿವಿಧ ದೇಶಗಳ ಷೇರು ಮಾರುಕಟ್ಟೆಗಳು ಕುಸಿತ ಕಂಡಿವೆ. ಕಚ್ಚಾ ತೈಲದ ದರದಲ್ಲಿಯೂ ಏರಿಕೆಯಾಗಿದೆ.

ರಾಣಾಗೆ ಅನುಭವವೇ ಅಮೃತ

ರಾಣಾ

7 ವರ್ಷಗಳ ಸತತ ಪರಿಶ್ರಮ, ಮೂರು ವರ್ಷಗಳ ದುಡಿಮೆಯ ಅನುಭವ... ಕೊನೆಗೂ ಸಿಕ್ಕಿತು ಒಂದು ದೊಡ್ಡ ಬ್ಯಾನರ್‌ನ ಸಿನಿಮಾ ಅವಕಾಶ!. ಹೀಗೆ ಪಕ್ವವಾದ ಬಳಿಕವೇ 'ಏಕ್ ಲವ್ ಯಾ' ಮೂಲಕ ಬೆಳ್ಳಿ ತೆರೆ ಮೇಲೆ ಭರ್ಜರಿಯಾಗಿ ಪ್ರವೇಶಿಸಿದವರು ರಾಣಾ. ನಟಿ ರಕ್ಷಿತಾ ಅವರ ಸಹೋದರ ರಾಣಾ ಅವರ ಸಿನಿ ಕನಸುಗಳು ತೆರೆದಿದ್ದು ಹೀಗೆ...

ಶರತ್ ಹೆಗ್ಡೆ

• ಅಭಿಷೇಕ್ ಅವರು ರಾಣಾ ಆಗಿ ಬದಲಾದದ್ದು ಹೇಗೆ?

ಹೌದು, ನನ್ನ ಮೂಲ ಹೆಸರು ಅಭಿಷೇಕ್. ಸಿನಿ ಬದುಕಿನಲ್ಲಿ ಹಲವು ನಂಬಿಕೆಗಳ ಕಾರಣಕ್ಕೆ ಹೆಸರು ಬದಲಾಯಿತು. ಆರ್‌ದಿಂದ ಆರಂಭವಾಗುವ ಹೆಸರು ಒಳ್ಳೆಯದು ಎಂದು ಹಿರಿಯರು ಸಲಹೆ ಮಾಡಿದರು. ಹಾಗಾಗಿ ತೆರೆಯ ಮೇಲಷ್ಟೇ ರಾಣಾ ಹೆಸರು ಇದೆ.

• ಎಂಜಿನಿಯರ್ ಆಗಬೇಕಾದವರು ನಟನೆಯ ಹಾದಿ ಹಿಡಿದದ್ದು?

ಕುಟುಂಬದವರೂ ಕಲಾವಿದರೇ. ನನ್ನ ಅಮ್ಮ ಮಮತಾ ರಾವ್ ಕೂಡಾ ಅಭಿನೇತ್ರಿ. ಹಾಗಾಗಿ ಈ ಆಸಕ್ತಿಯೆಲ್ಲಾ ರಕ್ತಗತವಾಗಿಯೇ ಬಂದಿತ್ತು. ಮೆಕ್ಯಾನಿಕಲ್ ಎಂಜಿನಿಯರಿಂಗ್ ಮುಗಿಸುವಷ್ಟರಲ್ಲೇ ನನ್ನ ನಟನೆಯ ಹಾದಿ ಎಂಬುದನ್ನು ಸ್ಪಷ್ಟಪಡಿಸಿಕೊಂಡಿದ್ದೆ. ಪದವಿ ಓದುತ್ತಲೇ ನಟನೆ, ಫೈಟಿಂಗ್, ನೃತ್ಯ ಕಲಿತದ್ದು ಆಯಿತು. ಎಂಜಿನಿಯರಿಂಗ್ ಪದವಿ ಮುಗಿಯುತ್ತಿದ್ದಾಗ ಸ್ನಾತಕೋತ್ತರ ಪದವಿ ಓದುವಂತೆ ಮನೆಯಲ್ಲಿ ಒತ್ತಾಯಿಸಿದರು. ನನಗ್ಯಾಕೋ ಈ ಓದು ಸಾಕು ಅನಿಸಿತು. ನಟನೆಯ ಹಾದಿ ಹಿಡಿಯುವುದಾಗಿ ಹೇಳಿದೆ. ಕೆಲಕಾಲ ನ್ಯೂಯಾರ್ಕ್‌ನ ಲೀ ಸ್ಟ್ರಾಸ್‌ಬರ್ಗ್ ಥಿಯೇಟರ್ ಆ್ಯಂಡ್ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಅಭಿನಯ ಕಲಿತೆ. ಮುಂದೆ ಕರ್ನಾಟಕದಲ್ಲಿ ಕೃಷ್ಣಮೂರ್ತಿ ಕವತ್ತಾರು ರಂಗಭೂಮಿಯ ಗುರುಗಳಾದರು. ಹೀಗೆ ಕಲಾಪ್ರಯಾಣ ಮುಂದುವರಿದಿತ್ತು.

ನಾಗಭೂಷಣ್

• ಸಿನಿ ಕ್ಷೇತ್ರದ ಅನುಭವ?

ಎಲ್ಲಾ ಸಿನಿಮಾಗಳನ್ನು ನೋಡುತ್ತಿದ್ದೆ. ಪ್ರತಿಯೊಂದರಲ್ಲೂ ಕಲಿಯುವುದಿದೆ. 'ದಿ ವಿಲನ್' ಚಿತ್ರಕ್ಕೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದೆ. ಆಗ ಶಿವರಾಜ್‌ಕುಮಾರ್, ಸುದೀಪ್ ಅವರ ಕೆಲಸವನ್ನು ಹತ್ತಿರದಿಂದ ನೋಡಿದೆ. ಅವರಿಬ್ಬರಿಂದಲೂ ಕಲಿಯುವುದು ತುಂಬಾ ಇದೆ. ಗಡ್ಡ ಬಿಡಲು ಹೇಳಿದ್ದೂ ಸುದೀಪ್ ಅವರೇ. ಸುದೀಪ್ ಅವರ ನಟನೆಯ ಚಿತ್ರೀಕರಣವನ್ನು ಮಾನಿಟರ್ ಮಾಡಿದ್ದೆ. ಕೆಲವು ಭಾಗಗಳನ್ನು ಅಭಿನಯಿಸು ಎನ್ನುತ್ತಿದ್ದರು. ಅದೇ ಅಭಿನಯವನ್ನು ಸುದೀಪ್ ಅವರು ಒಂದೇ ಟೇಕ್‌ನಲ್ಲಿ ಮಾಡಿ ತೋರಿಸುತ್ತಿದ್ದರು. ಈ ಅಂಶವನ್ನು ನಾನು ಗಮನಿಸಿದೆ. ಶಿವಣ್ಣ ಬೆರೆಯುವ ರೀತಿ... ಇಂಥದ್ದು ಅವೆಷ್ಟೋ ಇವೆ.

ಪ್ರಾಯೋಗಿಕವಾಗಿ ಕೆಲಸ ಮಾಡಿದ್ದು ಒಂದು ದೊಡ್ಡ ಪಾಠಶಾಲೆಯ ಅನುಭವ. ಆದರೆ, ನನ್ನ ಗುರಿ ನಟನೆಯತ್ತಲೇ ಇತ್ತು. ಅದನ್ನು ಶಿವಣ್ಣ ಮತ್ತು ಸುದೀಪ್ ಗುರುತಿಸಿ ಪ್ರೋತ್ಸಾಹಿಸಿದರು.

• ಮುಂದಿನ ಕನಸುಗಳು?

ಮಾಸ್ ಚಿತ್ರಗಳಲ್ಲಿ ನಂಬಿಕೆ ಇಲ್ಲ. ಒಳ್ಳೆಯ ಚಿತ್ರ ಕೊಡಬೇಕು ಅಷ್ಟೆ. ತುಂಬಾ ಕಥೆಗಳನ್ನು ಕೇಳುತ್ತಿದ್ದೇನೆ. ಆಸಕ್ತಿದಾಯಕವೆನಿಸಿದ್ದು ಇನ್ನೂ ಸಿಕ್ಕಿಲ್ಲ. ಸದ್ಯ 'ಏಕ್ ಲವ್ ಯಾ' ಬಿಡುಗಡೆ ಆಗಿದೆ. ಪ್ರೇಕ್ಷಕರು ಹೇಗೆ ಸ್ವೀಕರಿಸುತ್ತಾರೆ ಎಂದು ನೋಡೋಣ. ಬಳಿಕ ಹೊಸ ಯೋಜನೆಗಳ ಬಗ್ಗೆ ಮಾತನಾಡೋಣ. ❖

• ರಕ್ಷಿತಾ ಅವರ ತಮ್ಮ ಎಂಬ ಕಾರಣಕ್ಕೆ 'ಏಕ್ ಲವ್ ಯಾ' ಅವಕಾಶ ಬಂತೇ?

ಅದೊಂದು ಪ್ಲಸ್ ಪಾಯಿಂಟ್ ಅಷ್ಟೆ. ನನ್ನ ಪರಿಶ್ರಮವನ್ನೂ ಅಕ್ಕ ಹಾಗೂ ನಿರ್ದೇಶಕರು (ಪ್ರೇಮ್) ನೋಡಿದ್ದಾರೆ. ಈ ಕ್ಷೇತ್ರ ಪ್ರವೇಶಿಸಲು ಸಿದ್ಧತೆಗೇ ಮೂರುವರ್ಷ ತಗುಲಿತು ನೋಡಿ. ಊಹೆಯೂ ಮಾಡದ ರೀತಿಯಲ್ಲಿ 'ಏಕ್ ಲವ್ ಯಾ' ಚಿತ್ರದ ಅವಕಾಶ ಬಂತು. ಅಕ್ಕ, ಭಾವನ ಬೆಂಬಲ, ಮಾರ್ಗದರ್ಶನ ಸಿಕ್ಕಿತು. ಈಗಾಗಲೇ ಅವರೆಲ್ಲಾ ಈ ಕ್ಷೇತ್ರದಲ್ಲಿ ಪಳಗಿದವರಾಗಿದ್ದರಿಂದ ನನಗೆ ಒಳ್ಳೆಯ ಅವಕಾಶ ಸಿಕ್ಕಿದೆ.

ಇದು ಐಟಿ ಹುಡುಗರ 'ಸ್ಟೆಬಿಲಿಟಿ'

'ಸ್ಟೆಬಿಲಿಟಿ'ಯ ತಂಡ

ಮಾಹಿತಿ ತಂತ್ರಜ್ಞಾನ ಹಾಗೂ ಬೇರೆ ಬೇರೆ ಕ್ಷೇತ್ರಗಳಲ್ಲಿರುವ ಒಂದಿಷ್ಟು ಹುಡುಗರು ಸೇರಿಕೊಂಡು ನಿರ್ಮಿಸಿದ ಚಿತ್ರವೇ 'ಸ್ಟೆಬಿಲಿಟಿ'. ತೆರೆಗೆ ಬರುವ ಮುನ್ನವೇ 9 ಪ್ರಶಸ್ತಿಗಳನ್ನು ಬಾಚಿಕೊಂಡಿದೆ.

ವಿಜ್ಞಾನ ಕಥೆಯ ಹಿನ್ನೆಲೆಯ ಚಿತ್ರ ಇದು. ಈ ತಂಡದವರೆಲ್ಲರೂ ಉದ್ಯೋಗದಲ್ಲಿದ್ದುಕೊಂಡು ವಾರಾಂತ್ಯಗಳಲ್ಲಿ ಚಿತ್ರೀಕರಿಸಿದ್ದಾರೆ. 24 ವಾರಗಳಲ್ಲಿ ಚಿತ್ರೀಕರಣ ಮುಗಿದಿದೆ. ವಿಶೇಷವೆಂದರೆ ಈ ಚಿತ್ರಕ್ಕೆ ಆಗಿದ್ದು ಕೇವಲ ₹ 5 ಲಕ್ಷ ವೆಚ್ಚ. 110 ನಿಮಿಷಗಳ ಚಿತ್ರವಿದು.

ಕಿರುಚಿತ್ರಗಳನ್ನು ಮಾಡುತ್ತಲೇ ಅನುಭವ ಪಡೆದು, ಹವ್ಯಾಸಿ ತಂತ್ರಜ್ಞರನ್ನು ಬಳಸಿಕೊಂಡಿದ್ದಾರೆ. ನಟನೆ, ಸಂಕಲನ ಎಲ್ಲವನ್ನೂ ಒಂದೇ ತಂಡದವರು ಮಾಡಿದ್ದಾರೆ. ಈ ಪ್ರಯತ್ನದ ಫಲವಾಗಿ ಫೆ. 25ರಂದು ಈ ಚಿತ್ರ ರಾಜ್ಯದಾದ್ಯಂತ ತೆರೆ ಕಾಣಲಿದೆ. ಎಲ್ಲ ಮಲ್ಟಿಪ್ಲೆಕ್ಸ್‌ಗಳಲ್ಲಿ ಈ ಚಿತ್ರ ಪ್ರದರ್ಶನಗೊಳ್ಳಲಿದೆ ಎಂದರು ಚಿತ್ರದ ನಾಯಕ ಕಶ್ಯಪ್ ಭಾಸ್ಕರ್. ಬೆಂಗಳೂರು, ಹಾಸನ, ಹುಬ್ಬಳ್ಳಿ ಮತ್ತು ಕೊಕ್ಕಡದಲ್ಲಿ ಚಿತ್ರೀಕರಣ ನಡೆದಿದೆ.

ಸ್ಟೆಬಿಲಿಟಿಯಲ್ಲಿ ಏನಿದೆ?

ರಾ (ರಿಸರ್ಚ್ ಆ್ಯಂಡ್ ಅನಾಲಿಸೀಸ್ ವಿಂಗ್) ಏಜೆಂಟನೊಬ್ಬ ಕುಖ್ಯಾತ ಅಪರಾಧಿಯೊಬ್ಬನ ಬೆನ್ನು ಬಿದ್ದಿರುವ ಕಥೆ.

'ಯಾವುದೇ ಲಾಭದ ನಿರೀಕ್ಷೆ ಇಲ್ಲದೆ, ನಟನೆ, ಪರಿಕರ, ಪ್ರಸಾದನ, ಬೆಳಕು, ಊಟೋಪಚಾರ ಎಲ್ಲವನ್ನೂ ನಾವೇ ಸಿದ್ಧಪಡಿಸಿಕೊಂಡು ಚಿತ್ರೀಕರಣ ನಡೆಸಿದ್ದೇವೆ. ನಮಗಂತೂ ಚಿತ್ರದ ಮೇಲೆ ವಿಶ್ವಾಸವಿದೆ. ಜನ ಸ್ವೀಕರಿಸಿ ಪ್ರೋತ್ಸಾಹಿಸುತ್ತಾರೆ ಎಂಬ ನಂಬಿಕೆ ಇದೆ ಎಂದರು ನಿರ್ದೇಶಕ ಗೌತಮ್ ಕಾನಡೆ.

ಸಂದೀಪ್ ಟಿ.ಸಿ., ಲಕ್ಷ್ಮೀ ಅಂಬುಗ, ಶ್ರೀನಿಧಿ ತಳಕ್, ಎಸ್. ಎನ್. ಸೇತುರಾಂ, ಸಂತೋಷ್ ಕರ್ಕಿ ತಾರಾಗಣದಲ್ಲಿದ್ದಾರೆ.

9 ಪ್ರಶಸ್ತಿಗಳು: ಈ ಚಿತ್ರಕ್ಕೆ ಇಂಡೋ–ಸಿಂಗಪುರ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ, ಗೋಲ್ಡನ್ ಸ್ಪಾರೋ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ, ಇಂಡೋ– ಫ್ರೆಂಚ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿದಂತೆ ಒಟ್ಟು 9 ಚಿತ್ರೋತ್ಸವಗಳ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಬಾಚಿಕೊಂಡಿದೆ. ❖

'ಮೇಡ್ ಇನ್ ಚೈನಾ' ವರ್ಚುವಲ್ ಸಿನಿಮಾ

ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ವರ್ಚುವಲ್ ಸಭೆ ಸಮಾರಂಭಗಳು, ವಿಡಿಯೊ ಕರೆಯಲ್ಲೇ ಮದುವೆ ಕಾರ್ಯಕ್ರಮ ವೀಕ್ಷಣೆ ಹೀಗೆ ಜನರು ಪರಸ್ಪರ ಸಂಪರ್ಕದಲ್ಲಿರಲು ಆನ್‌ಲೈನ್‌ಗೇ ಮೊರೆ ಹೋಗಿದ್ದರು. ಇದೇ ವಿಷಯವಿಟ್ಟುಕೊಂಡು ಇದೀಗ ಕನ್ನಡದ ಮೊದಲ ವರ್ಚುವಲ್ ಸಿನಿಮಾವೊಂದು ಸಿದ್ಧವಾಗಿದೆ.

ಒಟಿಟಿ ವೇದಿಕೆಯಲ್ಲಿ ಬಿಡುಗಡೆಗೊಂಡು, ಮನರಂಜನೆಯ ರಸದೌತಣ ಬಡಿಸಿದ್ದ 'ಇಕ್ಕಟ್' ಸಿನಿಮಾ ಬಳಿಕ, ಇದೀಗ ವಿಭಿನ್ನವಾದ ಸಿನಿಮಾವೊಂದರಲ್ಲಿ ನಟ ನಾಗಭೂಷಣ್ ಕಾಣಿಸಿಕೊಳ್ಳುತ್ತಿದ್ದಾರೆ. ಅವರು ನಟಿಸಿರುವ 'ಮೇಡ್ ಇನ್ ಚೈನಾ' ಸಿನಿಮಾದ ಟೀಸರ್ ಬಿಡುಗಡೆಯಾಗಿದ್ದು, ವಿಭಿನ್ನವಾದ ಪ್ರಯತ್ನ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಲಾಕ್‌ಡೌನ್ ಸಂದರ್ಭದಲ್ಲಿ ವಿದೇಶದಲ್ಲಿ ಪತಿ(ಅಭಿರಾಮ್ ಶಾಸ್ತ್ರಿ) ಸಿಲುಕಿಕೊಳ್ಳುತ್ತಾನೆ. ಇತ್ತ, ತುಂಬು ಗರ್ಭಿಣಿಯಾಗಿರುವ ಆತನ ಪತ್ನಿ(ಮೈಥಿಲಿ) ಭಾರತದಲ್ಲಿರುತ್ತಾಳೆ. ಈ ಗಂಡ ಹೆಂಡತಿ, ಅಳಿಯ–ಮಾವ, ಗೆಳೆಯರ ಜೊತೆ ಆನ್‌ಲೈನ್ ವಿಡಿಯೊ ಕರೆಯಲ್ಲೇ ನಡೆಯುವ ಮಾತುಕತೆ, ಪ್ರೀತಿ ಮತ್ತು ಒಂದಿಷ್ಟು ಜಗಳ ಹೀಗೆ ಕಂಪ್ಯೂಟರ್, ಮೊಬೈಲ್ ಸ್ಕ್ರೀನ್‌ನಲ್ಲೇ ಇಡೀ ಸಿನಿಮಾ ಸೆರೆಯಾಗಿದೆ. ಇದೊಂದು ಫ್ಯಾಮಿಲಿ ಡ್ರಾಮಾ. ನಾಗಭೂಷಣ್ ಟೀಸರ್‌ನಲ್ಲೇ ನಗುವಿನ ಕಚಗುಳಿ ಇಟ್ಟಿದ್ದಾರೆ. ಪ್ರಿಯಾಂಕಾ ತಿಮ್ಮೇಶ್ ನಟನೆ ಪ್ರೇಕ್ಷಕರನ್ನು ಸೆಳೆದಿದೆ.

'ಅಯೋಗ್ಯ', 'ರತ್ನಮಂಜರಿ' ಸಿನಿಮಾಗಳಿಗೆ ಸಿನಿಮಾಟೋಗ್ರಾಫರ್ ಆಗಿದ್ದ ಪ್ರೀತಮ್ ತೆಗ್ಗಿನಮನೆ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುವುದರ ಜೊತೆಗೆ ಗ್ರಾಫಿಕ್, ಸಂಕಲನ ಹಾಗೂ ಸಿನಿಮಾಟೋಗ್ರಾಫಿ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆ. ಗೌರವ್ ಶೆಟ್ಟಿ, ಅಶ್ವಿನಿ ರಾವ್ ಪಲ್ಲಕ್ಕಿ, ಅರುಣ ಬಾಲರಾಜ್, ರವಿ ಭಟ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ನಿಶ್ಚಲ್ ವಿ. ಹಾಗೂ ಪ್ರೀತಮ್ ತೆಗ್ಗಿನಮನೆ 'ಮೇಡ್ ಇನ್ ಚೈನಾ' ಸಿನಿಮಾಗೆ ಕಥೆ ಬರೆದಿದ್ದು, ವೀವಾನ್ ರಾಧಾಕೃಷ್ಣ ಸಂಗೀತ ನೀಡಿದ್ದಾರೆ. ಎನ್. ಕೆ. ಸ್ಟುಡಿಯೋಸ್ ಬ್ಯಾನರ್‌ನಡಿ ನಂದಕಿಶೋರ್ ಸಿನಿಮಾಗೆ ಬಂಡವಾಳ ಹೂಡಿದ್ದು, ಕ್ರಿಸ್ಟಲ್ ಪಾರ್ಕ್ ಸಿನಿಮಾಸ್‌ನಡಿ ಟಿ.ಆರ್.ಚಂದ್ರಶೇಖರ್ ಸಿನಿಮಾವನ್ನು ಪ್ರಸ್ತುತಪಡಿಸುತ್ತಿದ್ದಾರೆ. ❖

'ಓಲ್ಡ್‌ಮಾಂಕ್' ಮೇಲೆ 'ಮನಸಾಗಿದೆ'

ಇಂದು ಬಿಡುಗಡೆ

ಹೊಸ 'ಓಲ್ಡ್ ಮಾಂಕ್' ಶ್ರೀನಿ ಹಾಗೂ ಅದಿತಿ ಪ್ರಭುದೇವ

ಅಭಯ್, ಅಥಿರಾ

ವಿಭಿನ್ನವಾದ ಪ್ರಚಾರದಿಂದಲೇ ಗಾಂಧಿನಗರದಲ್ಲಿ ಸದ್ದು ಮಾಡಿರುವ ಶ್ರೀನಿ ಅಭಿನಯಿಸಿ, ನಿರ್ದೇಶಿಸಿರುವ 'ಓಲ್ಡ್ ಮಾಂಕ್' ಸಿನಿಮಾ ಮೇಲೆ ಪ್ರೇಕ್ಷಕರ ನಿರೀಕ್ಷೆ ಹೆಚ್ಚಿದೆ. ಥಿಯೇಟರ್‌ಗಳ ಮುಂದೆ ಹೀರೊ, ಹೀರೊಯಿಯನ್ ಕಟೌಟ್ ಬದಲಾಗಿ ಅಭಿಮಾನಿಗಳ ಕಟೌಟ್‌ಗಳಲ್ಲೇ ನಿಲ್ಲಿಸುವ ಮೂಲಕ ಹೊಸ ಪ್ರಯೋಗವನ್ನೂ ಚಿತ್ರತಂಡ ಮಾಡಿದೆ.

'ಬೀರ್‌ಬಲ್' ಚಿತ್ರದ ಯಶಸ್ಸಿನ ನಂತರ ಇದೀಗ ಫ್ಯಾಮಿಲಿ ಎಂಟರ್‌ಟೈನರ್ ಮುಖಾಂತರ ಶ್ರೀನಿ ಮತ್ತೆ ಪ್ರೇಕ್ಷಕರ ಎದುರಿಗೆ ಬರುತ್ತಿದ್ದಾರೆ. ಶ್ರೀನಿ ಅವರಿಗೆ ಜೋಡಿಯಾಗಿ ಅದಿತಿ ಪ್ರಭುದೇವ ನಟಿಸಿದ್ದು, ಬಿಡುಗಡೆಗೆ ಮುನ್ನವೇ ಚಿತ್ರದ ರಿಮೇಕ್ ಹಕ್ಕು ತೆಲುಗಿಗೆ ಮಾರಾಟವಾಗಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಸೌರಭ್ ವೈಭವ್ ಸಂಗೀತ ನೀಡಿದ್ದಾರೆ. ಭರತ್ ಪರಶುರಾಮ್ ಅವರ ಸಿನಿಮಾಟೊಗ್ರಫಿ, ದೀಪು ಎಸ್. ಕುಮಾರ್ ಸಂಕಲನವಿರುವ ಚಿತ್ರಕ್ಕೆ ಶ್ರೀನಿ ಅವರೂ ಸೇರಿದಂತೆ ನಾಲ್ವರು ಬಂಡವಾಳ ಹೂಡಿದ್ದಾರೆ. ನಟ ದಿವಂಗತ ರಾಜೇಶ್ ಸೇರಿದಂತೆ, ಎಸ್. ನಾರಾಯಣ್, ಸುನೀಲ್ ರಾವ್, ಸಿಹಿಕಹಿ ಚಂದ್ರು, ಸುಜಯ್ ಶಾಸ್ತ್ರಿ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ.

ತ್ರಿಕೋನ ಪ್ರೇಮಕಥಾಹಂದರ ಹೊಂದಿರುವ 'ಮನಸಾಗಿದೆ' ಚಿತ್ರದ ಮೂಲಕ ನಿರ್ಮಾಪಕ ಚಂದ್ರಶೇಖರ್ ಅವರ ಪುತ್ರ ಅಭಯ್ ನಾಯಕರಾಗಿ ಚಂದನವನಕ್ಕೆ ಕಾಲಿಡುತ್ತಿದ್ದಾರೆ. ಅಭಯ್‌ಗೆ ಜೋಡಿಯಾಗಿ ಮೇಘಶ್ರೀ ಹಾಗೂ ಅಥಿರಾ ನಟಿಸಿದ್ದಾರೆ. ನಿರ್ಮಾಪಕರೇ ಈ ಚಿತ್ರದ ಕಥೆ ಬರೆದಿದ್ದು, ಶ್ರೀನಿವಾಸ ಶಿಡ್ಲಘಟ್ಟ ಚಿತ್ರಕಥೆ ರಚಿಸಿ ನಿರ್ದೇಶನ ಮಾಡಿದ್ದಾರೆ. ರಘು ನಿಡವಳ್ಳಿ ಅವರ ಸಂಭಾಷಣೆ ಈ ಚಿತ್ರಕ್ಕಿದೆ. ಪ್ರೀತಿಯನ್ನು ಹುಡುಕಿಕೊಂಡು ಹೊರಟ ನಾಯಕನಿಗೆ ಅಲ್ಲಿ ಇನ್ನೊಂದು ಪ್ರೀತಿ ಎದುರಾಗುತ್ತದೆ. ಆಗ ನಾಯಕನಿಗೆ ತಾನು ಅರಸಿಕೊಂಡು ಹೋದ ಪ್ರೀತಿ ಸಿಗುತ್ತಾ ಅಥವಾ ಎದುರಾದ ಪ್ರೀತಿ ಒಲಿಯುತ್ತಾ ಎನ್ನುವುದೇ 'ಮನಸಾಗಿದೆ' ಚಿತ್ರದ ಕಥಾಹಂದರ. ಚಿತ್ರಕ್ಕೆ ಮಾನಸ ಹೊಳ್ಳ ಅವರ ಸಂಗೀತ ನಿರ್ದೇಶನವಿದೆ.

'ಬಿಡುಗಡೆ ದಿನಾಂಕವನ್ನು ಎರಡು ಮೂರು ಬಾರಿ ಮುಂದಕ್ಕೆ ಹಾಕಲಾಯಿತು. ಈ ವಾರವೂ ನಮಗೆ ಹೆಚ್ಚಿನ ಸಂಖ್ಯೆಯ ಚಿತ್ರಮಂದಿರಗಳು ಸಿಕ್ಕಿಲ್ಲ. ಆದರೂ ನಮ್ಮ ಚಿತ್ರ ಪ್ರೇಕ್ಷಕರ ಮನವನ್ನು ಗೆದ್ದೇಗೆಲ್ಲುತ್ತೆ ಎಂಬ ವಿಶ್ವಾಸವಿದೆ' ಎಂದಿದ್ದಾರೆ ಚಂದ್ರಶೇಖರ್. ❖

'ಬಡ್ಡೀಸ್'ನಲ್ಲಿ ಕಿರಣ್‌ರಾಜ್

ಕಿರಣ್ ರಾಜ್

'ಕನ್ನಡತಿ' ಧಾರಾವಾಹಿ ಮುಖಾಂತರ ಕನ್ನಡ ಪ್ರೇಕ್ಷಕರಿಗೆ ಹತ್ತಿರವಾಗಿದ್ದ ನಟ ಕಿರಣ್ ರಾಜ್, ಸದ್ಯಕ್ಕೆ ಕಿರುತೆರೆಯ ಜೊತೆಗೆ ಚಂದನವನದಲ್ಲೂ ಸಕ್ರಿಯರಾಗಿದ್ದಾರೆ. 'ಭರ್ಜರಿ ಗಂಡು' ಸಿನಿಮಾ ಬಿಡುಗಡೆಗೆ ಕಾಯುತ್ತಿರುವ ಕಿರಣ್, ಇದೀಗ ಮತ್ತೊಂದು ಸಿನಿಮಾವನ್ನು ಸದ್ದಿಲ್ಲದೆ ಪೂರ್ಣಗೊಳಿಸಿದ್ದಾರೆ.

ಭಾರತಿ ಶೆಟ್ಟಿ ಫಿಲಂಸ್ ಸಂಸ್ಥೆಯ ಚೊಚ್ಚಲ ಚಿತ್ರ 'ಬಡ್ಡೀಸ್'ನಲ್ಲಿ ನಾಯಕನಾಗಿ ಕಿರಣ್ ಮಿಂಚಿದ್ದು, ಇದರ ಚಿತ್ರೀಕರಣ ಬಿರುಸಿನಿಂದ ನಡೆಯುತ್ತಿದೆ. ಬೆಂಗಳೂರು, ಮಂಗಳೂರು, ಗೋವಾ, ತುಮಕೂರು ಮುಂತಾದ ಕಡೆ ಚಿತ್ರೀಕರಣ ನಡೆದಿದ್ದು, ಚಿತ್ರೀಕರಣ ಅಂತಿಮ ಹಂತದಲ್ಲಿದೆ. ಸ್ನೇಹದ ಮಹತ್ವ ಸಾರುವ ಈ ಚಿತ್ರದ ಫಸ್ಟ್ ಲುಕ್ ಶೀಘ್ರದಲ್ಲೇ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.

ಮಂಗಳೂರಿನ ಭಾರತಿ ಶೆಟ್ಟಿ ಈ ಚಿತ್ರದ ನಿರ್ಮಾಪಕರಲ್ಲಿ ಒಬ್ಬರು. ಪ್ರಸ್ತುತ ದುಬೈ ನಿವಾಸಿಯಾಗಿರುವ ಇವರು ಅಲ್ಲಿ ಜಾಹೀರಾತು ಸಂಸ್ಥೆ ನಡೆಸುತ್ತಿದ್ದಾರೆ. ಈ ಹಿಂದೆ ಗುರುವೇಂದ್ರ ಶೆಟ್ಟಿ ಎಂಬ ಹೆಸರಿನಿಂದ ಚಿತ್ರವೊಂದನ್ನು ನಿರ್ದೇಶಿಸಿದ್ದ ನಿರ್ದೇಶಕರು, ಈ ಚಿತ್ರದಿಂದ ಗುರುತೇಜ್ ಶೆಟ್ಟಿಯಾಗಿ ಹೆಸರು ಬದಲಾಯಿಸಿಕೊಂಡು ನಿರ್ದೇಶಕನ ಕ್ಯಾಪ್ ತೊಟ್ಟಿದ್ದಾರೆ. ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಹಾಡುಗಳು ಗುರುತೇಜ್ ಶೆಟ್ಟಿಯವರದ್ದೇ.

ಮೂರು ಹಾಡುಗಳಿರುವ ಈ ಚಿತ್ರಕ್ಕೆ ಜ್ಯೂಡಾ ಸ್ಯಾಂಡಿ ಸಂಗೀತ ನೀಡಿದ್ದಾರೆ. ಅಮೆರಿಕದಲ್ಲಿ ವಾಸವಾಗಿರುವ ನಿಭಾ ಶೆಟ್ಟಿ ಈ ಚಿತ್ರದ ಛಾಯಾಗ್ರಾಹಕರು. ಕೆ.ಎಂ.ಪ್ರಕಾಶ್ ಸಂಕಲನ, ಧನಂಜಯ್ ನೃತ್ಯ ನಿರ್ದೇಶನ ಹಾಗೂ ಡಿಫರೆಂಟ್ ಡ್ಯಾನಿ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಕಿರಣ್ ರಾಜ್‌ಗೆ ನಾಯಕಿಯಾಗಿ ಸಿರಿ ಪ್ರಹ್ಲಾದ್ ಅಭಿನಯಿಸಿದ್ದಾರೆ. ಗೋಪಾಲ್ ದೇಶಪಾಂಡೆ, ಅರವಿಂದ್ ಬೋಳಾರ್, ವಿನಯ್ ರೋಹನ್ ಸಾಯಿ, ಗಿರೀಶ್ ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಜೀ5ನಲ್ಲಿ 'ದೃಶ್ಯ-2'



ಒಟಿಟಿ

ಒಟಿಟಿ ವೇದಿಕೆ ಜೀ5ನಲ್ಲಿ ಸಾಲು ಸಾಲು ಕನ್ನಡ ಸಿನಿಮಾಗಳು ತೆರೆಕಾಣುತ್ತಿವೆ. ಕ್ರೇಜಿಸ್ಟಾರ್ ರವಿಚಂದ್ರ ವಿ. ನಟನೆಯ 'ಕನ್ನಡಿಗ', ಶಿವರಾಜ್‌ಕುಮಾರ್ ನಟನೆಯ 'ಭಜರಂಗಿ–2', ರಾಜ್ ಬಿ. ಶೆಟ್ಟಿ ನಟಿಸಿ ನಿರ್ದೇಶಿಸಿರುವ 'ಗರುಡ ಗಮನ ವೃಷಭ ವಾಹನ' ಜೀ5 ಮೂಲಕ ಲಕ್ಷಾಂತರ ಪ್ರೇಕ್ಷಕರನ್ನು ತಲುಪಿವೆ. ಇದರ ಬೆನ್ನಲ್ಲೇ ರವಿಚಂದ್ರ ವಿ. ನಟನೆಯ 'ದೃಶ್ಯ–2' ಜೀ5ನಲ್ಲಿ ಫೆ.25ರಂದು ತೆರೆಕಾಣಲಿದೆ.

ಈ ಸಿನಿಮಾದಲ್ಲಿ 'ರಾಜೇಂದ್ರ ಪೊನ್ನಪ್ಪ'ನ ಪಾತ್ರದಲ್ಲಿ ರವಿಚಂದ್ರ ವಿ. ಅವರು ಚಿತ್ರಮಂದಿರಗಳಲ್ಲಿ ಸದ್ದು ಮಾಡಿದ್ದರು. ಕಳೆದ ಡಿಸೆಂಬರ್ 10ರಂದು ತೆರೆಕಂಡಿದ್ದ ಈ ಸಿನಿಮಾ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ಪಿ.ವಾಸು ಅವರ ನಿರ್ದೇಶನದಲ್ಲಿ ಈ ಸಿನಿಮಾ ಮೂಡಿಬಂದಿತ್ತು. ರವಿಚಂದ್ರ, ನವ್ಯಾ ನಾಯರ್, ಆರೋಹಿ ನಾರಾಯಣ್ ನಟಿಸಿದ್ದ ಈ ಚಿತ್ರದ ಕ್ಲೈಮ್ಯಾಕ್ಸ್ ಪ್ರೇಕ್ಷಕರನ್ನು ಕುತೂಹಲದ ಅಂಚಿನಲ್ಲಿ ಇರಿಸಿತ್ತು. ಮಲಯಾಳಂನಲ್ಲಿ ತೆರೆಕಂಡಿದ್ದ 'ದೃಶ್ಯಂ–2'ರ ರಿಮೇಕ್ ಆಗಿದ್ದ ಈ ಸಿನಿಮಾವನ್ನು ಕನ್ನಡದ ಸೊಗಡಿಗೆ ತಕ್ಕಂತೆ ಪಿ.ವಾಸು ಪ್ರೇಕ್ಷಕರ ಎದುರಿಗೆ ಇಟ್ಟಿದ್ದರು.

ಎರಡನೇ ಭಾಗದಲ್ಲಿ ನಟ ಪ್ರಮೋದ್ ಶೆಟ್ಟಿ ಪೊಲೀಸ್ ಅಧಿಕಾರಿಯಾಗಿ ಪ್ರೇಕ್ಷಕರ ಗಮನ ಸೆಳೆದಿದ್ದರು. ಸಿನಿಮಾ ಕಥೆಗಾರನ ಪಾತ್ರದಲ್ಲಿ ಅನಂತನಾಗ್ ತೆರೆಯ ತೂಕಹೆಚ್ಚಿಸಿದ್ದರು. ಶಿವಾಜಿ ಪ್ರಭು, ಆಶಾ ಶರತ್ ಅಭಿನಯವೂ ಅಮೋಘವಾಗಿತ್ತು. ಚಿತ್ರಕ್ಕೆ ಸುರೇಶ್ ಅರಸ್ ಸಂಕಲನ, ಜಿಎಸ್ವಿ ಸೀತಾರಾಮ್ ಛಾಯಾಗ್ರಹಣ, ಅಜನೀಶ್ ಬಿ. ಲೋಕನಾಥ್ ಹಿನ್ನೆಲೆ ಸಂಗೀತವಿದೆ. ❖

ಸುಭಾಷಿತ

ಅಹಂಕಾರಿ ಮನುಷ್ಯ ಒಂಟಿಯಾಗಿ ಇರಬೇಕಾಗುತ್ತದೆ.
-ಚೆನ್ನವೀರ ಕಣವಿ

ಕ್ರಿಪ್ಟೊ ಜಾಹೀರಾತಿಗೆ ಮಾರ್ಗಸೂಚಿ ಅರಿವು ಹೆಚ್ಚಿಸುವ ಕೆಲಸವಾಗಲಿ

ಕ್ರಿಪ್ಟೊ ಕರೆನ್ಸಿಗಳನ್ನು ಆಸ್ತಿ ಎಂದು ಭಾವಿಸಿ, ಅದರ ಮೇಲೆ ಹಣ ಹೂಡಿಕೆ ಮಾಡುವ ಪ್ರವೃತ್ತಿಯು ದೇಶದಲ್ಲಿ ವ್ಯಾಪಕವಾಗುತ್ತಿದೆ. ಕ್ರಿಪ್ಟೊ ಕರೆನ್ಸಿಗಳ ಮಾರುಕಟ್ಟೆಯು ಈಗಿನ ಸಂದರ್ಭದಲ್ಲಿ ಕಾನೂನಿನ ನಿಯಂತ್ರಣದಿಂದ ಹೊರಗಿರುವ ಕಾರಣ, ಅಲ್ಲಿ ಹೂಡಿಕೆ ಆಗಿರುವ ಹಣದ ಒಟ್ಟು ಮೊತ್ತ ಎಷ್ಟು ಎಂಬುದು ಖಚಿತವಿಲ್ಲ. ಪ್ರಮುಖ ಬೆಂಬಲ ಇಲ್ಲದ ಕ್ರಿಪ್ಟೊ ಕರೆನ್ಸಿಗಳ ಮೇಲೆ ಹೂಡಿಕೆ ಮಾಡಿ ಲಾಭ ಮಾಡಿಕೊಂಡವರು ಎಷ್ಟು, ನಷ್ಟಕ್ಕೆ ಗುರಿಯಾದವರು ಎಷ್ಟು ಎಂಬುದರ ಲೆಕ್ಕ ಕೂಡ ಖಚಿತವಾಗಿ ಇಲ್ಲ. ಇಂತಹ ಸಂದರ್ಭದಲ್ಲಿ ಭಾರತೀಯ ಜಾಹೀರಾತು ಗುಣಮಟ್ಟ ಮಂಡಳಿಯು (ಎಎಸ್‌ಸಿಐ) ಸ್ವಾಗತಾರ್ಹ ಹೆಜ್ಜೆಯೊಂದನ್ನು ಇರಿಸಿದೆ. ಇನ್ನು ಮುಂದೆ ಕ್ರಿಪ್ಟೊ ಕರೆನ್ಸಿಗಳಿಗೆ ಸಂಬಂಧಿಸಿದ ಜಾಹೀರಾತುಗಳ ಜೊತೆಯಲ್ಲಿ, 'ಕ್ರಿಪ್ಟೊ ಉತ್ಪನ್ನಗಳು ಕಾನೂನು ನಿಯಂತ್ರಣಕ್ಕೆ ಒಳಪಟ್ಟಿಲ್ಲ ಹಾಗೂ ಇಲ್ಲಿ ಮಾಡುವ ಹೂಡಿಕೆಗಳಲ್ಲಿ ಅಪಾಯ ಇದ್ದೇ ಇರುತ್ತದೆ' ಎಂಬ ಸಂದೇಶವನ್ನು ಪ್ರಕಟಿಸಬೇಕು, ಪ್ರಸಾರ ಮಾಡಬೇಕು ಎಂದು ಎಎಸ್‌ಸಿಐ ತಾಕೀತು ಮಾಡಿದೆ. ಎಲ್ಲ ರೀತಿಯಿಂದಲೂ ಕಾನೂನಿನ ಚೌಕಟ್ಟಿಗೆ ಒಳಪಟ್ಟಿರುವ ಮ್ಯೂಚುವಲ್ ಫಂಡ್, ಈಕ್ವಿಟಿ ಹೂಡಿಕೆಗಳ ಬಗ್ಗೆಯೇ ಸಂಪೂರ್ಣ ಅರಿವು ನಮ್ಮಲ್ಲಿ ಎಲ್ಲರಲ್ಲಿ ಇಲ್ಲ. ಇಂತಹ ಕಾನೂನುಬದ್ಧ ಹೂಡಿಕೆಗಳ ವಿಚಾರದಲ್ಲಿಯೇ ಭಯ, ಆತಂಕ, ತಪ್ಪು ಕಲ್ಪನೆಗಳು ಜನರಲ್ಲಿ ಇವೆ. ಹೀಗಿರುವಾಗ, ಸಂಪೂರ್ಣವಾಗಿ ಊಹೆಗಳ ಆಧಾರದಲ್ಲಿ ನಡೆಯುವ ಕ್ರಿಪ್ಟೊ ಕರೆನ್ಸಿ ಹೂಡಿಕೆ ವಹಿವಾಟುಗಳ ವಿಚಾರದಲ್ಲಿ ಜನರು ಸಾಕ್ಷರರಾಗಲು ಬಹಳ ಕಾಲ ಬೇಕು. ಹೀಗಾಗಿ, ಜಾರಿಗೆ ಬರಲಿರುವ ನಿಯಮಗಳು, ಇಂತಹ 'ಆಸ್ತಿ'ಗಳಲ್ಲಿ ಹೂಡಿಕೆ ಮಾಡುವ ಮೊದಲು ಅಪಾಯಗಳನ್ನು ಪರಿಪೂರ್ಣವಾಗಿ ಅರಿಯಬೇಕಿರುವುದರ ಅಗತ್ಯವನ್ನು ಕೂಡ ಹೇಳುತ್ತಿವೆ.

ಕ್ರಿಪ್ಟೊ ಕರೆನ್ಸಿಗಳ ವಿಚಾರವಾಗಿ ಸ್ಪಷ್ಟ ಕಾನೂನನ್ನು ಆದಷ್ಟು ಬೇಗ ತರಬೇಕು

ಕ್ರಿಪ್ಟೊ ಕರೆನ್ಸಿಗಳು ಅಥವಾ ಇತರ ವರ್ಚುವಲ್ ಡಿಜಿಟಲ್ ಆಸ್ತಿಗಳ (ವಿಡಿಎ) ವಹಿವಾಟಿನಲ್ಲಿ ನಷ್ಟ ಉಂಟಾದರೆ ಕಾನೂನಿನ ಮೂಲಕ ಪರಿಹಾರ ಸಿಗದೇ ಇರಬಹುದು ಎಂಬ ಸಂದೇಶವನ್ನು ಕೂಡ ಈ ಜಾಹೀರಾತುಗಳು ಒಳಗೊಂಡಿರಬೇಕು. ಈ ನಿಯಮಗಳು ಏಪ್ರಿಲ್ 1ರಿಂದ ಜಾರಿಗೆ ಬರುತ್ತವೆ. ಕ್ರಿಪ್ಟೊ ಕರೆನ್ಸಿಗಳ ಮೇಲಿನ ಹೂಡಿಕೆಯಿಂದ ಬರುವ ಲಾಭಕ್ಕೆ ಶೇಕಡ 30ರಷ್ಟು ತೆರಿಗೆ ವಿಧಿಸುವ ಕೇಂದ್ರ ಬಜೆಟ್ ಪ್ರಸ್ತಾವ ಕೂಡ ಅಂದಿನಿಂದಲೇ ಜಾರಿಗೆ ಬರಲಿದೆ. ತೆರಿಗೆ ವಿಧಿಸಲಾಗಿದೆ ಎಂದ ಮಾತ್ರಕ್ಕೆ ಕ್ರಿಪ್ಟೊ ಕರೆನ್ಸಿಗಳಿಗೆ ಕಾನೂನಿನ ಮಾನ್ಯತೆ ನೀಡಲಾಗಿದೆ ಎಂದು ಭಾವಿಸಬಾರದು ಎಂಬ ಎಚ್ಚರಿಕೆಯ ಕಿವಿಮಾತನ್ನು ಕೇಂದ್ರ ಸರ್ಕಾರ ಈಗಾಗಲೇ ಹೇಳಿದೆ. ಕೇಂದ್ರ ಸರ್ಕಾರದ ಕಿವಿಮಾತು ಹಾಗೂ ಏಪ್ರಿಲ್ 1ರಿಂದ ಜಾರಿಗೆ ಬರಲಿರುವ ಜಾಹೀರಾತು ನಿಯಮಗಳನ್ನು ಒಟ್ಟಿಗೆ ಓದಿಕೊಂಡರೆ, ಕ್ರಿಪ್ಟೊ ಕರೆನ್ಸಿಗಳ ಮೇಲಿನ ಹೂಡಿಕೆಯಲ್ಲಿ ಇರುವ ಅಪಾಯಗಳ ಬಗ್ಗೆ ಜನಸಾಮಾನ್ಯರಿಗೆ ಪ್ರಾಥಮಿಕ ಹಂತದ ಅರಿವು ಮೂಡಬಹುದು. ಸ್ಮಾರ್ಟ್‌ಫೋನ್ ಮೂಲಕವೂ ಡಿಜಿಟಲ್ ಆಸ್ತಿಗಳ ಮೇಲೆ ಸುಲಭವಾಗಿ ಹೂಡಿಕೆ ಮಾಡಲು ಸಾಧ್ಯವಾಗಿರುವ ಇಂದಿನ ಸಂದರ್ಭದಲ್ಲಿ, ಇಲ್ಲಿ ವಂಚನೆ ನಡೆದಲ್ಲಿ ಕಾನೂನು ಜಾರಿ ಸಂಸ್ಥೆಗಳ ಮೂಲಕ ನ್ಯಾಯ ಕೇಳಬಹುದು ಎಂದು ಜನಸಾಮಾನ್ಯರು ಭಾವಿಸಿರುವ ಸಾಧ್ಯತೆ ಇದೆ. ಆದರೆ, ಅಂತಹ ಯಾವುದೇ ಭರವಸೆಯನ್ನು ಪ್ರಭುತ್ವವು ವಿಡಿಎ ವಿಚಾರದಲ್ಲಿ ನೀಡಿಲ್ಲ ಎಂಬುದು ಇನ್ನು ಮುಂದೆ ಜಾಹೀರಾತುಗಳಲ್ಲಿ ಹೂಡಿಕೆಗೆ ಮುಂದಾಗುವವರಿಗೆ ತಿಳಿದಿರಲಿದೆ. ಕ್ರಿಪ್ಟೊ ಕರೆನ್ಸಿಗಳಲ್ಲಿನ ಹೂಡಿಕೆ ಅಪಾಯಕಾರಿ ಎಂಬ ಸಂದೇಶ ಹಾಗೂ ವಂಚನೆ ನಡೆದ ಸಂದರ್ಭದಲ್ಲಿ ಕಾನೂನಿನ ನೆರವು ಸಿಗದೆ ಇರಬಹುದು ಎಂಬ ಮಾಹಿತಿಯು ಜನರಿಗೆ ಪ್ರಾದೇಶಿಕ ಭಾಷೆಗಳಲ್ಲಿಯೇ ಲಭ್ಯವಾಗುವಂತೆ ಆದರೆ ಹೆಚ್ಚು ಪ್ರಯೋಜನಕಾರಿ.

ಕೆಲವು ಕ್ರಿಪ್ಟೊ ಕರೆನ್ಸಿ ವಿನಿಮಯ ವೇದಿಕೆಗಳು ಸೆಲೆಬ್ರಿಟಿಗಳ ಜೊತೆ ಒಪ್ಪಂದ ಮಾಡಿಕೊಂಡು, ಅವರ ಮೂಲಕ ಕ್ರಿಪ್ಟೊ ಕರೆನ್ಸಿಗಳ ಬಗ್ಗೆ ಪ್ರಚಾರ ಮಾಡುತ್ತಿವೆ. ಯಾವುದೇ ವಿಡಿಎ ಪರ ರಾಯಭಾರಿ ಆಗುವ ಮೊದಲು ಸೆಲೆಬ್ರಿಟಿಗಳು ಪೂರ್ವಾಪರಗಳನ್ನು ತಿಳಿದುಕೊಳ್ಳಬೇಕು ಎಂದು ಮಾರ್ಗಸೂಚಿಯು ತಾಕೀತು ಮಾಡಿದೆ. ಇದು ಕೂಡ ಸಾಮಾನ್ಯ ಹೂಡಿಕೆದಾರರ ಹಿತವನ್ನು ಒಂದಿಷ್ಟು ಮಟ್ಟಿಗೆ ಕಾಯಬಹುದು. ವಿಡಿಎ ಮೇಲಿನ ಹೂಡಿಕೆಗಳು ಮುಂದಿನ ದಿನಗಳಲ್ಲಿ ಯಾವ ಪ್ರಮಾಣದಲ್ಲಿ ಆಗಬಹುದು ಎಂಬುದನ್ನು ಈಗಲೇ ಊಹಿಸಲು ಆಗದು. ಹೂಡಿಕೆಗಳು ಹೆಚ್ಚಳ ಕಾಣುವ ಸಾಧ್ಯತೆ ಜಾಸ್ತಿಯೇ ಇದೆ. ಹೀಗಾಗಿ, ಕ್ರಿಪ್ಟೊ ಕರೆನ್ಸಿಗಳ ವಿಚಾರವಾಗಿ ಸ್ಪಷ್ಟ ಕಾನೂನನ್ನು ಆದಷ್ಟು ಬೇಗ ತರಬೇಕು. ಭಾರತದ ಮಟ್ಟಿಗೆ ಕ್ರಿಪ್ಟೊ ಕರೆನ್ಸಿಗಳು ಹಾಗೂ ಇತರ ವಿಡಿಎಗಳು ಕಾನೂನುಬದ್ಧ ಹೂಡಿಕೆ ವರ್ಗ ಹೌದೋ ಅಲ್ಲವೋ ಎಂಬುದನ್ನು ಸರ್ಕಾರವೊಂದೇ ಖಚಿತಪಡಿಸಬಲ್ಲದು. ಕಾನೂನಿನ ಮೂಲಕ ಆ ಕೆಲಸ ಬಹಳ ಬೇಗ ಆಗಬೇಕು. ಇದು ಸಣ್ಣ ಹೂಡಿಕೆದಾರರ ಹಿತ ಕಾಯುವ ತುರ್ತು ಕೆಲಸ ಎಂದು ಸರ್ಕಾರ ಭಾವಿಸಬೇಕು.

ದಿನದ ಟ್ವೀಟ್

ಇನ್ನೂ ಪಾಠ ಕಲಿತಿಲ್ಲ

ಎರಡು ಮಹಾಯುದ್ಧಗಳು, ಶೀತಲ ಸಮರಗಳು, ಆಂತರಿಕ ಯುದ್ಧಗಳು, ಧಾರ್ಮಿಕ ಸಂಘರ್ಷಗಳು, ಜನಾಂಗೀಯ ಕದನಗಳು ಮತ್ತು ಇಷ್ಟಾದರೂ ಈ ಯಾವುದರಿಂದಲೂ ಮಾನವ ಜನಾಂಗವು ಏನನ್ನೂ ಕಲಿತಿಲ್ಲ ಎನಿಸುತ್ತದೆ. ಕದನ ಎಂಬುದು ಮನುಷ್ಯನ ಸ್ವಭಾವದಲ್ಲಿ ಅಂತರ್ಗತವಾಗಿದೆಯೇ?

ಡಾ. ಅನ್ವಿತ್ ಮಂಜುನಾಥ್, ವೈದ್ಯ

ಕಿಡಿನುಡಿ

ಪ್ರಚೋದನಕಾರಿ ಪೋಸ್ಟ್‌ಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳ ಮೇಲೆ ಕಣ್ಣಿಟ್ಟಿದ್ದೇವೆ. ಸಾಮಾಜಿಕ ಜಾಲತಾಣಗಳಲ್ಲಿ ಏನು ಬೇಕಾದರೂ ಹೇಗೆ ಬೇಕಾದರೂ ಹಾಕಲು ಅವಕಾಶ ಇಲ್ಲ. ಅಂಥವರನ್ನು ಬಂಧಿಸಿ, ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು.

ಆರಗ ಜ್ಞಾನೇಂದ್ರ, ಗೃಹ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 25-2-1997

• **ಕಡುಬಡವರಿಗೆ ಹೊಸ ಪಡಿತರ ವ್ಯವಸ್ಥೆ ಅರ್ಧ ಬೆಲೆಗೆ ಆಹಾರ ಧಾನ್ಯ: ಪ್ರಧಾನಿ**

ನವದೆಹಲಿ, ಫೆ. 24 (ಪಿಟಿಐ): ಬಡತನ ರೇಖೆಗಿಂತ ಕೆಳಗಿರುವ 32 ಕೋಟಿ ಜನರಿಗೆ ಲಭ್ಯವಾಗುವ ನೂತನ ಪಡಿತರ ವ್ಯವಸ್ಥೆಯನ್ನು (ಟಿಪಿಡಿಎಸ್) ಸರ್ಕಾರ ಇಂದು ಲೋಕಸಭೆಯಲ್ಲಿ ಪ್ರಕಟಿಸಿತು. ಈ ಯೋಜನೆಗೆ ₹ 8,282 ಕೋಟಿಯಷ್ಟು ಭಾರಿ ಸಬ್ಸಿಡಿಯನ್ನು ನೀಡಿರುವುದಾಗಿಯೂ ಸರ್ಕಾರ ಘೋಷಿಸಿತು.

ನೂತನ ವ್ಯವಸ್ಥೆಯ ಪ್ರಕಾರ, ಬಡತನ ರೇಖೆಗಿಂತ ಕೆಳಗಿರುವವರಿಗೆ ಕೆ.ಜಿ ಅಕ್ಕಿಗೆ ₹ 3.50, ಗೋಧಿಗೆ ₹2.50 ಹಾಗೂ ಬಡತನ ರೇಖೆಗಿಂತ ಮೇಲಿರುವವರಿಗೆ ಉತ್ತಮ ಅಕ್ಕಿಗೆ ₹6.50, ಅತ್ಯುತ್ತಮ ಅಕ್ಕಿಗೆ ₹7.50 ಮತ್ತು ಗೋಧಿಗೆ ₹4.50 ರಂತೆ ಬೆಲೆ ನಿಗದಿ ಪಡಿಸಲಾಗುವುದು.

ಆಡಳಿತಾರೂಢ ಸಂಯುಕ್ತ ರಂಗ ಸದಸ್ಯರ ಕರತಾಡನ ಹಾಗೂ ಹರ್ಷೋದ್ಗಾರದ ನಡುವೆ ಈ ವಿಷಯವನ್ನು ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಪ್ರಕಟಿಸಿದರು. 'ಈ ವ್ಯವಸ್ಥೆಯ ಅನ್ವಯ 1.80 ಕೋಟಿ ಮೆಟ್ರಿಕ್ ಟನ್ ಆಹಾರ ಧಾನ್ಯವನ್ನು ಬಿಡುಗಡೆ ಮಾಡುವ ಸಾಧ್ಯತೆಯಿರುತ್ತದೆ' ಎಂದು ತಿಳಿಸಿದರು.

• **ಇಂದು ಸಿಪಿಪಿ ಸಭೆ**

ನವದೆಹಲಿ, ಫೆ. 24 (ಯುಎನ್‌ಐ): ಪಕ್ಷವು ಸಂಯುಕ್ತರಂಗಕ್ಕೆ ನೀಡಿದ್ದ ಬೇಷರತ್ ಬೆಂಬಲವನ್ನು ವಿಷಯಾಧಾರಿತ ಬೆಂಬಲವಾಗಿ ಪರಿವರ್ತಿಸಿದ ಕಾಂಗ್ರೆಸ್ ಕಾರ್ಯಕಾರಿಣಿ ನಿರ್ಧಾರದ ಬಗ್ಗೆ ಚರ್ಚಿಸುವ ಸಲುವಾಗಿ ಪಕ್ಷದ ಸಂಸದೀಯ ಮಂಡಳಿಯ ಸರ್ವಸದಸ್ಯರ ತುರ್ತು ಸಭೆಯನ್ನು ನಾಳೆ ಕರೆಯಲಾಗಿದೆ.

ತುರ್ತಾಗಿ ಸಭೆ ಕರೆದ ಪಕ್ಷದ ನಾಯಕರ ನಿರ್ಧಾರವನ್ನು ಹಲವು ಮಂದಿ ಸಂಸತ್ ಸದಸ್ಯರು ಟೀಕಿಸಿದ್ದಾರೆ. ಆದರೆ ಸಂಸದೀಯ ಮಂಡಳಿಯ ಪದಾಧಿಕಾರಿಗಳು, ಇದು ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯ ಎಂದು ಸಮರ್ಥಿಸಿ ಕೊಂಡಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 25-2-1972

• **ಪಕ್ಷದ ಯಶಸ್ಸಿಗೆ ಶ್ರಮಿಸಿದವರಿಗೇ ನಾಯಕತ್ವ – ಎಸ್.ಡಿ.ಶರ್ಮ**

ಬೆಂಗಳೂರು, ಫೆ. 24– ಯಾರು ಪಕ್ಷದ ಯಶಸ್ಸಿಗಾಗಿ ಹೃತ್ಪೂರ್ವಕವಾಗಿ ಶ್ರಮಿಸಿದ್ದಾರೋ ಅವರಿಗೆ ಪಕ್ಷದ ನಾಯಕರಾಗಲು ಆದ್ಯತೆ ನೀಡಲಾಗುವುದೆಂದು ಅಖಿಲ ಭಾರತ ಆಡಳಿತ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಶ್ರೀ ಶಂಕರ ದಯಾಳು ಶರ್ಮ ಅವರು ಇಂದು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ರಾಜ್ಯದ ಆಡಳಿತ ಕಾಂಗ್ರೆಸ್‌ನ ಶಾಸನ ಸಭೆಯ ಮುಂದಿನ ನಾಯಕ ಯಾರು ಎಂದು ವರದಿಗಾರರು ಪ್ರಶ್ನಿಸಿದ್ದಕ್ಕೆ ಶ್ರೀ ಶರ್ಮ ಅವರು, ಚುನಾವಣೆಗಳು ಮುಗಿದ ನಂತರ ಶಾಸನ ಸಭೆಯ ಕಾಂಗ್ರೆಸ್ ಪಕ್ಷ ತನ್ನ ನಾಯಕನನ್ನು ಚುನಾಯಿಸುವುದೆಂದು ಹೇಳಿದರು.

ನೇರವಾದ ಉತ್ತರವನ್ನು ನೀಡಬೇಕೆಂದು ವರದಿಗಾರರು ಶ್ರೀ ಶರ್ಮ ಅವರನ್ನು ಒತ್ತಾಯಪಡಿಸಿದಾಗ, ನಾಯಕನನ್ನು ಚುನಾಯಿಸುವ ಸಮಯದಲ್ಲಿ 'ನಮ್ಮ ಆದ್ಯತೆಯನ್ನು ಪಕ್ಷದ ಸದಸ್ಯರುಗಳಿಗೆ ತಿಳಿಸಲಾಗುವುದು' ಎಂದು ಅವರು ಉತ್ತರವಿತ್ತರು.

ಶಾಲೆಗೆ ಮರಳಿದ ಮಕ್ಕಳ ಸುರಕ್ಷತೆಯ ಖಾತರಿಗಾಗಿ ಸಮಗ್ರವಾಗಿ ಸನ್ನದ್ಧಗೊಳ್ಳಬೇಕಾಗುತ್ತದೆ

ಶಾಲೆ: ಸುರಕ್ಷೆ ಖಾತರಿಗೆ ಸೂತ್ರ

ವಿಶ್ಲೇಷಣೆ

ಪ್ರೊ. ಶ್ರೀಲತಾ ರಾವ್ ಶೇಷಾದ್ರಿ

ಕೋವಿಡ್ ಸಾಂಕ್ರಾಮಿಕದ ಸೋಂಕು ಹಾಗೂ ಸಾವಿನ ಪ್ರಕರಣಗಳು ಪ್ರತಿದಿನ ಕಡಿಮೆಯಾಗುತ್ತಾ ಇಳಿಮುಖವಾಗುತ್ತಿರುವಂತೆಯೇ ಬದುಕು ಕ್ರಮೇಣ ಸಹಜ ಸ್ಥಿತಿಗೆ ಮರಳುತ್ತಿದೆ. ಚಿಣ್ಣರಿಗೆ ಶಾಲಾಪೂರ್ವ ತರಗತಿಗಳೂ ಸೇರಿದಂತೆ ಎಲ್ಲಾ ಹಂತಗಳ ಶಾಲೆಗಳು ಆರಂಭವಾಗಿರುವುದು ಇದಕ್ಕೆ ಸೂಚಕ.

ಆನ್‌ಲೈನ್ ಕಲಿಕೆಯ ಗುಣಮಟ್ಟದ ಬಗ್ಗೆ ಆತಂಕ ಹೆಚ್ಚಾಗುತ್ತಿದ್ದ ಸಂದರ್ಭದಲ್ಲೇ ಶಾಲೆಗಳ ಪುನರಾರಂಭವನ್ನು ಅನೇಕ ಪೋಷಕರು ಸ್ವಾಗತಿಸಿದ್ದಾರೆ. ಆದರೆ, ಇಷ್ಟು ದೀರ್ಘಾವಧಿಯ ನಂತರ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವಲ್ಲಿ ಹಲವು ಸಾರ್ವಜನಿಕ ಆರೋಗ್ಯ ಸವಾಲುಗಳು ಸೃಷ್ಟಿಯಾಗುತ್ತವೆ. ಇವುಗಳಲ್ಲಿ ಮುಖ್ಯವಾದದ್ದು ಮುಂಜಾಗ್ರತಾ ಆರೋಗ್ಯ ಅಭ್ಯಾಸಗಳು, ಪೌಷ್ಟಿಕ ಆಹಾರ ಹಾಗೂ ಮಾನಸಿಕ ಯೋಗಕ್ಷೇಮ. ಶಾಲೆಗೆ ಮರಳಿದ ಮಕ್ಕಳ ಸುರಕ್ಷತೆಯ ಖಾತರಿಗಾಗಿ ಸಮಗ್ರವಾಗಿ ಸನ್ನದ್ಧಗೊಳ್ಳಬೇಕಾದುದೂ ಮುಖ್ಯ.

ಮೊದಲನೆಯದಾಗಿ, ಮೂಲಭೂತವಾದ ಸುರಕ್ಷತಾ ನಿಯಮಗಳನ್ನು ವ್ಯವಸ್ಥಿತವಾಗಿ ಜಾರಿಗೊಳಿಸಬೇಕು. ಎಂದರೆ... ಮಾಸ್ಕ್ ಧರಿಸುವುದು, ಕೈತೊಳೆಯುವುದು ಹಾಗೂ ಸಾಧ್ಯವಾದರೆ ದೈಹಿಕ ಅಂತರ ಕಾಪಾಡಿಕೊಳ್ಳುವುದು. ನೀರು ಸರಬರಾಜು, ಸ್ವಚ್ಛತಾ ಸೌಲಭ್ಯಗಳು ಸರಿಯಾಗಿ ಕೆಲಸ ಮಾಡುತ್ತಿರುವುದರ ಬಗ್ಗೆ ಶಾಲೆಗಳೂ ಖಚಿತಪಡಿಸಿಕೊಳ್ಳಬೇಕು. ತರಗತಿಗಳ ಪೀಠೋಪಕರಣಗಳನ್ನು ಸಮರ್ಪಕವಾಗಿ ಜೋಡಿಸಿರಬೇಕು. ಜೊತೆಗೆ, ಮಕ್ಕಳಲ್ಲಿ ಜ್ವರ, ಕೆಮ್ಮಿನಂತಹ ಯಾವುದಾದರೂ ಲಕ್ಷಣಗಳಿವೆಯೇ ಎಂಬ ಬಗ್ಗೆ ನಿಯಮಿತವಾಗಿ ನಿಗಾ ಇರಿಸುವ ವ್ಯವಸ್ಥೆಯನ್ನು ರೂಪಿಸಬೇಕು.

ಎರಡನೆಯದು, ಶಾಲೆಯ ಪೌಷ್ಟಿಕ ಆಹಾರ ಕಾರ್ಯಕ್ರಮವು ಪೂರ್ಣವಾಗಿ ಕೆಲಸ ನಿರ್ವಹಿಸುವಂತಿರುವುದನ್ನು ಶಾಲೆಗಳು ಖಾತರಿಪಡಿಸಿಕೊಳ್ಳಬೇಕು. ಮಕ್ಕಳ ಪೌಷ್ಟಿಕತೆಯ ಸ್ಥಿತಿಗತಿ ಮೇಲೆ ಈ ಸಾಂಕ್ರಾಮಿಕವು ಬಹಳಷ್ಟು ದುಷ್ಪರಿಣಾಮ ಬೀರಿರುವುದನ್ನು ಜಾಗತಿಕ ಅಂಕಿಅಂಶಗಳು ತೋರಿಸಿಕೊಟ್ಟಿವೆ. ಭಾರತದಂತಹ ಕಡಿಮೆ ವರಮಾನದ ರಾಷ್ಟ್ರಗಳಲ್ಲಂತೂ ಇದು ಅಪೌಷ್ಟಿಕತೆಯ ಗಂಭೀರ ಬಿಕ್ಕಟ್ಟಿಗೆ ಕಾರಣವಾಗಿದೆ. ಸಾಂಕ್ರಾಮಿಕದ ಮುಂಚೆಯೇ, ಭಾರತದ ಮಕ್ಕಳಲ್ಲಿ ತೀವ್ರ ಅಪೌಷ್ಟಿಕತೆ ಇತ್ತು. ಅಪೌಷ್ಟಿಕತೆಯ ಅಲ್ಪ ಹಾಗೂ ದೀರ್ಘಾವಧಿ ದುಷ್ಪರಿಣಾಮಗಳನ್ನು ತಗ್ಗಿಸುವುದಕ್ಕಾಗಿಯೇ ಸರ್ಕಾರವು 2001ರಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು (ಮಿಡ್‌ಡೇ ಮೀಲ್ ಸ್ಕೀಮ್- ಎಂಡಿಎಂಎಸ್) ರಾಷ್ಟ್ರದಾದ್ಯಂತ ವಿಸ್ತರಿಸಿತು. ರಾಷ್ಟ್ರದಾದ್ಯಂತ ಸರ್ಕಾರಿ ಶಾಲೆಗಳ 12 ಕೋಟಿ ಮಕ್ಕಳು ಈ ಯೋಜನೆಯ ವ್ಯಾಪ್ತಿಗೆ ಬರುತ್ತಾರೆ.

ಮಕ್ಕಳ ಪೌಷ್ಟಿಕತೆಗೆ ನೆರವಾಗಲು ಹಲವು ಚಟುವಟಿಕೆಗಳನ್ನು ಶಾಲೆಗಳು ಹಮ್ಮಿಕೊಳ್ಳಬಹುದು:

• ಎಲ್ಲಾ ಮಕ್ಕಳ ಎತ್ತರ ಹಾಗೂ ತೂಕವನ್ನು ಅಳೆದು ಅದನ್ನು ಡಬ್ಲ್ಯುಎಚ್‌ಒ 2017ರ ಬೆಳವಣಿಗೆ ನಕ್ಷೆ (ಚಾರ್ಟ್) ಜೊತೆ ಹೋಲಿಸಿ ನೋಡಬಹುದು. ಅಪಾಯದಲ್ಲಿರುವ ಮಕ್ಕಳನ್ನು ತಕ್ಷಣ ಗುರುತಿಸಲು ಇದರಿಂದ ಸಾಧ್ಯವಾಗುತ್ತದೆ. ತೀರಾ ಗಂಭೀರ ಸ್ಥಿತಿಯಲ್ಲಿರುವ ಮಕ್ಕಳನ್ನು ತಕ್ಷಣ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳುಹಿಸಿಕೊಡಬೇಕು.

• ಲಭ್ಯವಿರುವ ಎಂಡಿಎಂಎಸ್ ಸಂಪನ್ಮೂಲಗಳನ್ನು ಬಳಸಿಕೊಂಡು ಸಾಧ್ಯವಾದಷ್ಟು ಪ್ರೋಟೀನ್ ಹೆಚ್ಚಿರುವ ಆಹಾರ, ಹಣ್ಣು, ತರಕಾರಿ ಒದಗಿಸಬೇಕು. ಇತರ ಆಹಾರ ಗುಂಪುಗಳೂ ಮುಖ್ಯ. ಶೇಂಗಾ (ಉದಾಹರಣೆಗೆ ಚಿಕ್ಕಿ), ಮೊಳಕೆ ಹೆಸರುಕಾಳು ಅಥವಾ ಸ್ಥಳೀಯ ಸಿರಿಧಾನ್ಯ (ರಾಗಿ, ಜೋಳ), ಬಾಳೆ, ಸೀಬೆ, ಪರಂಗಿ ಅಥವಾ ಋತುಮಾನಕ್ಕೆ ಅನುಸಾರವಾಗಿ ಯಾವುದಾದರೂ ಹಣ್ಣುಗಳು ಹಾಗೂ ಸ್ಥಳೀಯವಾಗಿ ಅಗ್ಗವಾಗಿ ಲಭ್ಯವಿರುವ ಯಾವುದಾದರೂ ತರಕಾರಿಗಳು.

• ಶಾಲೆಯಿಂದ ಹೊರಗಿರುವ ಎಲ್ಲಾ ಮಕ್ಕಳು, ವಿಶೇಷವಾಗಿ ಹೆಣ್ಣು ಮಕ್ಕಳು ಮರಳಿ ಶಾಲೆಗೆ ಬರುವಂತೆ ಮಾಡಬೇಕು. ಜೀವನೋಪಾಯ ನಷ್ಟ ಮತ್ತಿತರ ಸಾಮಾಜಿಕ, ಆರ್ಥಿಕ ಕಾರಣಗಳಿಂದಾಗಿ ಅನೇಕ ದೊಡ್ಡ ಮಕ್ಕಳು ವರಮಾನ ತರುವ ಚಟುವಟಿಕೆ ಅಥವಾ ಗೃಹಕೃತ್ಯಗಳಲ್ಲಿ ತೊಡಗಿಕೊಂಡು ಶಾಲೆಗೆ ವಾಪಸ್ ಬರುವುದು ಕಷ್ಟವಾಗಿರಬಹುದು. ಮಕ್ಕಳನ್ನು ಶಾಲೆಗೆ ವಾಪಸ್ ಕರೆತರಲು ಮಧ್ಯಾಹ್ನದ ಬಿಸಿಯೂಟವು ಬಲವಾದ ಪ್ರೇರಕವಾಗಲಿದೆ.

ಕಡೆಗೆ, ಶಾಲೆಗೆ ಮರಳಿ ಬರುವ ಮಕ್ಕಳನ್ನು ಬರಮಾಡಿಕೊಳ್ಳುವಲ್ಲಿ ಸೂಕ್ಷ್ಮತೆ ಅಳವಡಿಸಿಕೊಳ್ಳುವುದು ಅಗತ್ಯವಾಗುತ್ತದೆ. ದುರ್ಘಟನೆಗಳು ಹಾಗೂ ಬದುಕಿನಲ್ಲಿ ಕಂಡುಂಡ ತುರ್ತು ಸಂದರ್ಭಗಳು, ಮನಃಸ್ಥಿತಿ ಹಾಗೂ ನಡವಳಿಕೆ ಸಮಸ್ಯೆಗಳಿಗೆ ಕಾರಣವಾಗಬಹುದು. ಸ್ವಲ್ಪ ದೊಡ್ಡ ಮಕ್ಕಳಲ್ಲಿ ಮಾದಕವಸ್ತು ವ್ಯಸನ ಹಾಗೂ ಆತ್ಮಹತ್ಯೆ ಪ್ರವೃತ್ತಿಗಳಿಗೂ ಕಾರಣವಾಗಬಹುದು ಎಂದು ಅಧ್ಯಯನಗಳು ತೋರಿಸಿವೆ.

ಸಾಂಕ್ರಾಮಿಕವು ಅಂದಾಜು 23 ಕೋಟಿ ಹೆಚ್ಚುವರಿ ಭಾರತೀಯರನ್ನು ಬಡತನಕ್ಕೆ ದೂಡಿದೆ ಎಂಬುದನ್ನು ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ 'ದಿ ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ 2021 ವರದಿ' ತೋರಿಸಿಕೊಟ್ಟಿದೆ. ಇದರಿಂದಾಗಿ ಉಂಟಾದ ದುಃಖ, ಭಯ, ಅನಿಶ್ಚಿತತೆ, ಸಾಮಾಜಿಕವಾಗಿ ಹೊರಗುಳಿಯುವಿಕೆ, ಟಿ.ವಿ, ಕಂಪ್ಯೂಟರ್ ಮುಂದೆ ಹೆಚ್ಚಿನ ಸಮಯ ಕಳೆಯುವಿಕೆ, ಮಕ್ಕಳ ಪೋಷಣೆಯಲ್ಲಿ ಅತಿಯಾದ ತೊಡಗಿಕೊಳ್ಳುವಿಕೆಯಿಂದ ಉಂಟಾಗುವ ಪೋಷಕರಲ್ಲಿನ ಸುಸ್ತು- ಮಕ್ಕಳ ಮಾನಸಿಕ ಆರೋಗ್ಯಕ್ಕೆ ಹಾನಿ ಮಾಡುತ್ತದೆ. ಹಲವು ಮಕ್ಕಳು, ವಿಶೇಷವಾಗಿ ಅಂಚಿಗೆ ಸರಿದ ಕಡುಬಡ ಕುಟುಂಬಗಳ ಮಕ್ಕಳು ಹಲ ಬಗೆಯ ಕ್ಲೇಶಭರಿತ ಸನ್ನಿವೇಶಗಳನ್ನು ಅನುಭವಿಸಿರುತ್ತಾರೆ.

ಶಾಲೆಗಳು, ಶಿಕ್ಷಕರು ಹಾಗೂ ಪೋಷಕರು ಅಳವಡಿಸಿಕೊಳ್ಳಬಹುದಾದ ಕೆಲವು ಕ್ರಮಗಳು:

• ಶಾಲೆಗೆ ವಾಪಸಾಗುವ ಕುರಿತಾದ ಭೀತಿ, ಆತಂಕ ನಿವಾರಿಸುತ್ತಾ ಸರಳವಾಗಿ, ಪ್ರಾಮಾಣಿಕವಾಗಿ, ಶಾಂತರೀತಿಯಿಂದ ಸಂವಹನ ಮಾಡುವುದು.

• ವೈರಸ್ ಸೋಂಕಿನ ಬಗ್ಗೆ ವ್ಯಾಪಕವಾಗಿ ಹರಡಿಕೊಂಡ ಮಿಥ್ಯೆಗಳು, ತಪ್ಪು ಮಾಹಿತಿಗಳನ್ನು ಬಿಡಿಸಿ, ವಿವರಿಸಿ ಹೇಳುವುದು

• ಕೌಟುಂಬಿಕ ದೌರ್ಜನ್ಯ, ಹಿಂಸೆಗೆ ಸಾಕ್ಷಿಯಾದ ಅಥವಾ ತಾವೇ ಸ್ವತಃ ಗುರಿಯಾಗಿರಬಹುದಾದ ಮಕ್ಕಳೊಂದಿಗೆ ಸೂಕ್ಷ್ಮತೆ ಅಗತ್ಯ. ಅಂತಹ ಮಕ್ಕಳು ದುಃಖಿತರಾಗಿರಬಹುದು ಅಥವಾ ವಿಚಿತ್ರ ಸ್ವಭಾವ ಪ್ರಕಟಿಸಬಹುದು. ಅವರೊಂದಿಗೆ ವಿಶ್ವಾಸದ ಬಂಧುತ್ವ ಬೆಸೆಯುವುದು ಮುಖ್ಯ. ಅಗತ್ಯ ಬಿದ್ದಲ್ಲಿ ಮಕ್ಕಳ ಸಹಾಯವಾಣಿ ಅಥವಾ ಪೊಲೀಸ್ ನೆರವಿನಂತಹ ವೃತ್ತಿಪರ ನೆರವು ಪಡೆದುಕೊಳ್ಳಬೇಕು.

• ಆನ್‌ಲೈನ್‌ನಲ್ಲಿರುವುದು ಎಲ್ಲರಿಗೂ ಬದುಕಿನ ರೀತಿಯಾಗಿ ಹೋಗಿದೆ. ಇದಕ್ಕೆ ಮಕ್ಕಳೂ ಹೊರತಲ್ಲ. ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರುವುದು ಹೇಗೆಂಬುದರ ಬಗ್ಗೆ ಮಕ್ಕಳಿಗೆ ಅರಿವಿರಬೇಕು.

• ಪರಸ್ಪರ ಸಹಾನುಭೂತಿ ಹಾಗೂ ಅಂತಃಕರಣದ ಮನಃಸ್ಥಿತಿಗಳನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳನ್ನು ಉತ್ತೇಜಿಸುವುದು ಮಕ್ಕಳ ಮಾನಸಿಕ ಆರೋಗ್ಯ ಕಾಪಾಡುವಲ್ಲಿ ಬಹು ಮುಖ್ಯ.

ಲಸಿಕೆ ಹಾಕಿಸಿಕೊಳ್ಳಲು ಇನ್ನೂ ಅರ್ಹತೆ ಪಡೆದುಕೊಂಡಿರದ ಚಿಕ್ಕ ಮಕ್ಕಳನ್ನು ಶಾಲೆಗೆ ಮರಳಿ ಕಳಿಸಲು ಒಂದಿಷ್ಟು ಆತಂಕ ಕೆಲವರಲ್ಲಿದೆ. ಇಂತಹ ಸಂದರ್ಭದಲ್ಲಿ 12ರಿಂದ 18 ವರ್ಷ ವಯಸ್ಸಿನ ಮಕ್ಕಳಿಗೆ 'ಕೋರ್ಬೆವ್ಯಾಕ್ಸ್' ಲಸಿಕೆ ನೀಡಲು ಭಾರತೀಯ ಔಷಧ ಮಹಾನಿಯಂತ್ರಕರ ಕಚೇರಿಯು ಅಂಗೀಕಾರ ನೀಡಿರುವ ಪ್ರಕಟಣೆ ಸ್ವಾಗತಾರ್ಹ ಸುದ್ದಿಯಾಗಿದೆ. ಸಹಜ ಸ್ಥಿತಿಗೆ ತಲುಪುವ ಯತ್ನದಲ್ಲಿ ಹಲವು ತಪ್ಪು ಆರಂಭಗಳು ಹಾಗೂ ಪರಿಷ್ಕರಣೆಗಳನ್ನು ಎದುರುಗೊಳ್ಳಲೇ ಬೇಕಾಗುತ್ತದೆ. ಇಂತಹ ಪರಿಸ್ಥಿತಿ ಕುರಿತಂತೆ ಸಾಮುದಾಯಿಕ ಜಾಗತಿಕ ಗ್ರಹಿಕೆಯಿಂದ ಕಂಡುಕೊಂಡಿರುವ ಕೆಲವು ಸರಳ ಮಾರ್ಗದರ್ಶಿ ಸೂತ್ರಗಳನ್ನು ಅಳವಡಿಸಿಕೊಳ್ಳುವ ಮುಖಾಂತರ, ಮಕ್ಕಳನ್ನು ಸುರಕ್ಷಿತವಾಗಿ, ಆರೋಗ್ಯಕರವಾಗಿ ಶಾಲೆಗೆ ಮರಳಿ ತರುವ ಯತ್ನದಲ್ಲಿ ಯಶಸ್ವಿಯಾಗುವ ಪ್ರಮಾಣವನ್ನು ನಾವು ಹೆಚ್ಚಿಸಿಕೊಳ್ಳಬಹುದು.

ಚುರುಮುರಿ

ಸಾ ನಿಗಮ...

• ತುರುವೇಕೆರೆ ಪ್ರಸಾದ್

ಎಂಎಲ್‌ಎ ಸಂಗಪ್ಪನವರ ಮಗಳು ಪದ್ಮಾವತಿಗೆ ಸಂಗೀತಾಭ್ಯಾಸ ನಡೀತಿತ್ತು. ಪದ್ಮಾವತಿ 'ಸರಿಗಮಪ ಚಾಂಪಿಯನ್' ಆಗಬೇಕೆಂದು ಸಂಗಪ್ಪನವರ ಪತ್ನಿ ಮಲ್ಲಮ್ಮನವರು ಹಟತೊಟ್ಟು ಸಂಗೀತ ಶಿಕ್ಷಕರೊಬ್ಬರನ್ನು ಮನೆಗೇ ಕರೆಸಿ ಮಗಳಿಗೆ ಸಂಗೀತಾಭ್ಯಾಸ ಮಾಡಿಸುತ್ತಿದ್ದರು.

ಕೋವಿಡ್ಡು, ಚಳಿಗಾಲ, ಬೋಂಡ ಭಕ್ಷಣೆ, ಅಕ್ಕಪಕ್ಕದವರ ಜೊತೆ ಜಗಳ ಎಲ್ಲಾ ಸೇರಿ ಪದ್ಮಾವತಿಯ ಗಂಟಲು ಕೆಟ್ಟು ಕೆರ ಹಿಡಿದುಹೋಗಿತ್ತು. ಅಂತೂ ಹಾಗೂ ಹೀಗೂ ಸಂಭಾಳಿಸಿ 'ವಾತಾಪಿ ಗಣಪತಿಂ ಭಜೇ' ಹೇಳಿಕೊಡುವಷ್ಟರಲ್ಲಿ ಪದ್ಮಾವತಿ 'ವಾತಾಪಿ ಜೀರ್ಣೋಭವ' ಎಂಬಂತೆ ಹ್ರಸ್ವ, ಸ್ವರ ಎಲ್ಲಾ ನುಂಗುವುದರಲ್ಲಿ ಅಪ್ಪನನ್ನು ಮೀರಿಸಿಬಿಟ್ಟಿದ್ದಳು.

ಎರಡನೇ ಕೀರ್ತನೆ ಶುರು ಮಾಡಿದರು. 'ಧರ್ಮವೇ ಜಯವೆಂಬ ದಿವ್ಯಮಂತ್ರ...' ಒಳಗಿನಿಂದ ಎಂಎಲ್‌ಎ ಸಾಹೇಬರು ಈಚೆ ಓಡಿಬಂದರು. 'ರೀ! ಮೇಷ್ಟ್ರೇ, ಅದೆಲ್ಲಾ ಈಗ ವಿವಾದ, ಎರಡನೇ ಸಾಲು 'ಮರ್ಮವನರಿತು ಮಾಡಲೇಬೇಕು ತಂತ್ರ' ಅಷ್ಟು ಮಾತ್ರ ಹೇಳ್ಕೊಡಿ'.

ಮೇಷ್ಟ್ರು ತಲೆಯಾಡಿಸಿ ಅದನ್ನೇ ಆಲಾಪಿಸಿದರು. ಪದ್ಮಾವತಿಯೂ ಅದನ್ನು ಅಣಕಿಸುವಂತೆ ಪ್ರಲಾಪಿಸಿದಳು. ಅಮ್ಮ ಮಲ್ಲಮ್ಮ ಈಚೆ ಬಂದರು.

'ಮೇಷ್ಟ್ರೇ, ಏಕಾಏಕಿ ಈ ಕೀರ್ತನೆ ಯಾಕೆ? ಮಾಜಾ ಇಳಿಯದ ಗಂಟಲಲ್ಲಿ ಪಿಜ್ಜಾ ತುರುಕಿದಂತಾಗಿದೆ. ಮೊದ್ಲು ಸರಿಗಮ ಪದನಿಸ ಹೇಳ್ಕೊಡಿ'.

ಮೇಷ್ಟ್ರು ತಲೆಯಾಡಿಸಿ 'ಸ ರಿ ಗ ಮಾ' ಎಂದು ಎಳೆದರು. ಹಿಂದೆಯೇ ಪದ್ಮಾವತಿ 'ಸಾ ನಿಗಮ' ಎಂದು ಒದರಿದಳು. ಮೇಷ್ಟ್ರು 'ಸ್ವರ ನುಂಗ್ ಬಿಡ್ತಿದೀಯಲ್ಲ... ಸ ನಿಗಮ ಅಲ್ಲಮ್ಮ, ಸರಿಗಮ...' ತಿದ್ದಿದರು.

'ರೀ ಮೇಷ್ಟ್ರೇ, ಅವಳು ಹೇಳ್ತಿರೋದೇ ಸರಿ. ಸ ರಿ ಗ ಮ, ಅಲ್ಲ, 'ಸಾ ನಿಗಮ'ನೇ! ಮಂತ್ರಿಮಂಡಲ ವಿಸ್ತರಣೆ ಇಲ್ಲ ಅಂದ್ಮೇಲೆ ಅಳಿದುಳಿದ ನಿಗಮ, ಮಂಡಳಿನೇ ಗತಿ ತಾನೇ? ಏನೇ ಭಿನ್ನಸ್ವರ, ಅಪಸ್ವರ ಇದ್ರೂ ನುಂಗಿಕೊಂಡೇ ಇರ್ಬೇಕು' ಎಂದು ಮೊಬೈಲ್ ಕಿವಿಗೆ ಹಚ್ಚಿ 'ಸಾ ನಿಗಮದ ವಿಚಾರ ಎಲ್ಲಿಗೆ ಬಂತು?' ಎಂದು ಟೋಪಿ ಕೊಡವಿಕೊಂಡು ಹೋದರು.

ಚರ್ಚೆ

ಇಷ್ಟವಾದರೆ ಕಷ್ಟವಾಗದು

ಕನ್ನಡ ಕಷ್ಟ ಎಂಬ ಹೇಳಿಕೆ ನಿಜವಲ್ಲ, ತಪ್ಪುಗ್ರಹಿಕೆ

• ಪು.ಸೂ.ಲಕ್ಷ್ಮೀನಾರಾಯಣ ರಾವ್

'ಕನ್ನಡ ಇಷ್ಟ, ಆದರೆ... ಕಷ್ಟ!' ಎಂಬ ರಾಹುಲ್ ಪುಟ್ಟಿ ಮತ್ತು ಪೃಥ್ವೀರಾಜ ಕವತ್ತಾರು ಅವರ ಲೇಖನ (ಸಂಗತ, ಫೆ. 22) ಆಂಶಿಕ ಸತ್ಯವನ್ನುಳ್ಳದ್ದಾಗಿ ಹಾಗೂ ಇನ್ನೂ ಹಲವು ವಾಸ್ತವ ಸಂಗತಿಗಳ ಅರಿವಿನ ಕೊರತೆಯನ್ನು ಉಳ್ಳದ್ದಾಗಿರುವುದರಿಂದ ಪೂರ್ಣವಾಗಿ ಒಪ್ಪುವುದು ಕಷ್ಟ. ಹಾಗೆ ನೋಡಿದರೆ ಎಲ್ಲ ಭಾಷೆಗಳ ಕಲಿಕೆಯೂ ಕಷ್ಟವೆ. ಯಾವುದೂ ಸುಲಭವಲ್ಲ.

ಕರ್ನಾಟಕದ ಪ್ರೌಢಶಾಲೆಗಳಲ್ಲಿ ಕಲಿಸುವ ಪ್ರಥಮ ಭಾಷೆ ಸಂಸ್ಕೃತ ಸುಲಭ ಅಂತ ಎಲ್ಲರೂ ಹೇಳುತ್ತಾರೆ. ನಿಜ. ಆದರೆ ಅಲ್ಲಿ ಭಾಷಾ ಕಲಿಕೆಯೇ ಆಗಿರುವುದಿಲ್ಲ. ಹೆಚ್ಚು ಅಂಕ ಗಳಿಕೆ ಮಾತ್ರ ಆಗಿರುತ್ತದೆ. ಈ ಸಂಸ್ಕೃತ ಪಠ್ಯವಾಗಲಿ, ಪರೀಕ್ಷೆಯ ಕ್ರಮವಾಗಲಿ, ಮೌಲ್ಯಮಾಪನ ವಿಧಾನವಾಗಲಿ ತೀರ ಬಾಲಿಶವಾಗಿರುತ್ತವೆ. ಅದೇ ಪ್ರೌಢಶಾಲಾ ಹಂತದ ಕನ್ನಡ ಪ್ರಥಮ ಭಾಷೆಯ ಪಠ್ಯ, ಪರೀಕ್ಷೆ, ಮೌಲ್ಯಮಾಪನಗಳೊಂದಿಗೆ ಸಂಸ್ಕೃತವನ್ನು ಇಟ್ಟುಕೊಂಡು ತುಲನೆ ಮಾಡಿದಾಗಲೇ ಈ ವಾಸ್ತವ ಅರ್ಥವಾಗುವುದು.

ಮೂರು ವರ್ಷ ಸಂಸ್ಕೃತವನ್ನು ಅಧ್ಯಯನ ಮಾಡಿ, ಉದ್ದಕ್ಕೂ ಗರಿಷ್ಠ ಅಂಕಗಳನ್ನು ಬುಟ್ಟಿಗೆ ಹಾಕಿಕೊಂಡ ವಿದ್ಯಾರ್ಥಿಯೂ ನಾಲ್ಕು ಸಂಸ್ಕೃತ ವಾಕ್ಯಗಳನ್ನು ಆಡಲಾರ, ಬೇರೆಯವರು ಆಡಿದ್ದನ್ನು ಅರ್ಥಮಾಡಿಕೊಳ್ಳಲಾರ, ಸ್ವತಂತ್ರವಾಗಿ ವಾಕ್ಯಗಳನ್ನು ರಚಿಸುವುದಂತೂ ಕನಸಿನ ಮಾತು.

ಬಹುಮಂದಿ ಕನ್ನಡವನ್ನು ಮಾತನಾಡಲು ಮತ್ತು ಆಡಿದ್ದನ್ನು ಅರಿಯಲು ಬಲ್ಲವರಾದ್ದರಿಂದ ಒಂದು ರೀತಿಯ ಉದಾಸೀನದಿಂದ ಅದನ್ನು ಕಲಿಯತೊಡಗುತ್ತಾರೆ. ಹಾಗಾಗಿ ಉತ್ತೀರ್ಣರೇನೊ ಆಗುತ್ತಾರೆ. ಆದರೆ ಅಂಕ ಗಳಿಕೆ ಬಹುಪಾಲು ಗರಿಷ್ಠವಾಗಿರುವುದಿಲ್ಲ ಅಷ್ಟೆ. ಈ ಹಿನ್ನೆಲೆಯ ವಾತಾವರಣದಿಂದಾಗಿ ಕನ್ನಡ ಕಷ್ಟ ಎಂಬ ಮಾತು ಸಲೀಸಾಗಿ ವ್ಯಕ್ತವಾಗುತ್ತದೆ.

'ಕನ್ನಡ ಕಷ್ಟ' ಎಂದು ಕೆಲವು (ಬಹುಶಃ ನಗರವಾಸಿಗಳು) ಪೋಷಕರು ಮತ್ತು ಮಕ್ಕಳು ಹೇಳುವ ಮಾತಿನ ಹಿಂದೆ ಇನ್ನೂ ಒಂದು ಸೂಕ್ಷ್ಮ ಅಡಗಿರುವುದನ್ನು ಮನಗಾಣಬೇಕಿದೆ. ಅದೇನೆಂದರೆ, ತಮ್ಮ ಭವಿಷ್ಯದ ಬದುಕಿಗೆ ಇಂಗ್ಲಿಷ್ ಮಾಧ್ಯಮ ಮತ್ತು ಭಾಷೆ ಅನಿವಾರ್ಯ ಎಂಬ ಭ್ರಮೆ ಅಥವಾ ಅರೆಬರೆ ವಾಸ್ತವದ ಸಂಗತಿ. ದ್ವಿತೀಯ ಭಾಷೆಯಾಗಿ ಮತ್ತು ಸ್ವಂತ ಪ್ರಯತ್ನದ ಮೂಲಕ ಕಲಿಯಬಹುದಾದ ಇಂಗ್ಲಿಷ್‌ನಿಂದ ಖಂಡಿತ ಅನ್ನದ ಬದುಕನ್ನು ರೂಪಿಸಿಕೊಳ್ಳಬಹುದೆಂಬ ವಾಸ್ತವದ ಅರಿವಿಲ್ಲದಿರುವುದು, ಜೊತೆಗೆ ಇಂಗ್ಲಿಷ್‌ನಿಂದ ಸಮಾಜದಲ್ಲಿ ಗೌರವ ಲಭ್ಯವಾಗುತ್ತದೆಂಬ ಭ್ರಮೆ ಹಾಗೂ ಗರಿಷ್ಠ ಅಂಕಗಳಿಂದ ದೊಡ್ಡ ಮೊತ್ತದ ಸಂಬಳ ತರುವ ಉದ್ಯೋಗ, ತನ್ಮೂಲಕ ಸ್ವಂತ ಮನೆ, ಕಾರು ಇತ್ಯಾದಿ ಅಂತರಂಗದ ಲೌಕಿಕ ಬಯಕೆಗಳು.

ಶಿಕ್ಷಣವೆಂದರೆ ಇದಷ್ಟೇ ಅಲ್ಲ ಇದಕ್ಕಿಂತಲೂ ಮುಖ್ಯವಾಗಿ ಸ್ವಾತಂತ್ರ್ಯ, ಸಮಾನತೆ, ಸೋದರತೆ ಮುಂತಾದ ಮೌಲ್ಯಗಳಿಂದ ಕೂಡಿದ ಸರಳ, ಸುಂದರ ಬದುಕನ್ನು ರೂಪಿಸಿಕೊಳ್ಳುವ ಹಾಗೂ ತನ್ನ ಅಂತಸ್ಸತ್ವವನ್ನು ಬೆಳಕಿಗೆ ತರುವಂತಹ ಮಹತ್ತರವಾದುದು ಎಂಬ ಪ್ರಜ್ಞೆಯ ಲೋಪವೂ 'ಕನ್ನಡ ಕಷ್ಟ' ಎಂಬ ಸಾಮಾನ್ಯ ಅನಿಸಿಕೆಗೆ ಕಾರಣ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಮಂದಿ ಅನುತ್ತೀರ್ಣರಾಗುವುದು ಗಣಿತ ಮತ್ತು ಇಂಗ್ಲಿಷ್ ವಿಷಯಗಳಲ್ಲಿ, ಕನ್ನಡದಲ್ಲಲ್ಲ. ಇದೆಲ್ಲದರ ಜೊತೆಗೆ ಇಂಗ್ಲಿಷ್ ಮತ್ತು ಸಂಸ್ಕೃತವು ಕನ್ನಡಕ್ಕಿಂತ ಶ್ರೇಷ್ಠ ಎಂಬ ಮನಃಸ್ಥಿತಿಯೂ ಕಾರಣ. 'ಐ ಡೋಂಟ್ ನೋ ಕನ್ನಡ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವುದು ಮತ್ತು 'ನನಗೆ ಇಂಗ್ಲಿಷ್ ಬರುವುದಿಲ್ಲ' ಎಂದು ಹೇಳಿದರೆ ಅದು ಅವಮಾನ ಎಂದು ಭಾವಿಸುವುದು ಈ ಕಾರಣದಿಂದಲೆ.

ಲೇಖಕರು ಹೇಳುವ ಹಾಗೆ ಇಂದು ಕನ್ನಡವೇ ಅಲ್ಲ ಯಾವ ಭಾಷಾ ಬೋಧನೆಯೂ ವೈಜ್ಞಾನಿಕವಾಗಿ ಆಗುತ್ತಿಲ್ಲ. ವಾಸ್ತವದಲ್ಲಿ ಭಾಷಾ ಬೋಧನೆಯು ಭಾಷಾ ಬೋಧನೆಯೇ ಆಗಿಲ್ಲ. ಆಯಾ ಭಾಷೆಗಳ ಮೂಲಕ ಒಂದಷ್ಟು ಆಯಾ ಗದ್ಯ ಪದ್ಯಗಳ ಅರ್ಥ ವಿವರಣೆ ಮತ್ತು ಒಂದಷ್ಟು ವ್ಯಾಕರಣಾಂಶಗಳನ್ನು ತಿಳಿಸುವುದಷ್ಟೇ ಆಗುತ್ತಿದೆ. ಮೂಲಾಕ್ಷರಗಳು, ಗುಣಿತಾಕ್ಷರಗಳು, ಒತ್ತಕ್ಷರಗಳ ಸ್ಪಷ್ಟ ಕಲ್ಪನೆಯ ಕಡೆಗೆ ಗಮನಹರಿಸುತ್ತಿಲ್ಲ. ಬರವಣಿಗೆಯ ಕೌಶಲದ ಬಗೆಗಂತೂ ಕಡು ನಿರ್ಲಕ್ಷ್ಯ! ವಾಕ್ಯರಚನೆಗಳಲ್ಲಿನ ನಾನಾ ವಿಧಗಳು, ಆಡು ಭಾಷೆಗೂ ಬರಹದ ಭಾಷೆಗೂ ಇರುವ ವ್ಯತ್ಯಾಸಗಳು, ಶಬ್ದನಿಷ್ಪತ್ತಿ, ಶಬ್ದಸಂಪತ್ತು, ನಿಘಂಟುಗಳ ಬಳಕೆ, ಸರಳ ಭಾಷಾಭಿವ್ಯಕ್ತಿ, ಸ್ಪಷ್ಟ ನಿರೂಪಣಾ ಕೌಶಲ- ಮಾತನಾಡುವ ಮತ್ತು ಬರಹದ ಮೂಲಕ ಮಾಡಬಹುದಾದ ಸಂವಹನ ಸಾಧ್ಯತೆಗಳ ಕುರಿತು ನಡೆಯುತ್ತಿರುವ ಅಧ್ಯಾಪನ ನಗಣ್ಯ ಎಂದೇ ಹೇಳಬಹುದು. ಈ ಹಿನ್ನೆಲೆಯಲ್ಲಿ ಪ್ರಬಂಧ ರಚನೆ, ಗಾದೆಗಳ ಅರ್ಥವಿಸ್ತರಣೆ, ಪತ್ರಲೇಖನ, ಮುಖ್ಯಾಂಶಗಳನ್ನು ವಿಸ್ತರಿಸಿ ಬರೆಯುವುದು ಇತ್ಯಾದಿ ಅಂಶಗಳ ಬಗೆಗೆ ಹೆಚ್ಚು ಒತ್ತು ನೀಡಬೇಕಾಗುತ್ತದೆ.



ಆಶುಭಾಷಣ, ಚರ್ಚಾಸ್ಪರ್ಧೆ, ಭಾಷಣ, ಸಂವಾದ, ವಿಚಾರಸಂಕಿರಣ, ಏಕಪಾತ್ರಾಭಿನಯ, ಕಿರು ನಾಟಕ, ನಾಟಕ ಇತ್ಯಾದಿ ಪ್ರಯೋಗಗಳೂ ವಿದ್ಯಾರ್ಥಿಗಳ ಸಂಭಾಷಣಾ ಕೌಶಲಗಳನ್ನು ತನ್ಮೂಲಕ ಭಾಷಾ ಸಾಮರ್ಥ್ಯವನ್ನು ಸಾಧಿಸಬಹುದು. ಎಲ್ಲರೂ ಭಾಷಾ ಪ್ರವೀಣರಾಗುವ ಅಗತ್ಯವಿಲ್ಲ. ಯಾರಲ್ಲಿ ಭಾಷಾ ಕೌಶಲ ಅಥವಾ ಪ್ರತಿಭೆ ಇರುತ್ತದೋ ಅಂತಹವರು ಭಾಷಾ ಪ್ರಾವೀಣ್ಯ ಪಡೆದುಕೊಳ್ಳಬಹುದು.

ಈ ಹಿನ್ನೆಲೆಯಲ್ಲಿ ಯೋಚಿಸಿದರೆ ಕನ್ನಡ ಕಷ್ಟ ಎಂಬ ಹೇಳಿಕೆ ನಿಜವಲ್ಲ, ತಪ್ಪುಗ್ರಹಿಕೆ. ಅದರಲ್ಲೂ ಇಷ್ಟವಾದದ್ದೆಂದೂ ಕಷ್ಟವಾಗುವುದಿಲ್ಲ.

ವಾಚಕರ ವಾಣಿ

ಕನ್ನಡ ಕಲಿಕೆ ಕಡ್ಡಾಯಗೊಳ್ಳಲಿ

ಮಾತೃಭಾಷಾ ದಿನದಂದು (ಫೆ. 21) ಕನ್ನಡದ ಕುರಿತು ಹಲವು ರೀತಿಯಲ್ಲಿ ಅಲ್ಲಲ್ಲಿ ಚರ್ಚೆಗಳಾಗಿವೆ. ಅಂತೆಯೇ ಪ್ರತೀ ನವೆಂಬರ್ ತಿಂಗಳಿಡೀ ಕನ್ನಡ ಕಟ್ಟುವ ಕುರಿತು ಭಾಷಣಗಳಾಗುತ್ತವೆ. ನಮ್ಮ ಮಾತೃಭಾಷೆಯನ್ನು ಬೆಳೆಸಲು ಮಕ್ಕಳಲ್ಲಿ ಮೊದಲು ಭಾಷಾಭಿಮಾನ ಬೆಳೆಸಬೇಕು. ಕರ್ನಾಟಕ ಸರ್ಕಾರವು ಕನ್ನಡ ಭಾಷಾ ಬೆಳವಣಿಗೆ ದೃಷ್ಟಿಯಿಂದ ಕನಿಷ್ಠ ಐದನೇ ತರಗತಿಯವರೆಗಾದರೂ ಕನ್ನಡ ವಿಷಯವನ್ನು ಕಡ್ಡಾಯಗೊಳಿಸಬೇಕು. ಕನ್ನಡ ಉಳಿಸಿ ಬೆಳೆಸುವ ಇಚ್ಛಾಶಕ್ತಿ ಪ್ರತಿಯೊಬ್ಬ ಕನ್ನಡಿಗರ ಮನೆ ಮನದಲ್ಲೂ ಅರಳಬೇಕು. ಆದರೆ ಕನ್ನಡಿಗರು ಭಾಷೆ ವಿಷಯದಲ್ಲಿ ಹೆಚ್ಚು ಔದಾರ್ಯವಂತರು!

ಕರ್ನಾಟಕದಲ್ಲೇ ತಮಿಳು, ತೆಲುಗು, ಹಿಂದಿ ಭಾಷೆಯವರು ತಮ್ಮ ಭಾಷೆಯಲ್ಲಿ ಮಾತನಾಡಿದರೆ ಕನ್ನಡಿಗರು ಅವರವರದೇ ಭಾಷೆಯಲ್ಲಿ ಉತ್ತರಿಸುತ್ತಾರೆ. ಅವರಲ್ಲಿ ಕನ್ನಡ ಮಾತನಾಡುವ ಗೋಜಿಗೂ ಹೋಗುವುದಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳ ಕೆಲವು ಶಾಖೆಗಳಲ್ಲಿ ಕನ್ನಡ ಬಾರದ, ಹಿಂದಿಯನ್ನೇ ಮಾತನಾಡುವ ಹಲವು ಉದ್ಯೋಗಿಗಳಿದ್ದಾರೆ. ಗ್ರಾಹಕರೊಂದಿಗೆ ಅವರು ಹಿಂದಿಯಲ್ಲೇ ಮಾತನಾಡುತ್ತಾರೆ. ಕನ್ನಡಿಗರು ಬೇರೆಯವರ ಸಹಾಯ ಪಡೆದು ಅವರ ಕೆಲಸ ಮಾಡಿಕೊಂಡು ಬರಬೇಕು. ಇದು ಕನ್ನಡಿಗರ ವ್ಯಥೆಯ ಕಥೆ. ಕನ್ನಡ ಭಾಷೆ ಬೆಳವಣಿಗೆಗೆ ವಿವಿಧ ರೀತಿಯಲ್ಲಿ ಪ್ರೋತ್ಸಾಹ ನೀಡುವ ಅಗತ್ಯವಿದೆ. ಎಂಥ ಸವಾಲು ಎದುರಾದರೂ ಕನ್ನಡ ಕಲಿಕೆಯನ್ನು ಕಡ್ಡಾಯ ಮಾಡುವುದರಿಂದ ಮಾತ್ರ ನಮ್ಮ ಭಾಷೆಯನ್ನು ಉಳಿಸಿಕೊಳ್ಳಲು ಸಾಧ್ಯ.

ಗಣಪತಿ ಶಿರಳಗಿ, ಸಾಗರ

ಎಲ್ಲ ರಾಷ್ಟ್ರಗಳ ಸಹಕಾರ ಅಗತ್ಯ

ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷ ಇಡೀ ಜಗತ್ತಿನ ಮೇಲೆ ಪರಿಣಾಮ ಬೀರಲಿದೆ. ಏಕೆಂದರೆ ಕಚ್ಚಾ ತೈಲ ಉತ್ಪಾದನೆ ಮಾಡುವ ಪ್ರಮುಖ ದೇಶಗಳಲ್ಲಿ ರಷ್ಯಾ ಕೂಡ ಒಂದು. ಹೀಗಾಗಿ, ತೈಲ ಬೆಲೆಯಲ್ಲಿ ಏರಿಕೆಯಾಗುವ ಸಂಭವ ಇರುತ್ತದೆ. ಇದು ಭಾರತದ ಮೇಲೆ ನೇರ ಪರಿಣಾಮ ಬೀರಬಲ್ಲದು.

ರಷ್ಯಾ ಅತಿ ಹೆಚ್ಚು ಶಸ್ತ್ರಾಸ್ತ್ರಗಳನ್ನು ಸಹ ರಫ್ತು ಮಾಡುವ ದೇಶವಾಗಿದೆ. ಜಗತ್ತು ಎರಡು ಬಣಗಳಾಗಿ, ಅಮೆರಿಕ ಮತ್ತು ರಷ್ಯಾದ ಪರ ನಿಲ್ಲುವ ಸಾಧ್ಯತೆ ಇದೆ. ಈಗಿನ ಸಂಘರ್ಷದಿಂದ ಜನರಲ್ಲಿ ಆತಂಕ ಮೂಡಿದ್ದು, ಶಾಂತಿ ನೆಲೆಸಲು ಎಲ್ಲಾ ರಾಷ್ಟ್ರಗಳು ಪ್ರಯತ್ನಿಸಬೇಕು. ಭಾರತವು ಶಾಂತಿ ಸ್ಥಾಪನೆಯ ನೇತೃತ್ವ ವಹಿಸುವುದು ಸೂಕ್ತ.

ರಾಸುಮ ಭಟ್, ಚಿಕ್ಕಮಗಳೂರು

ಜಲಜೀವನ್: ಹಣ ಸದುಪಯೋಗವಾಗಲಿ

ಕೇಂದ್ರ ಸರ್ಕಾರವು ಬಹಳ ಆಸ್ಥೆಯಿಂದ ಜಲಜೀವನ್ ಮಿಷನ್ ಹಾಗೂ ಅಟಲ್ ಭೂ- ಜಲ್ ಯೋಜನೆಗಳನ್ನು ಜಾರಿಗೆ ತಂದಿದೆ. ಅನುದಾನವನ್ನೂ ಬಿಡುಗಡೆ ಮಾಡಿದೆ. ಸಾವಿರಾರು ಕೋಟಿ ರೂಪಾಯಿಯ ಈ ಯೋಜನೆಗಳು ಅರ್ಹರಿಗೆ ತಲುಪಿದರೆ ನಿಜಕ್ಕೂ ಅದೊಂದು ಉತ್ತಮ ಸಾಧನೆ. ಆದರೆ ದೇವರು ಕೊಟ್ಟರೂ ಪೂಜಾರಿ ಕೊಡ ಎಂಬಂತಾಗಿದೆ ಈ ಯೋಜನೆಗಳ ಸ್ಥಿತಿ. ಯೋಜನೆಗಳಡಿ ಹಣವಿದೆ, ಅದನ್ನು ಖರ್ಚು ಮಾಡಬೇಕೆಂಬ ಒಂದೇ ಉದ್ದೇಶದಿಂದ, ಈಗಾಗಲೇ ನೀರಿನ ಸರಬರಾಜು ಇರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೂರಾರು ಊರುಗಳ ಕೊಳವೆ ಮಾರ್ಗಕ್ಕೆ (ಪೈಪ್‌ಲೈನ್) ಪರ್ಯಾಯವಾಗಿ, ಉತ್ತಮವಾಗಿ ಹಾಕಿದ್ದ ಕಾಂಕ್ರೀಟ್ ರಸ್ತೆಗಳನ್ನು ಅಡಿಗಡಿಗೂ ಯಂತ್ರಗಳಿಂದ ಕತ್ತರಿಸಿ ಹಾಳುಮಾಡಿ ಹೊಸ ಪೈಪ್‌ಲೈನ್ ಹಾಕಲಾಗುತ್ತಿದೆ. ಇದನ್ನು ಯಾರೂ ಪ್ರಶ್ನಿಸುವಂತಿಲ್ಲ!

ಮತ್ತೊಂದೆಡೆ, ಕುಡಿಯುವ ನೀರಿಗೂ ತತ್ವಾರವಾಗಿ ಉತ್ತರ ಕರ್ನಾಟಕದ ಸಾವಿರಾರು ಗ್ರಾಮಗಳು ತೊಂದರೆ ಅನುಭವಿಸುತ್ತಿವೆ. ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಯ ಕೊಳವೆ ಮಾರ್ಗ ಹಾಳಾದರೆ ಬದಲಿ ಮಾರ್ಗ ಹಾಕುವುದು ಸರಿ. ಆದರೆ ಬೇರೊಂದು ಪೈಪ್‌ಲೈನ್ ಏಕೆ? ಇರುವ ಮಾರ್ಗದ ಮೂಲಕವೇ 24 ಗಂಟೆ ನೀರನ್ನು, ಅದೂ ನೀರು ಶುದ್ಧೀಕರಣ ಘಟಕ ಸ್ಥಾಪಿಸಿ ತನ್ಮೂಲಕ ಕೊಡಲಿ. ಅದುಬಿಟ್ಟು ಕೇವಲ ಹಣ ಕೊಳ್ಳೆ ಹೊಡೆಯಲು ಹಣವನ್ನು ಯೋಜನೆಯ ಮೂಲಕ ಭೂಮಿಗೆ ಹಾಕದಿರಲಿ. ತೆರಿಗೆ ಹಣ ಪೋಲಾಗದಿರಲಿ. ಈ ಯೋಜನೆಯ ವಿರುದ್ಧ ಉತ್ತರ ಕನ್ನಡದ ಕೆಲವು ಊರುಗಳ ಜನ ಧ್ವನಿ ಎತ್ತಿದ್ದಾರೆ. ಶಂಕುಸ್ಥಾಪನೆಯನ್ನು ತಡೆದು ಹಿಮ್ಮೆಟ್ಟಿಸಿದ್ದಾರೆ. ಅನ್ಯಾಯದ ವಿರುದ್ಧ ಧ್ವನಿ ಎತ್ತಿದ್ದಾರೆ. ಹಾಗಾಗಿ ಇನ್ನಾದರೂ ಸಂಬಂಧಪಟ್ಟವರು ಎಚ್ಚೆತ್ತು, ಅರ್ಹರಿಗೆ ಕುಡಿಯುವ ನೀರು ಸರಬರಾಜು ಮಾಡಲಿ.

ಹೊಸಹಳ್ಳಿ ದಾಳೇಗೌಡ, ಬಿ.ಆರ್. ಪ್ರಾಜೆಕ್ಟ್, ಶಿವಮೊಗ್ಗ

ಸಂದರ್ಶನದ ಅಂಕ ಕಡಿತ: ಮೂಡಿದ ಭರವಸೆ

ಅಕ್ರಮ, ಭ್ರಷ್ಟಾಚಾರ ಹಾಗೂ ಆಮೆಗತಿಯ ಕಾರ್ಯನಿರ್ವಹಣೆಗೆ ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಹೆಸರುವಾಸಿ. 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ನಡೆಸಿದ್ದ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದ 362 ಅಭ್ಯರ್ಥಿಗಳ ನೇಮಕಾತಿಗೆ ಎದುರಾಗಿದ್ದ ತೊಡಕು ನಿವಾರಿಸುವ ಉದ್ದೇಶದ ಮಸೂದೆಗೆ ವಿಧಾನಮಂಡಲ ಅನುಮೋದನೆ ನೀಡಿದೆ. ಅಕ್ರಮವನ್ನು ಸಕ್ರಮಗೊಳಿಸುವ ಮೂಲಕ ಪ್ರಾಮಾಣಿಕ ಅಭ್ಯರ್ಥಿಗಳಿಗೆ ಅನ್ಯಾಯ ಮಾಡುತ್ತಿದೆ. ಇನ್ನೊಂದೆಡೆ, ಅದೇ ವೃಂದದ ಹುದ್ದೆಗಳಿಗೆ ನಡೆಸುವ ಸಂದರ್ಶನದ ಅಂಕಗಳನ್ನು 50ರಿಂದ 25ಕ್ಕೆ ಇಳಿಸಲು ಮುಂದಾಗಿದೆ. 2011ನೇ ಸಾಲಿನ ವಂಚಿತ ಅಭ್ಯರ್ಥಿಗಳ ಮನಸ್ಸಿನ ತೃಪ್ತಿಗೋ ಅಥವಾ ಮುಂದೆ ಪರೀಕ್ಷೆಯನ್ನು ಎದುರಿಸಲಿರುವ ಆಕಾಂಕ್ಷಿಗಳ ಮೆಚ್ಚುಗೆಗೋ ಸರ್ಕಾರವು ಪೂರ್ವಪೀಠಿಕೆ ಹಾಕಿದಂತಿದೆ.

ಸಂದರ್ಶನದ ಅಂಕಗಳನ್ನು ಕಡಿತಗೊಳಿಸುವ ನಿರ್ಧಾರ ಉತ್ತಮವಾದುದು. ಆಕಾಂಕ್ಷಿಗಳ ಮನದಲ್ಲಿ ಇದು ಭರವಸೆಯ ಚಿಗುರೊಡೆಸಿದೆ. ನೇಮಕಾತಿಗಳನ್ನು ಇನ್ನೂ ಹೆಚ್ಚು ಪಾರದರ್ಶಕಗೊಳಿಸಲು ಸರ್ಕಾರ ದೃಢ ಹೆಜ್ಜೆ ಇಡಲಿ. ಕೆಪಿಎಸ್‌ಸಿಗೆ ಕಾಯಕಲ್ಪವನ್ನು ಕಲ್ಪಿಸಲಿ.

ಮಲ್ಲಿಕಾರ್ಜುನ್ ಲಕ್ಷ್ಮಣ ತಿಗಡಿ, ಚಿಂಚಲಿ, ಬೆಳಗಾವಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಷ್ಯಾ–ಉಕ್ರೇನ್ ಯುದ್ಧ
ಭಾರತಕ್ಕೆ ತುಟ್ಟಿ

ಪ್ರಜಾವಾಣಿ ವಾರ್ತೆ

ರಷ್ಯಾ ಹಾಗೂ ಉಕ್ರೇನ್ ನಡುವಿನ ಯುದ್ಧವು ಭಾರತದ ಅಡುಗೆ ಮನೆಗಳಲ್ಲಿ ಒಂದಿಷ್ಟು ಕಂಪನಕ್ಕೆ ಕಾರಣವಾಗಲಿದೆ. ಉಕ್ರೇನ್ ಹಾಗೂ ರಷ್ಯಾದಿಂದ ಪೂರೈಕೆಯಾಗುವ ಸೂರ್ಯಕಾಂತಿ ಎಣ್ಣೆ ಹಾಗೂ ಗೋಧಿ ಸೇರಿದಂತೆ ಹಲವು ದವಸ-ಧಾನ್ಯಗಳ ಮೇಲೆ ಭಾರತ ಅವಲಂಬಿತವಾಗಿದೆ. ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಈ ಎರಡೂ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ.

ಕಪ್ಪು ಸಮುದ್ರ ವ್ಯಾಪ್ತಿಯಲ್ಲಿರುವ ರಷ್ಯಾ ಹಾಗೂ ಉಕ್ರೇನ್ ದೇಶಗಳನ್ನು ಯುರೋಪಿನ ಗೋಧಿ ಕಣಜ ಎಂದೇ ಕರೆಯಲಾಗುತ್ತದೆ. ಇಲ್ಲಿ ಗೋಧಿ, ಸೂರ್ಯಕಾಂತಿ, ಸೋಯಾಬೀನ್ ಮೊದಲಾದ ಬೆಳೆಗಳನ್ನು ಅತ್ಯಂತ ಹೆಚ್ಚು ಬೆಳೆಯಲಾಗುತ್ತದೆ. ಇಲ್ಲಿಂದ ಜಗತ್ತಿಗೆ ಅತ್ಯಧಿಕ ಪ್ರಮಾಣದಲ್ಲಿ ಧಾನ್ಯಗಳು ಪೂರೈಕೆಯಾಗುತ್ತವೆ. ಅದರೆ ಯುದ್ಧ ಆರಂಭವಾಗಿರುವುದರಿಂದ ಈ ಉತ್ಪನ್ನಗಳ ಪೂರೈಕೆ ವ್ಯತ್ಯಯವಾಗುತ್ತದೆ. ಇದು ಆಹಾರ ಹಣದುಬ್ಬರಕ್ಕೆ ಕಾರಣವಾಗಲಿದೆ ಎನ್ನುತ್ತಾರೆ ತಜ್ಞರು.

ಜಗತ್ತಿನ ಅತಿದೊಡ್ಡ ಗೋಧಿ ರಫ್ತು ದೇಶ ರಷ್ಯಾ, ಉಕ್ರೇನ್ 4ನೇ ಸ್ಥಾನದಲ್ಲಿದೆ. ಜಗತ್ತಿಗೆ ಪೂರೈಕೆಯಾಗುವ ಗೋಧಿಯಲ್ಲಿ ಈ ಎರಡೂ ದೇಶಗಳ ಪಾಲು ಶೇ 25ರಷ್ಟು ಹೆಚ್ಚು. ಪೂರೈಕೆ ಸರಪಳಿಯಲ್ಲಿ ಆಗಿರುವ ವ್ಯತ್ಯಯ ಹಾಗೂ ಕೋವಿಡ್ ಕಾರಣದಿಂದ ಬೆಲೆಗಳು ಈಗಾಗಲೇ ಏರಿಕೆಯಾಗಿದ್ದು, ಯುದ್ಧದಿಂದ ಇನ್ನಷ್ಟು ಏರಿಕೆ ಖಚಿತವಾಗಿದೆ. ಭಾರತವು ಈ ಎರಡೂ ದೇಶಗಳಿಂದ ಗೋಧಿಯನ್ನು ಆಮದು ಮಾಡಿಕೊಳ್ಳುವ ಪ್ರಮಾಣ ಅಲ್ಪವಾದರೂ, ಪರಿಣಾಮ ಇದ್ದೇ ಇರುತ್ತದೆ. ಭಾರತಕ್ಕೆ ಅಮೆರಿಕದಿಂದ ಹೆಚ್ಚು ಗೋಧಿ ಆಮದಾಗುತ್ತದೆ.

ಸ್ವಯಂಚಾಲಿತ ವ್ಯವಸ್ಥೆಗಳು ಮತ್ತು ಮೊಬೈಲ್ ಫೋನ್‌ಗಳಲ್ಲಿ ಬಳಸಲಾಗುವ ಪಲೇಡಿಯಂ ಲೋಹದ ಬೆಲೆ ಇತ್ತೀಚಿನ ವಾರಗಳಲ್ಲಿ ಹೆಚ್ಚಾಗಿದೆ. ರಷ್ಯಾದ ಮೇಲೆ ಅಮೆರಿಕ ನಿರ್ಬಂಧಗಳನ್ನು ವಿಧಿಸುತ್ತದೆ ಎಂಬ ವದಂತಿಯ ಹಿನ್ನೆಲೆಯಲ್ಲಿ ಈಗಾಗಲೇ ಬೆಲೆ ಏರಿಕೆಯಾಗಿದೆ. ರಷ್ಯಾವು ಪಲೇಡಿಯಂ ಲೋಹದ ವಿಶ್ವದ ಅತಿದೊಡ್ಡ ರಫ್ತುದಾರ ದೇಶವಾಗಿದೆ. ಯುದ್ಧದ ಕಾರಣಕ್ಕೆ ಪೂರೈಕೆ ತಗ್ಗುವುದರಿಂದ ಜಗತ್ತಿನಲ್ಲಿ ಲೋಹ ಬೆಲೆ ಇನ್ನಷ್ಟು ಏರಿಕೆ ಕಾಣಲಿದೆ. ತಾಮ್ರ ಹಾಗೂ ಅಲ್ಯುಮಿನಿಯಂ ಲೋಹಗಳ ಮೇಲೂ ಭಾರತ ಈ ಎರಡೂ ದೇಶಗಳನ್ನು ಆಶ್ರಯಿಸಿದ್ದು, ಇವುಗಳ ಬೆಲೆಯೂ ಏರಿಕೆ ಕಾಣಲಿದೆ.

ಔಷಧ ಉದ್ಯಮಕ್ಕೆ ಹೊಡೆತ?

ರಷ್ಯಾ ಹಾಗೂ ಉಕ್ರೇನ್ ನಡುವಿನ ಯುದ್ಧದಿಂದ ಭಾರತದ ಔಷಧ ಉದ್ಯಮದ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆಯಿದೆ. ಭಾರತದ ಔಷಧ ಕಂಪನಿಗಳು ಉಕ್ರೇನ್ ಹಾಗೂ ರಷ್ಯಾಗೆ ಹೆಚ್ಚಿನ ಪ್ರಮಾಣದ ಔಷಧವನ್ನು ರಫ್ತು ಮಾಡುತ್ತವೆ. ಭಾರತವು ಜರ್ಮನಿ ಹಾಗೂ ಫ್ರಾನ್ಸ್ ನಂತರ ಉಕ್ರೇನ್‌ಗೆ ಅಧಿಕ ಪ್ರಮಾಣದ ಔಷಧವನ್ನು ರಫ್ತು ಮಾಡುತ್ತದೆ.

ಭಾರತದಿಂದ ಔಷಧ ರಫ್ತು 2021-22 (ಡಿಸೆಂಬರ್‌ವರೆಗೆ)	
ಉಕ್ರೇನ್	₹812 ಕೋಟಿ
ರಷ್ಯಾ	₹2,867 ಕೋಟಿ

2021-22ರ ಅವಧಿಯಲ್ಲಿ (ಡಿಸೆಂಬರ್‌ವರೆಗೆ) ಭಾರತವು ₹812 ಕೋಟಿ ಮೌಲ್ಯದ ಔಷಧವನ್ನು ಉಕ್ರೇನ್‌ಗೆ ರಫ್ತು ಮಾಡಿದೆ. ಇದೇ ಅವಧಿಯಲ್ಲಿ ರಷ್ಯಾಗೆ ₹2,867 ಕೋಟಿ ಮೌಲ್ಯದ ಔಷಧಗಳನ್ನು ಮಾರಾಟ ಮಾಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ದತ್ತಾಂಶಗಳು ಮಾಹಿತಿ ನೀಡುತ್ತವೆ.

ಭಾರತದ ಹಲವು ಔಷಧ ಕಂಪನಿಗಳು ಉಕ್ರೇನ್ ಹಾಗೂ ರಷ್ಯಾದಲ್ಲಿ ನೆಲೆಯೂರಿವೆ. ಪ್ರಸ್ತುತ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದು ಉಕ್ರೇನ್‌ನಲ್ಲಿ ಪ್ರಮುಖ ಔಷಧ ಕಂಪನಿಯಾಗಿ ಬೆಳೆದಿರುವ ಡಾ. ರೆಡ್ಡೀಸ್ ಲ್ಯಾಬ್ ಪ್ರತಿಕ್ರಿಯಿಸಿದೆ. ರಷ್ಯಾ ಉತ್ಪಾದನೆ ಮಾಡುವ ಸ್ಪುಟ್ನಿಕ್ ಕೋವಿಡ್ ಲಸಿಕೆಯನ್ನು ಭಾರತದಲ್ಲಿ ಪೂರೈಸುವ ಗುತ್ತಿಗೆಯನ್ನು ಡಾ. ರೆಡ್ಡೀಸ್ ಲ್ಯಾಬ್ ಪಡೆದುಕೊಂಡಿತ್ತು.

ಭಾರತದ ಸನ್ ಫಾರ್ಮಾ ಕೂಡ ರಷ್ಯಾದಲ್ಲಿ ಭದ್ರವಾಗಿ ನೆಲೆಯೂರಿದೆ. ರ್‍ಯಾನ್‌ಬಾಕ್ಸಿ ಸಂಸ್ಥೆಯು ಸಹ 1993ರಿಂದ ರಷ್ಯಾದಲ್ಲಿ ನೆಲೆಯೂರಿದೆ. ಯುದ್ಧದಂತಹ ಸನ್ನಿವೇಶಗಳು ಔಷಧ ಉದ್ಯಮದ ಮೇಲೆ ನೇರ ಪರಿಣಾಮ ಬೀರದಿದ್ದರೂ ಪರೋಕ್ಷವಾಗಿ ಪೆಟ್ಟು ನೀಡುತ್ತವೆ ಎನ್ನುತ್ತಾರೆ ತಜ್ಞರು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ

ತೈಲ ರಫ್ತು ದೇಶಗಳ ಒಕ್ಕೂಟ (ಒಪೆಕ್) ಹೊರತುಪಡಿಸಿ, ವಿಶ್ವದಲ್ಲಿ ಹೆಚ್ಚು ಕಚ್ಚಾ ತೈಲ ಉತ್ಪಾದಿಸುವ ಎರಡನೇ ದೊಡ್ಡ ದೇಶ ರಷ್ಯಾ. ರಷ್ಯಾವನ್ನು ಒಪೆಕ್ ಪ್ಲಸ್ ದೇಶ ಎಂದು ಪರಿಗಣಿಸಲಾಗಿದೆ. ರಷ್ಯಾದಿಂದ ಬಿಕರಿಯಾಗುವ ಕಚ್ಚಾತೈಲವನ್ನು ಬ್ರೆಂಟ್ ಕಚ್ಚಾ ತೈಲ ಎಂದು ವರ್ಗೀಕರಿಸಲಾಗುತ್ತದೆ. ಒಪೆಕ್ ಮತ್ತು ಒಪೆಕ್ ಪ್ಲಸ್ ದೇಶಗಳು ಕಚ್ಚಾತೈಲ ಉತ್ಪಾದನೆ ಕಡಿತ ಮಾಡಿರುವ ಕಾರಣ, ಪ್ರತಿ ಬ್ಯಾರಲ್‌ನ ಬೆಲೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿತ್ತು. ರಷ್ಯಾ ಈಗ ಯುದ್ಧ ಘೋಷಿಸಿದ ಬೆನ್ನಲ್ಲೇ ಪ್ರತಿ ಬ್ಯಾರಲ್ ಬ್ರೆಂಟ್ ಕಚ್ಚಾ ತೈಲದ ಬೆಲೆ 100 ಡಾಲರ್ ಗಡಿ ದಾಟಿದೆ. ಇದರ ನೇರ ಪರಿಣಾಮ ಭಾರತದ ಇಂಧನ ಬಳಕೆದಾರರ ಮೇಲೆ ಆಗಲಿದೆ. ಕಚ್ಚಾತೈಲದ ಬೆಲೆ ಏರಿಕೆಯಾದರೆ, ಪೆಟ್ರೋಲ್ ಮತ್ತು ಡೀಸೆಲ್‌ನ ಚಿಲ್ಲರೆ ಮಾರಾಟ ಬೆಲೆ ಏರಿಕೆಯಾಗಲಿದೆ. ಯುದ್ಧ ಮುಂದುವರಿದಂತೆ ಕಚ್ಚಾ ತೈಲದ ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಅತ್ಯಧಿಕವಾಗಿದೆ. ಹಾಗೇನಾದರೂ ಆದರೆ, ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮತ್ತಷ್ಟು ತುಟ್ಟಿಯಾಗಲಿದೆ. ಈಗಾಗಲೇ ಪ್ರತಿ ಲೀಟರ್ ಪೆಟ್ರೋಲ್ ಬೆಲೆ ₹100ರ ಗಡಿ ದಾಟಿದೆ. ಪ್ರತಿ ಲೀಟರ್ ಡೀಸೆಲ್ ಬೆಲೆ ₹90ರ ಆಸುಪಾಸಿನಲ್ಲಿದೆ. ಇವುಗಳ ಬೆಲೆ ಮತ್ತಷ್ಟು ಏರಿಕೆಯಾದರೆ, ಜನರ ತಿಂಗಳ ಖರ್ಚಿನಲ್ಲಿ ಏರಿಕೆ ಆಗುತ್ತದೆ.

ಮತ್ತೆ ಗಗನಮುಖಿಯಾಗಲಿದೆ ಸೂರ್ಯಕಾಂತಿ ಎಣ್ಣೆ ಬೆಲೆ!

ಉಕ್ರೇನ್ ಮೇಲೆ ರಷ್ಯಾ ಯುದ್ಧ ಘೋಷಿಸುತ್ತಿದ್ದಂತೆಯೇ ಅಡುಗೆ ಎಣ್ಣೆಗಳನ್ನು ಪೂರೈಸುವ ಅದಾನಿ ವಿಲ್ಮರ್ ಕಂಪನಿಯ ಷೇರುಗಳು ಶೇ 4ರಷ್ಟು ಕುಸಿತ ಕಂಡವು. ಯುದ್ಧ ಇನ್ನಷ್ಟು ದಿನ ಮುಂದುವರಿದರೆ ಉಕ್ರೇನ್ ಹಾಗೂ ರಷ್ಯಾದಿಂದ ಆಮದು ಮಾಡಿಕೊಳ್ಳುವ ಅಡುಗೆ ಎಣ್ಣೆ ಹಾಗೂ ಅದರ ಕಚ್ಚಾವಸ್ತುಗಳ ಬೆಲೆಯಲ್ಲಿ ಭಾರಿ ಏರಿಕೆಯಾಗಲಿದೆ ಎಂದು ತಜ್ಞರು ಹೇಳಿದ್ದಾರೆ.

ಭಾರತವು ಆಮದು ಮಾಡಿಕೊಳ್ಳುವ ಸೂರ್ಯಕಾಂತಿ ಎಣ್ಣೆಯ ಶೇ 70ರಷ್ಟನ್ನು ಉಕ್ರೇನ್ ಪೂರೈಸುತ್ತದೆ. ರಷ್ಯಾ ಶೇ 20ರಷ್ಟು ಪೂರೈಸುತ್ತದೆ. ಇವು ಯುದ್ಧದಲ್ಲಿ ತೊಡಗಿರುವ ಕಾರಣ, ಈ ಎರಡೂ ದೇಶಗಳಿಂದ ಭಾರತಕ್ಕೆ ಸರಬರಾಜಾಗುತ್ತಿರುವ ಶೇ 90ರಷ್ಟು ಸೂರ್ಯಕಾಂತಿ ಎಣ್ಣೆ ಪೂರೈಕೆ ನಿಂತು ಹೋಗುತ್ತದೆ. ಭಾರತದಲ್ಲಿ ಅಡುಗೆಗೆ ಹೆಚ್ಚಾಗಿ ಬಳಕೆಯಾಗುವುದು ತಾಳೆ ಎಣ್ಣೆ. ನಂತರದ ಸ್ಥಾನದಲ್ಲಿ ಸೂರ್ಯಕಾಂತಿ ಎಣ್ಣೆ ಇದೆ. ಸೂರ್ಯಕಾಂತಿ ಎಣ್ಣೆಯ ಆಮದು ನಿಂತುಹೋದರೆ, ಉಳಿದ ಅಡುಗೆ ಎಣ್ಣೆಗಳ ಬೆಲೆಯಲ್ಲಿ ದೊಡ್ಡ ಏರಿಕೆಯಾಗುವುದು ಖಚಿತ.

2021ರಲ್ಲಿ ತೀವ್ರಗತಿಯಲ್ಲಿ ಏರಿಕೆಯಾಗಿದ್ದ ಅಡುಗೆ ಎಣ್ಣೆಗಳ ಬೆಲೆಗಳು ಇಳಿದವು ಎಂದು ನಿಟ್ಟುಸಿರು ಬಿಡುವಾಗಲೇ, ಯುದ್ಧದ ಕಾರಣಕ್ಕೆ ಮತ್ತೆ ಬೆಲೆ ಏರಿಕೆಯ ಭೀತಿ ಎದುರಾಗಿದೆ. ಯುದ್ಧದ ಮುನ್ಸೂಚನೆ ಇದ್ದಿದ್ದರಿಂದ, ಫೆಬ್ರುವರಿ ತಿಂಗಳಲ್ಲಿ ಉಕ್ರೇನ್‌ನಿಂದ ಸೂರ್ಯಕಾಂತಿ ಎಣ್ಣೆ ಪೂರೈಕೆಯಾಗಿಲ್ಲ. ಇದು ಮುಂದಿನ ದಿನಗಳ ಪರಿಸ್ಥಿತಿ ಗಂಭೀರತೆಯನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಫೆಬ್ರುವರಿ–ಮಾರ್ಚ್ ಅವಧಿಯಲ್ಲಿ ಉಕ್ರೇನ್‌ನಿಂದ 15ರಿಂದ 20 ಲಕ್ಷ ಟನ್ ಸೂರ್ಯಕಾಂತಿ ಬೀಜಗಳು ಬರಬೇಕಿತ್ತು. ಯುದ್ಧ ಮೂರ್ನಾಲ್ಕು ವಾರ ಮುಂದುವರಿದರೂ ಭಾರತದ ಅಡುಗೆಎಣ್ಣೆ ಮಾರುಕಟ್ಟೆ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ ಎಂದು ತಜ್ಞರು ಹೇಳಿದ್ದಾರೆ.

ಸೂರ್ಯಕಾಂತಿ ಎಣ್ಣೆ ಆಮದು

ಒಟ್ಟು ₹14,270 ಕೋಟಿ 2021-22 (ಡಿಸೆಂಬರ್‌ವರೆಗೆ)



ಭಾರತವು 2021-22ರ ಅವಧಿಯಲ್ಲಿ ಒಟ್ಟು ₹14,270 ಕೋಟಿ ಮೌಲ್ಯದ ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಂಡಿದೆ. ಇದರಲ್ಲಿ ಉಕ್ರೇನ್ ಪಾಲು ₹10,041 ಕೋಟಿ. ರಷ್ಯಾದಿಂದ ₹1,976 ಕೋಟಿ ಮೌಲ್ಯದ ಎಣ್ಣೆ ಆಮದಾಗಿದೆ. ಉಕ್ರೇನ್, ರಷ್ಯಾ ಹೊರತುಪಡಿಸಿ ಉಳಿದ ಎಲ್ಲ ದೇಶಗಳಿಂದ ₹2,253 ಕೋಟಿ ಮೌಲ್ಯದ ಸೂರ್ಯಕಾಂತಿ ಎಣ್ಣೆಯನ್ನು ಭಾರತ ಖರೀದಿಸಿದೆ.

ಭದ್ರತೆಗೆ ತೊಡಕು

ರಷ್ಯಾ ಮತ್ತು ಉಕ್ರೇನ್ ಯುದ್ಧವು ಭಾರತದ ಭದ್ರತಾ ವ್ಯವಸ್ಥೆಯ ಮೇಲೆ ಭಾರಿ ಪರಿಣಾಮ ಬೀರುವ ಅಪಾಯಗಳಿವೆ. ಭಾರತವು ಈಗ ಉಕ್ರೇನ್ ಮತ್ತು ರಷ್ಯಾದಿಂದ ಹೊಸ ಸೇನಾ ಸಲಕರಣೆಗಳನ್ನು ಭಾರಿ ಪ್ರಮಾಣದಲ್ಲಿ ಖರೀದಿಸುತ್ತಿಲ್ಲ. ಆದರೆ, ಭಾರತೀಯ ಸೇನೆಯ ಮೂರೂ ಪಡೆಗಳಲ್ಲಿ ಈಗ ಬಳಕೆಯಲ್ಲಿರುವ ಹೆಲಿಕಾಪ್ಟರ್‌ಗಳು, ವಿಮಾನಗಳು, ಯುದ್ಧವಿಮಾನಗಳು, ಹಡಗುಗಳು, ಫಿರಂಗಿಗಳು, ರೈಫಲ್‌ಗಳು ಮತ್ತು ಸೇನಾ ವಾಹನಗಳ ಬಿಡಿಭಾಗಗಳು ಹಾಗೂ ಕೆಲವು ಮದ್ದುಗುಂಡುಗಳಿಗಾಗಿ ರಷ್ಯಾ ಮತ್ತು ಉಕ್ರೇನ್ ಅನ್ನು ಅವಲಂಬಿಸಿದೆ.

ಈ ಸಾಮಗ್ರಿಗಳನ್ನು ಭಾರತವು ಸೋವಿಯತ್ ರಷ್ಯಾ ಪತನಕ್ಕೂ ಮೊದಲು ಖರೀದಿಸಿತ್ತು. ಆಗ ಉಕ್ರೇನ್, ಸೋವಿಯತ್ ರಷ್ಯಾದ ಭಾಗವಾಗಿತ್ತು. ಭಾರತಕ್ಕೆ ರಷ್ಯಾ ಪೂರೈಸಿದ್ದ ಸೇನಾ ಸಾಮಗ್ರಿಗಳು ಉಕ್ರೇನ್‌ನಲ್ಲಿನ ಕೈಗಾರಿಕಾ ಪ್ರದೇಶಗಳಿಂದ ಪೂರೈಕೆಯಾಗಿತ್ತು. ಈಗಲೂ ಈ ಪೂರೈಕೆ ಜಾಲ ಅಸ್ತಿತ್ವದಲ್ಲಿ ಇದೆ. ರಷ್ಯಾದ ಸೇನಾ ವಾಹನಗಳು ಮತ್ತು ಯುದ್ಧನೌಕೆಗಳ ಎಂಜಿನ್‌ಗಳು ಹಾಗೂ ಜಲವಿದ್ಯುತ್ ಘಟಕಗಳ ಟರ್ಬೈನ್‌ಗಳನ್ನು ರಷ್ಯಾಗೆ ಉಕ್ರೇನ್ ಪೂರೈಸುತ್ತದೆ. ರಷ್ಯಾ ಅವುಗಳನ್ನು ಬಳಸಿಕೊಂಡು ಸೇನಾ ವಾಹನಗಳು ಮತ್ತು ಯುದ್ಧನೌಕೆಗಳನ್ನು ತಯಾರಿಸುತ್ತದೆ. ರಷ್ಯಾದಿಂದ ಭಾರತ ಖರೀದಿಸಿರುವ ರೈಫಲ್‌ಗಳು, ಫಿರಂಗಿಗಳು ಮತ್ತು ಕ್ಷಿಪಣಿಗಳಿಗೂ ಇದು ಅನ್ವಯವಾಗುತ್ತದೆ.

2021–22ನೇ ಸಾಲಿನ ಮೊದಲ ಮೂರು ತ್ರೈಮಾಸಿಕದಲ್ಲಿ ಭಾರತವು ರಷ್ಯಾದಿಂದ ₹210 ಕೋಟಿ ಮೌಲ್ಯದ ಯುದ್ಧವಿಮಾನ, ಹೆಲಿಕಾಪ್ಟರ್‌ಗಳ ಬಿಡಿಭಾಗಗಳನ್ನು ಖರೀದಿಸಿದೆ. ಹೀಗೆ ಖರೀದಿಸಿದ ಎಲ್ಲಾ ಬಿಡಿಭಾಗಗಳು ಇನ್ನೂ ಪೂರೈಕೆಯಾಗಿಲ್ಲ. ಈಗ ಯುದ್ಧ ಏರ್ಪಟ್ಟಿರುವ ಕಾರಣ, ಈ ಬಿಡಿಭಾಗಗಳು ಪೂರ್ಣ ಪ್ರಮಾಣದಲ್ಲಿ ತಕ್ಷಣವೇ ಪೂರೈಕೆಯಾಗುವ ಸಾಧ್ಯತೆ ಇಲ್ಲ. ಇದರಿಂದ ಭಾರತೀಯ ಸೇನೆಯ ಎಲ್ಲಾ ಯುದ್ಧವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳನ್ನು ಸುಸ್ಥಿತಿಯಲ್ಲಿ ಇರಿಸಿಕೊಳ್ಳಲು ಸಾಧ್ಯವಿಲ್ಲ. ಇದು ಸೇನೆಯ ಸಾಮರ್ಥ್ಯವನ್ನು ಕುಗ್ಗಿಸುತ್ತದೆ.

ಸೋವಿಯತ್ ರಷ್ಯಾದ ಎಕೆ 47 ಸರಣಿಯ ರೈಫಲ್‌ಗಳು ಭಾರತದಲ್ಲಿ ಬಳಕೆಯಲ್ಲಿವೆ. ಈ ರೈಫಲ್ ತಯಾರಿಕೆಯಲ್ಲಿ ಬಳಸುವ ಹಲವು ಬಿಡಿಭಾಗಗಳು, ಈ ರೈಫಲ್‌ನಲ್ಲಿ ಬಳಸುವ ಗುಂಡುಗಳ ತಯಾರಿಕೆಯಲ್ಲಿನ ಕಚ್ಚಾ ವಸ್ತುಗಳನ್ನು ಉಕ್ರೇನ್ ಪೂರೈಸಬೇಕು. ಈ ರೈಫಲ್‌ಗಳ ನಿರ್ವಹಣೆ ಮತ್ತು ಮೇಲ್ದರ್ಜೆಗೆ ಏರಿಸುವ ಒಪ್ಪಂದಕ್ಕೆ 2021ರ ಫೆಬ್ರುವರಿಯಲ್ಲಿ ಭಾರತ ಮತ್ತು ಉಕ್ರೇನ್ ಸಹಿ ಹಾಕಿವೆ. ನಿರ್ವಹಣೆ ಮತ್ತು ಮೇಲ್ದರ್ಜೆಗೆ ಏರಿಸುವ ಕಾರ್ಯ ಇನ್ನೂ ಪೂರ್ಣವಾಗಿಲ್ಲ. ಈಗ ಯುದ್ಧದ ಕಾರಣ ಈ ಯೋಜನೆ ತೀರಾ ವಿಳಂಬವಾಗುವ ಅಪಾಯ ಎದುರಿಸುತ್ತಿದೆ.

ಭಾರತವು ರಷ್ಯಾದಿಂದ ₹40,000 ಕೋಟಿ ವೆಚ್ಚದಲ್ಲಿ ಎಸ್‌–400 ಟ್ರಯಂಪ್ ಕ್ಷಿಪಣಿ ನಿರೋಧಕ ವ್ಯವಸ್ಥೆಯನ್ನು ಖರೀದಿಸಲು 2015ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಈ ವ್ಯವಸ್ಥೆ ಇನ್ನೂ ಪೂರ್ಣ ಪ್ರಮಾಣದಲ್ಲಿ ಪೂರೈಕೆಯಾಗಿಲ್ಲ. ರಷ್ಯಾ ಮೇಲಿನ ಅಮೆರಿಕದ ಆರ್ಥಿಕ ನಿರ್ಬಂಧದ ಕಾರಣ, ಪೂರೈಕೆ ಈಗಾಗಲೇ ವಿಳಂಬವಾಗಿದೆ. ಈಗ ಯುದ್ಧದ ಕಾರಣದಿಂದ ಪೂರೈಕೆ ಮತ್ತಷ್ಟು ವಿಳಂಬವಾಗುವ ಅಪಾಯವಿದೆ. ಇದರ ಜತೆಯಲ್ಲಿಯೇ ಅಮೆರಿಕವು ಮತ್ತಷ್ಟು ನಿರ್ಬಂಧಗಳನ್ನು ಹೇರುವ ಸಾಧ್ಯತೆ ಇದೆ. ಹಾಗೇನಾದರೂ ಆದರೆ, ಈ ಒಪ್ಪಂದವನ್ನೇ ರದ್ದುಪಡಿಸಬೇಕಾದ ಅನಿವಾರ್ಯ ಎದುರಾಗಬಹುದು.

ಭಾರತವು ಈಚೆಗಷ್ಟೇ ₹18,699 ಕೋಟಿ ವೆಚ್ಚದಲ್ಲಿ ರಷ್ಯಾದಿಂದ ಯುದ್ಧನೌಕೆಗಳ ಖರೀದಿಗೆ ಒಪ್ಪಂದ ಮಾಡಿಕೊಂಡಿದೆ. ಈ ಯುದ್ಧನೌಕೆಗಳಿಗೆ ಅಗತ್ಯವಿರುವ ಎಂಜಿನ್‌ಗಳನ್ನು ಉಕ್ರೇನ್ ಪೂರೈಸಿದೆ. ಇನ್ನೂ ಹಲವು ಎಂಜಿನ್‌ಗಳು ಪೂರೈಕೆಯಾಗಬೇಕಿವೆ. ಈಗ ಯುದ್ಧದ ಕಾರಣ ಈ ನೌಕೆಗಳ ಪೂರೈಕೆ ವಿಳಂಬವಾಗುವ ಅಪಾಯವಿದೆ. ಈ ಎಲ್ಲಾ ಕಾರಣಗಳಿಂದ ಭಾರತವು ದಕ್ಷಿಣ–ಚೀನಾ ಸಮುದ್ರ, ಹಿಂದೂಮಹಾಸಾಗರ–ಪೆಸಿಫಿಕ್ ಸಾಗರ ಪ್ರದೇಶದಲ್ಲಿ ತನ್ನ ರಕ್ಷಣಾ ನೀತಿಯನ್ನು ಬದಲಾಯಿಸಬೇಕಾದ ಸ್ಥಿತಿ ಎದುರಾಗಬಹುದು.

ಆಧಾರ: ಪಿಟಿಐ, ಎಎಫ್‌ಪಿ, ವಾಣಿಜ್ಯ ಸಚಿವಾಲಯದ ಆಮದು – ರಫ್ತು ದತ್ತಾಂಶ ವರದಿಗಳು

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 54

ಶಿವಲಿಂಗಗಳ ಪೂಜಾ ವಿಧಾನ

ಸೂತಮುನಿಯು ಈಗ ಶಿವನನ್ನು ಪೂಜಿಸುವ ವಿಧಾನವನ್ನು ತಿಳಿಸುತ್ತಾನೆ. ಓಂಕಾರವೆಂದು ಪ್ರಸಿದ್ಧವಾಗಿರುವ ಪ್ರಣವ ಮೊದಲ ನೆಯ ಲಿಂಗ. ಅದು ಸಕಲ ಇಷ್ಟಾರ್ಥಗಳನ್ನು ಉಂಟುಮಾಡುವುದು. ಸೂಕ್ಷ್ಮ ಪ್ರಣವರೂಪವಾದುದು ಸೂಕ್ಷ್ಮಲಿಂಗ. ಇದು ನಿರಾಕಾರವಾದುದು; ಸಾಕಾರವಾದುದು ಸ್ಥೂಲಲಿಂಗ. ಸೂಕ್ಷ್ಮಲಿಂಗ ಮತ್ತು ಸ್ಥೂಲಲಿಂಗಗಳನ್ನು ಪೂಜಿಸುವುದು ಅಥವಾ ಜಪಿಸುವುದೇ ತಪಸ್ಸು. ಅವುಗಳೆರಡೂ ಸಾಕ್ಷಾತ್ತಾಗಿ ಮುಕ್ತಿಯನ್ನುಂಟುಮಾಡುವುದು. ಪ್ರಯತ್ನದಿಂದ ನಿರ್ಮಿಸುವಂತಹ ಅನೇಕ ಲಿಂಗಗಳಿವೆ. ಅವುಗಳನ್ನು ವಿಸ್ತಾರವಾಗಿ ಹೇಳಲು ಶಿವನೊಬ್ಬನೇ ಸಮರ್ಥ, ಇನ್ನಾರಿಗೂ ಆ ಶಕ್ತಿಯಿಲ್ಲ ಎಂದು ಸೂತಮುನಿ ಪಂಚಲಿಂಗಗಳ ವಿವರ ನೀಡುತ್ತಾನೆ.

ಸ್ವಯಂಭೂಲಿಂಗವು ಮೊದಲನೆಯದು; ಬಿಂದುಲಿಂಗ ಎರಡನೆಯದು; ಪ್ರತಿಷ್ಠಿತಲಿಂಗ ಮೂರನೆಯದು; ನಾಲ್ಕನೆಯದು ಚರಲಿಂಗ; ಐದನೆಯದು ಗುರುಲಿಂಗ. ನಾದರೂಪದಿಂದ ಭೂಮಿಯನ್ನು ಒಡೆದು ತಾನಾಗಿಯೇ ಲಿಂಗರೂಪವಾಗಿ ಉದ್ಭವಿಸಿದರೆ ಆ ಲಿಂಗಕ್ಕೆ 'ಸ್ವಯಂಭೂಲಿಂಗ' ಎಂದು ಹೆಸರು. ಆ ಸ್ವಯಂಭೂ ಉದ್ಭವಲಿಂಗವನ್ನು ಪೂಜಿಸಿದರೆ ಜ್ಞಾನವು ತಾನಾಗೇ ಅಭಿವೃದ್ಧಿಯಾಗುವುದು.

ಚಿನ್ನ-ಬೆಳ್ಳಿ ಮುಂತಾದವುಗಳಲ್ಲಿ ಶುದ್ಧವಾಗಿ ಓಂಕಾರದೊಡನೆ ಲಿಂಗವನ್ನು ಬರೆದು, ಅದರ ಮೇಲೆ ಲಿಂಗಪ್ರತಿಷ್ಠೆ ಮತ್ತು ಆವಾಹನಾದಿಗಳನ್ನು ಮಾಡಿದ ಲಿಂಗಕ್ಕೆ 'ಬಿಂದುಲಿಂಗ' ಎಂದು ಹೆಸರು. ಚಲಿಸದಿರುವ ಪರ್ವತಾದಿಗಳು ಬಿಂದುಲಿಂಗಗಳು; ಚಲಿಸುವ ಪ್ರಾಣಿ ಮೊದಲಾದವು ನಾದಲಿಂಗಗಳು. ಈ ಚರಾಚರವಸ್ತುಗಳೆಲ್ಲವೂ ಶಿವಸ್ವರೂಪಗಳೆಂದು ತಿಳಿಯಬೇಕು. ಕೈನಿಂದ ಬರೆದಂತಹ ಯಂತ್ರ ಸ್ಥಿರಲಿಂಗ. ಇದರಲ್ಲಿ ಶಿವನನ್ನು ಆವಾಹನೆ ಮಾಡಿ ಷೋಡಶೋಪಚಾರಗಳಿಂದ ಪೂಜಿಸಬೇಕು. ಆತ್ಮಸ್ವರೂಪಸಿದ್ಧಿಗಾಗಿ ಶುದ್ಧವಾದ ಮಂಡಲದಲ್ಲಿ ಮಂತ್ರಪೂರ್ವಕವಾಗಿ ಸ್ವಹಸ್ತದಿಂದ ಪ್ರತಿಷ್ಠಿಸಿದ ಲಿಂಗಕ್ಕೆ 'ಪೌರುಷಲಿಂಗ' ಅಥವಾ 'ಪ್ರತಿಷ್ಠಿತಲಿಂಗ' ಎಂದು ಹೆಸರು. ಐಶ್ವರ್ಯವಂತರಾದವರು ಶಿಲ್ಪಿಯ ಸಹಾಯದಿಂದ ನಿರ್ಮಿಸಿ ಸ್ಥಾಪಿಸಲ್ಪಟ್ಟ ಲಿಂಗವೆ ಪ್ರಾಕೃತಲಿಂಗ. ಅದು ಪ್ರಕೃತಿಯ ಸಂಬಂಧವಾದ ಲಿಂಗ.

ಬಹಳ ಕಾಲವಿರುವಂಥದ್ದು ಪೌರುಷಲಿಂಗ; ವಿರಳ ಕಾಲವಿರುವಂಥದ್ದು ಪ್ರಾಕೃತಲಿಂಗ. ಶರೀರದಲ್ಲಿ ನಾಭಿ, ಜಿಹ್ವಾ, ಮೂಗಿನ ಕೊನೆ, ಮುಖ, ಸೊಂಟ, ಲಲಾಟಸ್ಥಾನ, ಶಿರಸ್ಸುಗಳೆಲ್ಲವೂ ಆಧ್ಯಾತ್ಮಿಕವಾದ ಚರಲಿಂಗಗಳು. ಪರ್ವತವು ಪೌರುಷಲಿಂಗವಾದರೆ, ಭೂಮಿಯು ಪ್ರಾಕೃತಲಿಂಗ. ಅಂದರೆ, ಮರ ಪೌರುಷ ಲಿಂಗವಾದರೆ, ಅಲ್ಲಿ ಚಿಗುರುವ ಎಲೆಗಳು, ಹೂಗಳು ಪ್ರಾಕೃತಲಿಂಗವಾಗುತ್ತೆ. ಅಕ್ಕಿಹಿಟ್ಟು ಮುಂತಾದ ಧಾನ್ಯಗಳಿಂದ ಮಾಡಿದ ಲಿಂಗ ಪ್ರಾಕೃತಲಿಂಗ; ನವಣೆ–ಗೋದಿಗಳಿಂದ ಮಾಡಿದ ಲಿಂಗ ಪೌರುಷಲಿಂಗ. ಚರಲಿಂಗಗಳಲ್ಲಿ ರಸಲಿಂಗವು ಮೊದಲನೆಯದು ಮತ್ತು ಪ್ರಶಸ್ತವಾದುದು. ಬಾಣರೂಪವಾಗಿರುವ ಲಿಂಗವು ಕ್ಷತ್ರಿಯರಿಗೆ ಮಹಾರಾಜ್ಯವನ್ನುಂಟು ಮಾಡು ವುದು. ಚಿನ್ನದಿಂದ ನಿರ್ಮಿಸಿದ ಲಿಂಗವು ಹೆಚ್ಚಾದ ಐಶ್ವರ್ಯವನ್ನುಂಟು ಮಾಡು ವುದು. ಶಿಲೆಯ ಲಿಂಗವು ಶುದ್ಧಿಯನ್ನುಂಟು ಮಾಡುವುದು. ಸ್ಫಟಿಕಮಯವಾದ ಬಾಣಲಿಂಗವು ಎಲ್ಲರಿಗೂ ಶುಭವಾದುದು. ಸ್ತ್ರೀಯರಿಗೆ ಪಾರ್ಥಿವ (ಪೃಥ್ವಿ ಯಲ್ಲಿ ಸಿಗುವ ಶಿಲೆ, ಮಣ್ಣು ಮುಂತಾ ದುವು) ಲಿಂಗವು ಶುಭವಾದುದು. ವಿರಕ್ತರಲ್ಲದವರಿಗೆ ಸ್ಫಟಿಕ ಲಿಂಗವು ಶುಭವಾದುದು. ವಿರಕ್ತರಾದವರಿಗೆ ರಸಲಿಂಗವು ಶುಭವಾದುದು. ಗೃಹಸ್ಥನು ಪಾತ್ರೆಗಳಿಂದಲೇ ಪೂಜೆ ಮಾಡಬೇಕು. ಪೂಜೆಯ ಕೊನೆಯಲ್ಲಿ ಲಿಂಗವನ್ನು ಮನೆಯಲ್ಲಿ ಬೇರೆಯಾದ ಸಂಪುಟಗಳಲ್ಲಿ ಸ್ಥಾಪಿಸಬೇಕು.

ಸನ್ಯಾಸಿಗಳಿಗೆ ಸೂಕ್ಷ್ಮಲಿಂಗವೇ ಶುಭವಾದುದು. ವಿರಕ್ತರಾದ ಸನ್ಯಾಸಿಗಳು ಕೈಗಳಿಂದಲೇ ಪೂಜಿಸಬೇಕು, ತಾವು ತಿನ್ನುವ ಆಹಾರವನ್ನು ದೇವನಿಗೆ ನಿವೇದಿಸಬೇಕು. ವಿಭೂತಿಯನ್ನು ನಿವೇದಿಸಿ, ಪೂಜೆಯಾದ ನಂತರ ಆ ಲಿಂಗವನ್ನು ಶಿರಸ್ಸಿನಲ್ಲಿ ಧರಿಸಬೇಕು. ಲೋಕಾಗ್ನಿ, ವೇದಾಗ್ನಿ ಮತ್ತು ಶಿವಾಗ್ನಿಗಳೆಂದು ಮೂರು ವಿಧದ ವಿಭೂತಿಗಳಿವೆ. ಲೋಕಾಗ್ನಿಯಿಂದ ಆದಂತಹ ವಿಭೂತಿಯನ್ನು ದ್ರವ್ಯಶುದ್ಧಿಗಾಗಿ ಸ್ವೀಕರಿಸಬೇಕು.

ಮಣ್ಣು, ಲೋಹ, ಮರಗಳಿಂದ ಮಾಡಿದ ಪಾತ್ರೆಗಳು. ತಿಲ ಮುಂತಾದ ಧಾನ್ಯಗಳು. ವಸ್ತ್ರ ಮುಂತಾದ ದ್ರವ್ಯಗಳು ಮತ್ತು ತಂಗಳು ಪದಾರ್ಥಗಳೆಲ್ಲವೂ ಭಸ್ಮದಿಂದ ಶುದ್ಧಿಯಾಗುವುವು. ನಾಯಿ ಮುಂತಾದುವುಗಳ ಸ್ಪರ್ಶದಿಂದ ಅಪವಿತ್ರ ವಾದ ವಸ್ತುಗಳೂ ಭಸ್ಮದಿಂದ ಶುದ್ಧಿಯಾಗುವುವು. ನೀರಿನಿಂದ ಕಲಸಿಯಾಗಲೀ ಕಲಸದೆಯಾಗಲೀ ಭಸ್ಮವನ್ನು ಯೋಗ್ಯರೀತಿಯಲ್ಲಿ ಧರಿಸಬೇಕು. ಯಾಗ ಮುಂತಾದ ವೈದಿಕಕರ್ಮಗಳಲ್ಲಿನ ಅಗ್ನಿಯಿಂದಾದ ಭಸ್ಮವನ್ನು ಆ ಕರ್ಮಗಳು ಮುಗಿದ ನಂತರ ಧರಿಸ ಬೇಕು. ಹೋಮಾದಿಕರ್ಮಗಳಲ್ಲಿ ಅಗ್ನಿಯಿಂದಾಗುವ ಭಸ್ಮವು ವೇದಾಗ್ನಿ ಭಸ್ಮವೆನಿಸುವುದು. ಆ ಭಸ್ಮವನ್ನು ಧರಿಸಿದರೆ ನಾವು ಮಾಡಿದ ವೈದಿಕ ಕರ್ಮವು ನಮ್ಮಲ್ಲಿ ಆರೋಪಿಸಲ್ಪಡುವುದು ಎಂದು ಸೂತಮುನಿ ತಿಳಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಭದ್ರತಾ ಸಿಬ್ಬಂದಿ ಮುಸ್ಲಿಂ ಗಂಡಸರನ್ನು ಥಳಿಸುತ್ತಿರುವ ವಿಡಿಯೊ ವೈರಲ್ ಆಗಿದೆ. 15 ಸೆಕೆಂಡ್‌ಗಳ ಈ ವಿಡಿಯೊವನ್ನು ಹಲವರು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದಾರೆ. ರಾಜಸ್ಥಾನದ ಅಜ್ಮೀರ್‌ನಲ್ಲಿ ಪಾಕಿಸ್ತಾನದ ಪರವಾಗಿ ಗೂಢಚರ್ಯೆಯಲ್ಲಿ ತೊಡಗಿದ್ದ ಮೊಹಮ್ಮದ್ ಯೂನಸ್, ಅಹ್ಮದ್ ಮೌಲಾನಾ ಮತ್ತು ಸದ್ದಾಮ್ ಅವರನ್ನು ಸೇನಾ ಸಿಬ್ಬಂದಿ ಥಳಿಸುತ್ತಿದ್ದಾರೆ ಎಂದು ಈ ವಿಡಿಯೊಗೆ ಅಡಿಬರಹ ನೀಡಲಾಗಿದೆ.

2020ರ ಏಪ್ರಿಲ್‌ನಲ್ಲಿ ಮಧ್ಯಪ್ರದೇಶದ ರತ್ಲಾಮ್‌ನಲ್ಲಿ ನಡೆದ ಘಟನೆಯ ವಿಡಿಯೊ ತುಣುಕು ಇದು ಎಂದು 'ಇಂಡಿಯಾ ಟುಡೆ' ವರದಿ ಮಾಡಿದೆ. ಕೋವಿಡ್ ಸಾಂಕ್ರಾಮಿಕ ತಡೆಗಟ್ಟುವ ದಿಸೆಯಲ್ಲಿ ದೇಶವ್ಯಾಪಿ ಲಾಕ್‌ಡೌನ್ ಹೇರಿದ್ದ ಸಂರ್ಭದಲ್ಲಿ ಲಾಕ್‌ಡೌನ್ ನಿಯಮಗಳನ್ನು ಉಲ್ಲಂಘಿಸಿ ಸ್ಥಳೀಯ ಮಸೀದಿಗೆ ಹೋಗಿದ್ದವರ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿದ್ದರು. ಈ ವಿಡಿಯೊ ಮತ್ತು ಅದಕ್ಕೆ ಸಂಬಂಧಿಸಿದ ಸುದ್ದಿಯು ಅದೇ ದಿನ ಹಲವಾರು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಸುದ್ದಿ ವಾಹಿನಿಗಳಲ್ಲೂ ಪ್ರಸಾರವಾಗಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ವಿಸ್ತಾರದ ಬದುಕು

ಪುರುಷಯೋಚನೆಯೆಲ್ಲ ಮುರಿದುಮಣ್ಣಹುದೆಂದು |
ಕೊರಗದಿರು; ಕೆಟ್ಟೆನೆಂದೆಂದುಮೆನ್ನದಿರು ||
ಶರಧಿಯೊಳು ನೀನೊಂದು ಪುಟ್ಟಲೇ ಸಾಯಲೇಂ? |
ಪರವೆಯೇನಿಲ್ಲವೆಲೊ – ಮಂಕುತಿಮ್ಮ || 572 ||

ಪದ-ಅರ್ಥ: ಕೆಟ್ಟೆನೆಂದೆಂದುಮೆನ್ನದಿರು = ಕೆಟ್ಟೆನೆಂದು + ಎಂದೆಂದೂ + ಎನ್ನದಿರು, ಶರಧಿ = ಸಮುದ್ರ, ಪುಟ್ಟಲೇ = ಹುಟ್ಟಿದರೇನು, ಸಾಯಲೇಂ = ಸತ್ತರೇನು, ಪರವೆಯೇನಿಲ್ಲವೆಲೊ = ಪರವೆ(ಚಿಂತೆ, ಕಾಳಜಿ) + ಏನಿಲ್ಲ + ಎಲೊ.

ವಾಚ್ಯಾರ್ಥ: ಪುರುಷ ಯೋಚನೆಗಳೆಲ್ಲ ಸಾಕಾರವಾಗದೆ ಮುರಿದು ಮಣ್ಣಾಗುತ್ತವೆ ಎಂದು ಕೊರಗಬೇಡ, ಕೆಟ್ಟೆನೆಂದು ಎಂದುಕೊಳ್ಳಬೇಡ. ಸಮುದ್ರದಲ್ಲಿ ಒಂದು ಮೀನು ಹುಟ್ಟಿದರೆ, ಸತ್ತರೆ ಸಮುದ್ರಕ್ಕೆ ಯಾವ ಪರಿವೆಯೂ ಇಲ್ಲ.

ವಿವರಣೆ: ಇದೊಂದು ಅದ್ಭುತವಾದ ಚೌಪದಿ. ಇದನ್ನು ಎರಡು ಬಗೆಗಳಲ್ಲಿ ಕಾಣಬಹುದು. ಮನುಷ್ಯರು ಮಾಡಿದ ಯೋಜನೆಗಳು, ಕನಸುಗಳು ಎಲ್ಲವೂ ಸಾಕಾರವಾಗುತ್ತವೆಂದು ಹೇಳುವುದು ಸಾಧ್ಯವಿಲ್ಲ. ಅಲೆಗ್ಸಾಂಡರ್ ಪ್ರಪಂಚವನ್ನೇ ಗೆಲ್ಲುವ ಮಹದಾಸೆ ಹೊಂದಿದ್ದ. ಹಿಟ್ಲರ್ ಜಗತ್ತಿನಲ್ಲಿದ್ದ ಎಲ್ಲ ಯಹೂದ್ಯರನ್ನು ಕೊಲ್ಲುವ ಯೋಜನೆ ಹಾಕಿದ್ದ. ಭಾರತ ಒಂದೇ ರಾಷ್ಟ್ರವಾಗಿ ಉಳಿಯಬೇಕೆಂದು ಮಹಾತ್ಮಾಗಾಂಧಿ ಕನಸು ಕಂಡಿದ್ದರು. ಅವರೆಲ್ಲರ ಚಿಂತನೆಗಳು ಕೈಗೂಡಲಿಲ್ಲ. ಆದರೆ ಏನೂ ನಡೆದಿಲ್ಲವೆನ್ನುವಂತೆ ಪ್ರಪಂಚ ಮುನ್ನಡೆದಿದೆ. ಯಾವ ಮಹಾನ್ ಘಟನೆಯ ಆಗುವಿಕೆ ಅಥವಾ ಆಗದೆ ಉಳಿಯುವಿಕೆ ಪ್ರಪಂಚದ ಅಸ್ತಿತ್ವಕ್ಕೆ ಕೊಂಚವೂ ವ್ಯತ್ಯಾಸವನ್ನು ತರಲಿಲ್ಲ. ಆ ವಿಷಯವನ್ನು ಕಗ್ಗ ಹೇಳುತ್ತದೆ. ಅಪಾರವಾದ ಜಲರಾಶಿಯ ಅನಂತವಾದ ಸಮುದ್ರದಲ್ಲಿ ಅದೆಷ್ಟು ತರಹದ ಜೀವರಾಶಿಗಳು! ದೊಡ್ಡ ರಾಕ್ಷಸಾಕಾರದ ತಿಮಿಂಗಲಗಳು, ಲಕ್ಷಾಂತರ ಬಗೆಯ ಚಿಕ್ಕದೊಡ್ಡ ಮೀನುಗಳು ಇವೆ. ಇಂಥ ಸಮುದ್ರದಲ್ಲಿ ಒಂದು ಪುಟ್ಟ ಮೀನು ಹುಟ್ಟಿದರೆ ಅಥವಾ ಸತ್ತು ಹೋದರೆ ಸಮುದ್ರಕ್ಕೆ ಏನಾದರೂ ವ್ಯತ್ಯಾಸವಾಗುತ್ತದೆಯೆ? ಸಮುದ್ರಕ್ಕೆ ಈ ಮೀನು ತನ್ನಲ್ಲಿ ಬದುಕಿತ್ತು ಎಂಬ ವಿಷಯವೂ ತಿಳಿದಿರಲಾರದು. ಅಷ್ಟು ಅಲ್ಪವಾದದ್ದು ಮೀನಿನ ಅಸ್ತಿತ್ವ. ಆ ಮೀನಿಗೆ ಬದುಕು ಸೃಷ್ಟಿಯಾಗಿರಬಹುದು ಅಥವಾ ಮುಗಿದಿರಬಹುದು. ಆದರೆ ಸಮುದ್ರಕ್ಕೆ ಅದಕ್ಕೆ ಮೀನಿನ ಪರಿವೆಯೇ ಇಲ್ಲ. ಆದ್ದರಿಂದ ನಮ್ಮ ವೈಫಲ್ಯಗಳ ಬಗ್ಗೆ ಕೊರಗಿ, ಕೆಟ್ಟೆ ಎನ್ನವುದು ಬೇಡ. ಯಾಕೆಂದರೆ ಈ ಬೃಹತ್ ಪ್ರಪಂಚಕ್ಕೆ ಇಂಥದೊಂದು ಪ್ರಯತ್ನವಾಗಿತ್ತೆಂಬುದೂ ತಿಳಿದಿಲ್ಲ. ಇದು ಒಂದು ದೃಷ್ಟಿ.

ನನಗೆ ಇನ್ನೊಂದು ದೃಷ್ಟಿ ಮುಖ್ಯವಾದದ್ದು ಎನ್ನಿಸುತ್ತದೆ. ಸಮುದ್ರದಂತೆ ಮನುಷ್ಯನೊಬ್ಬನ ಬದುಕೂ ದೀರ್ಘವಾದದ್ದು. ಅರವತ್ತು, ಎಪ್ಪತ್ತು ಅಥವಾ ಎಂಭತ್ತು ವರ್ಷಗಳನ್ನು ಬದುಕಿದ ಮನುಷ್ಯನ ಜೀವಿತಾವಧಿಯಲ್ಲಿ ಆತ ಅನೇಕ ಕನಸುಗಳನ್ನು ಕಾಣುತ್ತಾನೆ, ಹೊಸ ಸಾಹಸಗಳನ್ನು ಮಾಡುತ್ತಾನೆ. ಎಲ್ಲವೂ ಕೈಗೂಡುತ್ತವೆ ಎಂದಲ್ಲ. ಯಾವುದೋ ಒಂದು ಪ್ರಯತ್ನ ಸಾಧಿತವಾಗಲಿಲ್ಲ ಎಂದು ಕೊರಗಿ ಪ್ರಯೋಜನವಿಲ್ಲ. ಜೀವನದ ಪ್ರತಿಯೊಂದು ಪ್ರಯತ್ನ ದೊಡ್ಡ ವರ್ಣಚಿತ್ರದಲ್ಲಿನ ಒಂದು ಪುಟ್ಟ ಚುಕ್ಕೆ ಇದ್ದಂತೆ. ಅದನ್ನೇ ನೆನೆಸಿಕೊಂಡು ಕೊರಗುತ್ತ ಕುಳಿತರೆ ಆ ಚುಕ್ಕೆಯನ್ನು ವರ್ಣಚಿತ್ರದ ತುಂಬೆಲ್ಲ ಬರೆದಂತೆ. ಆಗ ಚಿತ್ರ ಹಾಳಾಗುತ್ತದೆ. ನಾವು ಒಂದು ಪ್ರಯತ್ನದಲ್ಲಿ ವಿಫಲರಾಗಿರಬಹುದು ಆದರೆ ಬದುಕಿನಲ್ಲಲ್ಲ. ಬದುಕೊಂದು ಸಮುದ್ರ. ಪ್ರತಿಯೊಂದು ಪ್ರಯತ್ನ ಒಂದು ಮೀನು ಇದ್ದಂತೆ. ಅದರಿಂದಾಗಿ ಜೀವನದ ಗತಿ ಕೆಡಬಾರದು. ಕೆಲವರು ಯಾವುದೊ ಪ್ರಯತ್ನ ವಿಫಲವಾಯಿತೆಂದು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಕಂಡಾಗ ಬಹಳ ದುಃಖವಾಗುತ್ತದೆ. ಅವರು ಮೀನನ್ನೇ ಸಮುದ್ರವೆಂದು ಭಾವಿಸಿದವರು. ಒಂದು ಮೀನಿನಿಂದ ಸಮುದ್ರ ಗಂಭೀರ ವಿಸ್ತಾರ ಕೆಡದಂತೆ, ಒಂದು ಘಟನೆ, ಪ್ರಯತ್ನ ಜೀವನದ ಸೊಗಡನ್ನು ಕೆಡಿಸಬಾರದು. ❖

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಫೆಬ್ರುವರಿ 25, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಕುಂಭ ಮಾಸದ 13 ನೇ ದಿನ ತಿಥಿ: (ಮಾಘ ಕೃಷ್ಣ) ನವಮಿ ಗಂ. 12-58 ನಕ್ಷತ್ರ: ಜ್ಯೇಷ್ಠ ಗಂ. 12-07 ಯೋಗ: ವಜ್ರ ಗಂ. 23-59, ಕರಣ: ಗರಜೆ ಗಂ. 12-58.
ರಾಹುಕಾಲ : ಮಧ್ಯಾಹ್ನ 10:30 – 12:00 ಸೂರ್ಯೋದಯ : 06-52 ಸೂರ್ಯಾಸ್ತ : 06-35 ಮುಸ್ಲಿಂ ದಿನಾಂಕ : 23 ರಜಬ್ ಅದೃಷ್ಟ ಸಂಖ್ಯೆ: 1, 9

ಮೇಷ: ನಿಮ್ಮ ವ್ಯಾಪಾರದ ಚತುರತೆಯಿಂದ ಧನುಲಾಭ. ಮನೆಯಲ್ಲಿ ನಡೆಯಬೇಕಿರುವ ಶುಭಕಾರ್ಯಕ್ಕೆ ಬಂಧುಗಳ ಆಗಮನವು ಸಂತೋಷವನ್ನು ಸೃಷ್ಟಿಸಲಿದೆ. ಪರರಿಗೆ ವಂಚಿಸುವುದು ನಿಮ್ಮ ಅಭಿವೃದ್ಧಿಗೆ ಅಡ್ಡಿಮಾಡುತ್ತದೆ.

ವೃಷಭ: ನೌಕರಿಯಲ್ಲಿ ನಿಮ್ಮ ಅಭಿಪ್ರಾಯಕ್ಕೆ ಸಹೋದ್ಯೋಗಿಗಳ ಸಂಪೂರ್ಣ ಬೆಂಬಲ ಸಿಗುವುದು. ಚಿನ್ನ-ಬೆಳ್ಳಿ ವ್ಯಾಪಾರಿಗಳಿಗೆ ಕಣ್ತಪ್ಪಿನಿಂದ ದ್ರವ್ಯ ನಷ್ಟ ಸಂಭವ. ವಾದ ವಿವಾದಗಳಿಂದ ದೂರ ಉಳಿಯುವ ಪ್ರಯತ್ನ ಮಾಡಿ.

ಮಿಥುನ: ಸಂಬಂಧಿಗಳ ಅಥವಾ ಅತೀ ಆತ್ಮೀಯರ ಬಳಿಯಲ್ಲಿ ವ್ಯವಹಾರ ನಡೆಸಬೇಡಿ. ಅತಿ ಆತ್ಮವಿಶ್ವಾಸವು ಸೋಲಿಗೆ ಕಾರಣವಾಗುವುದು. ಮನೆಯ ದೈನಂದಿನ ಮತ್ತು ವಿಶೇಷವಾದ ವಿಷಯಗಳನ್ನು ತಂದೆಯೊಡನೆ ಚರ್ಚಿಸಿ.

ಕರ್ಕಾಟಕ: ಅನೇಕ ಅಚ್ಚರಿಯ ಸಂಗತಿಯನ್ನು ಎದುರಿಸುವ ಸಾಮರ್ಥ್ಯವನ್ನು ಕೊಡಲು ದೇವರಲ್ಲಿ ಪ್ರಾರ್ಥಿಸಿ. ವಂಶಾಭಿವೃದ್ಧಿಯಾಗಿರುವ ವಿಚಾರದಿಂದ ಸಂತೋಷ ಮುಗಿಲುಮುಟ್ಟುವುದು. ಆದಾಯದ ಎರಡರಷ್ಟು ಖರ್ಚು.

ಸಿಂಹ: ವೈಯಕ್ತಿಕ ಸಮಸ್ಯೆಗಳು ಬಗೆ ಹರಿಯುವುದು. ಜಿಡ್ಡಿನ ಪದಾರ್ಥಗಳ ವ್ಯಾಪಾರಗಳಿಂದ ಲಾಭ ಹೊಂದುವಿರಿ. ಕಾರ್ಯಗಳು ಕೈಗೂಡಲು ತಾಳ್ಮೆವಹಿಸುವುದು ಸೂಕ್ತ. ಶಸ್ತ್ರವೈದ್ಯ ವೃತ್ತಿಯವರಿಗೆ ಸೌಲಭ್ಯಗಳು ಹೆಚ್ಚಲಿವೆ.

ಕನ್ಯಾ: ಸಮಾಜದಲ್ಲಿ ಗೌರವ ಹೆಚ್ಚಿಸಿಕೊಳ್ಳುವ ಘಟನೆ ನಿಮ್ಮಿಂದ ನಡೆಯಲಿದೆ. ವಿರೋಧದ ನಡುವೆಯೂ ಕಾರ್ಯ ಸಾಧನೆ ಮಾಡಿದ ಹೆಮ್ಮೆ ನಿಮಗಿರುವುದು. ಅಶಾಂತಿಯ ವಾತಾವರಣದಲ್ಲಿ ಕೆಲಸ ಮಾಡಬೇಕಾದ ಪರಿಸ್ಥಿತಿ.

ತುಲಾ: ಭೂಮಿಗೆ ಸಂಬಂಧಿಸಿದ ಕೆಲಸಗಳು ಸರಾಗವಾಗಿ ನೆರವೇರುವುದು. ಮಕ್ಕಳ ಉನ್ನತ ವಿದ್ಯಾಭ್ಯಾಸದ ಖರ್ಚುವೆಚ್ಚಗಳನ್ನು ಸರಿದೂಗಿಸುವಿರಿ. ಆಕಸ್ಮಿಕ ಧನಲಾಭ. ನಿಮ್ಮ ಶ್ರಮಕ್ಕೆ ಸರಿಸಮಾನವಾದ ಫಲ ದೊರಕುವುದು.

ವೃಶ್ಚಿಕ: ಈ ದಿನ ನಿಮ್ಮ ಮೇಲಧಿಕಾರಿಗಳ ಬಳಿಯಲ್ಲಿ ಪರೀಕ್ಷೆಗೆ ಒಳಗಾಗಬೇಕಾದಂತಾಗುತ್ತದೆ. ಇನ್ನೊಬ್ಬರ ಸಂತೋಷಕ್ಕಾಗಿ ನಿಮ್ಮ ಆಲೋಚನೆ ಅಥವಾ ಅಮೂಲ್ಯ ಸಮಯವನ್ನು ಕೈಚಲ್ಲಬೇಕಾಗುವುದು.

ಧನು: ವೃತ್ತಿಯಲ್ಲಿ ಹೊಸ ಮಾರ್ಗಗಳನ್ನು ಅಳವಡಿಸಿಕೊಂಡಿರುವ ಕಾರಣದಿಂದ ಕೆಲವು ಶುಭ ಸಂಕೇತ ನಿಮ್ಮ ಅನುಭವಕ್ಕೆ ಬರಲಿವೆ. ಅನ್ಯರಲ್ಲಿ ಸಂಯಮದಿಂದ ನಡೆದುಕೊಳ್ಳುವುದು ಉತ್ತಮ. ದ್ರಾಕ್ಷಿ ಬೆಳೆಗಾರರಿಗೆ ಲಾಭ.

ಮಕರ: ಸದಾಕಾಲ ನಿಮ್ಮ ಮಹತ್ವಾಕಾಂಕ್ಷೆ ಈಡೇರಿಸುವ ವಿಚಾರದಲ್ಲಿ ಸಕಾರಾತ್ಮಕ ದೃಷ್ಟಿಕೋನವಿರಲಿ. ನಿಮ್ಮ ಅನಿಸಿಕೆ ಅಭಿಪ್ರಾಯಗಳಿಗೆ ಹೆಚ್ಚಿನ ಮನ್ನಣೆ ಇರುವುದು. ವೈದ್ಯರಿಗೆ ಬಿಡುವಿಲ್ಲದ ಕೆಲಸ.

ಕುಂಭ: ಹಿಂದಿನಿಂದ ಬಾಕಿ ಇದ್ದ ಆಫೀಸಿನ ಕೆಲಸಗಳನ್ನು ಪೂರ್ತಿಗೊಳಿಸುವ ಪ್ರಯತ್ನ ಮಾಡಿ. ಕಬ್ಬಿಣ ಮತ್ತು ತಾಮ್ರದ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ. ಹಳೆಯ ಕಾರಿನ ಅಥವಾ ವಾಹನದ ಮಾರಾಟ ವಿಷಯವನ್ನು ಕೈಬಿಡಿ.

ಮೀನ: ನೀವು ನಿಮ್ಮ ನೀತಿ ನಿಯಮಗಳಿಗೆ ಬದ್ಧರಾದರೆ, ಸತ್ಯ ನಿಮ್ಮದಾಗಿದ್ದರೆ ಉದ್ಯೋಗದಲ್ಲಿ ಹೆದರುವ ಅವಶ್ಯಕತೆ ಇಲ್ಲಿ. ಮಕ್ಕಳ ವಿಷಯದಲ್ಲಿ ಅಸಡ್ಡೆ ತೋರಿಸಬಾರದು ಎಂಬುವುದು ಅರಿವಾಗಲಿದೆ. ಹಣದ ಚಿಂತೆ ಇರುವುದಿಲ್ಲ.

ಪದಬಂಧ 4880
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸತ್ಯಕ್ಕಾಗಿ ಮುಷ್ಕರ ಹೂಡುವವನು (4)
3.ತೊಡರುತ್ತಿರುವ ಲುಂಗಿ! (3)
5.ಮುಸಲ್ಮಾನರ ದೊರೆಯಿವನು (3)
7.ಒಮ್ಮಿಂದೊಮ್ಮೆ ನರಮಿಡಿದು ಉಂಟಾಗುವ ನೋವು (3)
8.ಶ್ವಾಸವಿದ್ದಾಗಲೇ ಈ ದ್ರೋಹ! (5)
11.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)
12.ನಡುವೆಯೇ ಉಂಟಾಗಿರುವ ಕಂಪನ! (3)
15.ವಸ್ತುಗಳನ್ನು ಸಂಗ್ರಹಿಸುವ ಮಳಿಗೆ (3)
16.ಹಿಂದಿನ ಅಥವಾ ಮುಂದಿನ ಜನ್ಮ (4)

ಮೇಲಿಂದ ಕೆಳಕ್ಕೆ
1.ದನವಿರುವ ಮನೆ (3)
2.ಮಹಿಮಾವಂತನ ಮೇಲೆಬಿದ್ದಿರುವ ಮಂಜು (2)
3.ತೋಡುವಾಗ ಆಗಿರುವ ಗೋಜಲು (3)
4.ಧರ್ಮಕಾರ್ಯಗಳಿಗೆ ಕಾದಿಟ್ಟ ಹಣ (4)
6.ಬಸದಿ ಬಳಿಯಿರುವ ದೇವದಾಸಿ (3)
7.ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಸವಾಲು ಹಾಕುವುದು (5)
9.ತನಯ ಈ ರೀತಿ ಮಗ್ನ! (3)
10.ಕೃತ್ರಿಮವಾದ ಮಂದಹಾಸ (4)
11.ಮುಸುರೆ ತಿಕ್ಕುವವಳು ಕೊಡತಕ್ಕ ಹಣ (3)
13.ಈತ ಕಬ್ಬಿಣದ ಕೆಲಸಗಾರ (3)
14.ಬೀದಿ ಜಗಳದಲ್ಲಿ ಬಿತ್ತ ಸಿಕ್ಕೀತೇ? (2)



4879ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಭಾಕಂಪ 3.ಸಂಗ್ರಾಮ 5.ಕಸರತ್ತು 7.ನೆನಪು 8.ಸಾರ 9.ಅರ್ಜಿ 10.ದಿಪಚೌ 12.ನಸುನಗು 14.ಪರಾರಿ 15.ಲಿಪಿಗಾರ

ಮೇಲಿಂದ ಕೆಳಕ್ಕೆ: 1.ಸಮರ್ಥನೆ 2.ಪದಕ 3.ಸಂಪತ್ತು 4.ಮಧುಕರ 6.ಸಹಗಮನ 9.ಅನುಲೇಪ 11.ಚೌಕಿದಾರ 12.ನಗಾರಿ 13.ಗುದ್ದಲಿ

ಸುಡೊಕು 5266

	2			6	7	4		
3								2
	7			4	8		6	
	4						8	5
8		9		7				
	5		8		4		9	
2				9			3	
4		3		5	2			8
	1		4			5		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5265 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಶೇ 8.4ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ಏಪ್ರಿಲ್ 1ರಿಂದ ಶುರುವಾಗಲಿರುವ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರವು ಶೇಕಡ 8.4ರಷ್ಟು ಇರಲಿದೆ ಎಂದು ಮೂಡಿಸ್ ಅಂದಾಜಿಸಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಹೆಚ್ಚಾಗಿರುವುದು ಹಾಗೂ ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಬೆಳವಣಿಗೆಗೆ ಅಡ್ಡಿಯಾಗಬಹುದು ಎಂದು ಅದು ಎಚ್ಚರಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,063
ಇಂದಿನ ಅಂತ್ಯ	16,248
▼	815
ದಿನದ ಕನಿಷ್ಠ	16,203

ವಿನಿಮಯ ದರ

$ ಡಾಲರ್	75.60
£ ಪೌಂಡ್	101.63
€ ಯುರೊ	84.83
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹395

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1510 (1440)
ಸೋಯಾ (ರಿಫೈನ್ಡ್)	₹1500 (1430)
ಸೂರ್ಯಕಾಂತಿ (ರಿಫೈನ್ಡ್)	₹1520 (1440)
ಪಾಮೋಲಿನ್	₹1420 (1352)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2400-3400
ಮಧ್ಯಮ	₹1400-2400
ಸಣ್ಣ	₹800-1400

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಬೆಂಗಳೂರು	₹19000-20000
ಪುತ್ತೂರು	---
ತುರುವೇಕೆರೆ	₹17600-17800

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

2020ರ ಮಾರ್ಚ್ 23ರ ನಂತರ ಸೆನ್ಸೆಕ್ಸ್‌ನ ಅತಿದೊಡ್ಡ ಕುಸಿತ

ದೇಶಿ ಷೇರುಪೇಟೆ ಭಾರಿ ಪತನ

ಮುಂಬೈ (ಪಿಟಿಐ): ಉಕ್ರೇನ್ ಮೇಲೆ ರಷ್ಯಾ ಪೂರ್ಣ ಪ್ರಮಾಣದ ಯುದ್ಧ ಘೋಷಣೆ ಮಾಡಿದ್ದು ದೇಶದ ಷೇರುಪೇಟೆಗಳು ಭಾರಿ ಪತನ ಕಾಣುವಂತೆ ಮಾಡಿದೆ. ಯುದ್ಧ ಘೋಷಣೆ ಆದ ನಂತರದಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 2,702 ಅಂಶ ಕುಸಿಯಿತು. 2020ರ ಮಾರ್ಚ್ 23ರ ನಂತರ ಸೆನ್ಸೆಕ್ಸ್ ಈ ಪ್ರಮಾಣದ ಕುಸಿತ ಕಂಡಿದ್ದು ಇದೇ ಮೊದಲು.

ವಹಿವಾಟಿನ ನಡುವಿನಲ್ಲಿ ಸೆನ್ಸೆಕ್ಸ್ 2,850 ಅಂಶಗಳವರೆಗೂ ಕುಸಿದಿತ್ತು. ದಿನದ ಅಂತ್ಯಕ್ಕೆ 54,530 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 815 ಅಂಶ (ಶೇಕಡ 4.78ರಷ್ಟು) ಕುಸಿಯಿತು. 16,248 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು.

ಸೆನ್ಸೆಕ್ಸ್ ಸೂಚ್ಯಂಕದಲ್ಲಿನ ಅಷ್ಟೂ ಕಂಪನಿಗಳ ಷೇರುಗಳು ಇಳಿಕೆ ಕಂಡವು. ಜಾಗತಿಕವಾಗಿ ಬಹುತೇಕ ಷೇರು ಮಾರುಕಟ್ಟೆಗಳು ಕುಸಿತ ದಾಖಲಿಸಿವೆ. ಹೂಡಿಕೆದಾರರು ಸುರಕ್ಷಿತ ಆಯ್ಕೆಯಾದ ಚಿನ್ನದ ಕಡೆ ಮುಖ ಮಾಡಿದ್ದಾರೆ.

ಬಿಎಸ್‌ಇ —ಎಎಫ್‌ಪಿ ಚಿತ್ರ

‘ವಿಶ್ವದ ಷೇರು ಮಾರುಕಟ್ಟೆಗಳು ಯುದ್ಧ ನಡೆಯುತ್ತದೆ ಎಂಬ ನಿರೀಕ್ಷೆ ಹೊಂದಿರಲಿಲ್ಲ. ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹಾಗೂ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನಡುವೆ ಸಭೆ ನಡೆಯುತ್ತದೆ ಎಂಬ ನಿರೀಕ್ಷೆ ಇತ್ತು. ಹಾಗಾಗಿ, ಯುದ್ಧದ ಘೋಷಣೆಯ ಸುದ್ದಿಯು ತೀರಾ ಅನಿರೀಕ್ಷಿತವಾಗಿ ಎರಗಿತು. ಜಗತ್ತಿನ ಎಲ್ಲೆಡೆ ಷೇರು ಮಾರುಕಟ್ಟೆಗಳು ಕುಸಿದಿವೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಸ್ಮಾಲ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಲಾರ್ಜ್ ಕ್ಯಾಪ್ ಸೂಚ್ಯಂಕಗಳು ಕೂಡ ಗರಿಷ್ಠ ಶೇ 5.77ರವರೆಗೆ ಕುಸಿದಿವೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 102 ಪೈಸೆ ಇಳಿಕೆ ಕಂಡಿದೆ.

₹ 13.44 ಲಕ್ಷ ಕೋಟಿ ಕಳೆದುಕೊಂಡ ಹೂಡಿಕೆದಾರರು

ನವದೆಹಲಿ (ಪಿಟಿಐ): ಷೇರುಪೇಟೆ ಸೂಚ್ಯಂಕವು ಭಾರಿ ಇಳಿಕೆ ಕಂಡ ಪರಿಣಾಮವಾಗಿ ಹೂಡಿಕೆದಾರರ ₹ 13.44 ಲಕ್ಷ ಕೋಟಿ ಮೌಲ್ಯದ ಸಂಪತ್ತು ಗುರುವಾರ ಕರಗಿದೆ.

ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ಗುರುವಾರದ ಅಂತ್ಯಕ್ಕೆ ₹ 242 ಲಕ್ಷ ಕೋಟಿಗೆ ಇಳಿಕೆ ಆಗಿದೆ. ಬುಧವಾರ ಈ ಮೌಲ್ಯವು ₹ 255 ಲಕ್ಷ ಕೋಟಿಯಷ್ಟು ಇತ್ತು.

ವಿದೇಶಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಹೆಚ್ಚಿನ ಗಮನ ನೀಡಿದ್ದು ಕೂಡ ಮಾರುಕಟ್ಟೆ ಕುಸಿಯಲು ಒಂದು ಕಾರಣ ಎಂದು ವರ್ತಕರು ತಿಳಿಸಿದ್ದಾರೆ.

‘ನಿಫ್ಟಿಯು ಗರಿಷ್ಠ 18,604 ಅಂಶಗಳವರೆಗೆ ಈ ಹಿಂದೆ ತಲುಪಿತ್ತು. ಆ ಮಟ್ಟಕ್ಕೆ ಹೋಲಿಸಿದರೆ ಈಗ ನಿಫ್ಟಿ ಶೇ 13ರಷ್ಟು ಇಳಿಕೆ ಆಗಿದೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷದ ಪರಿಸ್ಥಿತಿಯನ್ನು ಕಂಡರೆ, ಮಾರುಕಟ್ಟೆಗಳು ಒತ್ತಡದಲ್ಲಿ ವಹಿವಾಟು ನಡೆಸುವುದು ಇನ್ನಷ್ಟು ದಿನ ಮುಂದುವರಿಯಬಹುದು’ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕಾ ಹೇಳಿದ್ದಾರೆ. ‘ಹೂಡಿಕೆದಾರರು ಈಗ ತಾಳ್ಮೆಯಿಂದ ಇರಬೇಕು’ ಎಂದು ಅವರು ಸಲಹೆ ನೀಡಿದ್ದಾರೆ.

ಬಿಎಸ್‌ಇ ನೋಂದಾಯಿತ ಸರಿಸುಮಾರು 279 ಕಂಪನಿಗಳ ಷೇರುಗಳು ತಮ್ಮ ಒಂದು ವರ್ಷದ ಕನಿಷ್ಠ ಮಟ್ಟಕ್ಕೆ ಕುಸಿದಿವೆ. ‘ಹೂಡಿಕೆದಾರರು ಆತಂಕಕ್ಕೆ ಒಳಗಾಗಿದ್ದಾರೆ. ಷೇರುಗಳ ಮಾರಾಟದಲ್ಲಿ ತೊಡಗಿದ್ದಾರೆ’ ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಹೂಡಿಕೆಗಳ ಮುಖ್ಯಸ್ಥ ಶ್ರೀಕಾಂತ್ ಚವಾಣ್ ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ನಿಧನ



ಶ್ರೀ ಪಿ. ಎಲ್. ನಂಜುಂಡಸ್ವಾಮಿ,
ಜನನ: 14–07–1929 – ಮರಣ: 24–02–2022
ಧರ್ಮದರ್ಶಿಗಳು, ಪಿ.ವಿ.ಪಿ ಕಲ್ಯಾಣದತ್ತಿ, ಬಿ.ಡಿ.ಎ ಹೊರವರ್ತುಲ ರಸ್ತೆ, ಮಲ್ಲತ್ತಹಳ್ಳಿ, ಬೆಂಗಳೂರು. ಇವರು ದಿನಾಂಕ 24–02–2022 ರಂದು ಬೆಳಿಗ್ಗೆ 6:00 ಗಂಟೆ ಸಮಯದಲ್ಲಿ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಿಧನ ಹೊಂದಿರುತ್ತಾರೆ. ಇವರು ನಾಲ್ಕು ಜನ ಪುತ್ರರು ಒಬ್ಬ ಪುತ್ರಿ ಮತ್ತು ಅಳಿಯ ಕಾಂಬ್ಳೆ ನಿವೃತ್ತ ಐ.ಎ.ಎಸ್ ಅಧಿಕಾರಿಯವರನ್ನು ಅಗಲಿರುತ್ತಾರೆ. ಇವರ ಅಂತ್ಯ ಸಂಸ್ಕಾರವು ಹುಟ್ಟೂರಾದ ಮಳವಳ್ಳಿ ತಾಲೂಕಿನ ಪುರಿಗಾಲಿ ಗ್ರಾಮದಲ್ಲಿ ಗುರುವಾರ ನೆರವೇರಿತು.

ದುಃಖತಪ್ತ: ಧರ್ಮದರ್ಶಿಗಳು, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು, ಪಿ.ವಿ.ಪಿ ಕಲ್ಯಾಣದತ್ತಿ, ಡಾ. ಅಂಬೇಡ್ಕರ್ ತಾಂತ್ರಿಕ ವಿದ್ಯಾಲಯ, ಮಲ್ಲತ್ತಹಳ್ಳಿ, ಬೆಂಗಳೂರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಉಬರ್ ಮತ್ತು ಓಲಾಗೆ ಚಾಲಕರು ಬೇಕಾಗಿದ್ದಾರೆ! ಪ್ರತಿ ತಿಂಗಳು ರೂ.30000/- ವರೆಗೆ ಗಳಿಸಬಹುದು. ಎವರೆಸ್ಟ್ ಫ್ಲೀಟ್: 080-47179009 ಅನ್ನು ಸಂಪರ್ಕಿಸಿ .

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

ಬೇಕಾಗಿದ್ದಾರೆ: ಮಂಗಳೂರಿನ ಆಯುರ್ವೇದ ಕಂಪನಿಗೆ 7th ಮೇಲ್ಪಟ್ಟು ಯುವಕ-ಯುವತಿಯರು: ವೇತನ 10,000-20,000/- ಊಟ ವಸತಿಯುಚಿತ. ಸಂಪರ್ಕಿಸಿ: 8618087188

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 10.000 - 15,000. 8951315839, 9880545002

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Part-Time Jobs

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Marketing & Sales

'ಆಹಾರ ಉತ್ಪನ್ನಗಳನ್ನು ಮಾರಾಟ ಮಾಡಲು ತುರ್ತಾಗಿ ಅಗತ್ಯವಿರುವ ಮಾರಾಟಗಾರರು ಬೇಕಾಗಿದ್ದಾರೆ . 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು ಮತ್ತು ದಕ್ಷಿಣ ಬೆಂಗಳೂರಿನಲ್ಲಿ ಮತ್ತು ಸುತ್ತಮುತ್ತ ವಾಸಿಸುತ್ತಿರಬೇಕು . ಆಕರ್ಷಕ ಸಂಬಳ ಮತ್ತು ಪ್ರೋತ್ಸಾಹ. ಸಂಪರ್ಕಿಸಿ : 8660499891 / 8296741193''.

ವ್ಯಾಪಾರ

Business Offers

Finance

COMPANY PROVIDES All Types of Loan Personal, Property, Project & Business. ROI 4% (Per Annum) Required Agents & DSA, 55000/- Salary & 4% Commission: 7495037212

Franchise

PMS COMPANY is inviting Franchise for every pincode in Bangalore and Karnataka for Real estate Agents. For more details Contact: 9342335589..or you can visit our office at Church Street, St.Mark's Road, Bangalore.

ASTRO YATRA

ಓಂ ದುರ್ಗಾ ಅಂಜನ ಜ್ಯೋತಿಷ್ಯ ಮತ್ತು ವಾಸ್ತು ಕೇಂದ್ರ
Om Durga Anjanam Astro & Vastu Centre
ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳೀಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್
ಗುರು ಶ್ರೀದೇವಾನಂದನ್ ರವರಿಂದ
ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ, ಸುಖ ಶಾಂತಿ ನೆಮ್ಮದಿಗಾಗಿ, ಸಿರಿಸಂಪತ್ತು ಸ್ತ್ರೀ–ಪುರುಷ, ದಾಂಪತ್ಯ, ಮದುವೆ, ಸಂತಾನ, ಆರೋಗ್ಯಕ್ಕೆ ಬೇಕಾಗುವ ಸರ್ವಮನಇಚ್ಚ ಅತೀಘೋರ ನೀಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ, ಆಕರ್ಷಣ ಸಂಮ್ಮೋಹನ, ದುಷ್ಟಶಕ್ತಿಗಳು ಉದ್ಘಾಟನೆ, ಶತೃ ಸಂಬಂಧಿತ ಮಾಟ ದೃಷ್ಟಿಶಾಪಗಳಿಗೆ ಇಂದೇ ಪರಿಹಾರಕ್ಕೆ ಸಂಪರ್ಕಿಸಿ.
ನಿಮ್ಮ ಇಚ್ಛೆಗೆ 24 ಘಂಟೆ ಮಾತ್ರ.
8217437023 / 9845005009
#36, ಎಸ್.ವಿ ಕಾಂಪ್ಲೆಕ್ಸ್, ಅಗ್ರಹಾರ ದಾಸರಹಳ್ಳಿ, ಮಾಗಡಿ ರಸ್ತೆ, ಬೆಂ–40

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land Converted

Devanahalli

CHIKKABALLAPURA TOWN residentially converted land of 1 acre and 2 guntas on Ganganamidde Main Road is available for sale. Contact Madhuraj 9880965366

Flat

Mysore

GOVIANU LUXURIA, High end Luxury Flats in Mysore, Zoo Road, near Mysore-Mall, Rera-003588, www.govianu.com. 8103990990

ಭವಿಷ್ಯ

Astrology

ಸ್ತ್ರೀ-ವಶೀಕರಣ, ಪುರುಷ -ವಶೀಕರಣ, ಮಾಟ-ಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ-ಭವಿಷ್ಯ, ಖಚಿತ- ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ : ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಬ್ರಹ್ಮ ಜ್ಞಾನ ಪಂಡಿತ ಶಂಕರ್ ಗುರೂಜಿ ಪ್ರಖ್ಯಾತ ವಾಸ್ತು ಜ್ಯೋತಿಷ್ಯರು ಪ್ರೀತಿಯಲ್ಲಿ ನಂಬಿ ಮೋಸ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರುಕಾಟ ಆಸ್ತಿಯಲ್ಲಿ ಕಿರಿಕಿರಿ ಪ್ರಯೋಗ ನಿಮ್ಮ ಜೀವನದ ಯಾವುದೇ ಕಠಿಣ ಹಾಗೂ ಗುಪ್ತ ಸಮಸ್ಯೆಗಳಿಗೆ ಸಂಪರ್ಕಿಸಿ 9845167316

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ 15.04.2022 ರಿಂದ 8/10 ದಿನಗಳ ಗುಜರಾತ್, ರಾಜಸ್ಥಾನ್. 11.04.2022, 17.04.2022 ರಿಂದ 11ದಿನಗಳ ಕಾಶಿ, ನೇಪಾಳ. 17.04.2022, 22.04.2022 ರಿಂದ 13/7 ದಿನಗಳ ಕಾಶಿ,ಗಯಾ,ಅಲಹಾಬಾದ್. 12.04.2022,27.04.2022 ರಿಂದ 9/12 ದಿನಗಳ ಕಾಶ್ಮೀರ್, ವೈಷ್ಣೋದೇವಿ, ಅಮೃತ್‌ಸರ್. 12.05.2022, 26.05.2022 ರಿಂದ 13/15 ದಿನಗಳ ಚಾರ್-ಧಾಮ್‌ಯಾತ್ರೆ. 25.04.2022, 07.05.2022 ರಿಂದ 12ದಿನಗಳ ಶಿಮ್ಲಾ,ಕುಲುಮನಾಲಿ. ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837, 8088887677

15 ದಿನಗಳ ಕಾಶಿ, ದೆಹಲಿ. 16 ದಿನಗಳ ಕಾಶಿ,ವೈಷ್ಣೋದೇವಿ, ದೆಹಲಿ,ಅಮೃತ್ಸರ್. 17 ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜುಲೈ ತಿಂಗಳಲ್ಲಿ ಅಮರನಾಥ್ ಯಾತ್ರೆ ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು-86. 9916473906, 8861111568

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 17/03/22 ನೇಪಾಳ, ಮುಕ್ತಿನಾಥ್, ಕಾಶಿ. 12/05/22 ಚಾರ್ಧಾಮ್, ಕೇದಾರನಾಥ,ಬದ್ರಿನಾಥ್. 140/04/22 ವೈಷ್ಣೋದೇವಿ, ಕುಲು, ಮನಾಲಿ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115
CD Per Sqcm	Single Col	Double Col	Multi Col	
	430	450	475	

SPECIAL OFFER
PAY 2 And GET 1 Free
PAY 3 And GET 2 Free
PAY 5 And GET 5 Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ರಷ್ಯಾ–ಉಕ್ರೇನ್ ಬಿಕ್ಕಟ್ಟು: 2014ರ ನಂತರದ ಗರಿಷ್ಠ ಮಟ್ಟಕ್ಕೆ ಕಚ್ಚಾ ತೈಲ ದರ

ಇಂಧನ ದರ ಕನಿಷ್ಠ ₹ 2ರಷ್ಟು ಹೆಚ್ಚಳ?

• ವಿಶ್ವನಾಥ ಎಸ್.

ಬೆಂಗಳೂರು: ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧದ ಪರಿಣಾಮವಾಗಿ, ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ದರವನ್ನು ಲೀಟರಿಗೆ ಕನಿಷ್ಠ ₹ 2ರಿಂದ ₹ 3ರವರೆಗೆ ಏರಿಕೆ ಮಾಡುವ ಸಾಧ್ಯತೆಗಳು ಇವೆ ಎಂದು ಉದ್ಯಮದ ಪ್ರತಿನಿಧಿಗಳು ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರವು ನಿರಂತರವಾಗಿ ಏರಿಕೆ ಆಗುತ್ತಿದ್ದರೂ ದೇಶದಲ್ಲಿ ತಕ್ಷಣಕ್ಕೆ ಪೆಟ್ರೋಲ್, ಡೀಸೆಲ್ ದರ ಏರಿಕೆ ಕಾಣುವುದಿಲ್ಲ. ಉತ್ತರ ಪ್ರದೇಶ ಸೇರಿದಂತೆ ಕೆಲವು ರಾಜ್ಯಗಳಲ್ಲಿ ನಡೆಯುತ್ತಿರುವ ಚುನಾವಣೆ ಮುಗಿದ ನಂತರ, ಮಾರ್ಚ್ ಎರಡನೇ ವಾರದಲ್ಲಿ ಬೆಲೆ ಏರಿಕೆ ಆಗುವ ಎಲ್ಲ ಸಾಧ್ಯತೆಗಳು ಇವೆ ಎಂದು ಅವರು ಹೇಳಿದ್ದಾರೆ.

‘ಕಚ್ಚಾ ತೈಲ ದರ ಬ್ಯಾರಲ್‌ಗೆ 100 ಡಾಲರ್ ದಾಟಿದೆ ಎಂದಮಾತ್ರಕ್ಕೆ ಕಂಪನಿಗಳು ಪೆಟ್ರೋಲ್, ಡೀಸೆಲ್ ದರದಲ್ಲಿ ದಿಢೀರನೆ, ಭಾರಿ ಹೆಚ್ಚಳ ಮಾಡಲಿಕ್ಕಿಲ್ಲ. ಕಚ್ಚಾ ತೈಲ ಬೆಲೆ ಏರಿಕೆಯನ್ನು ಹೊಂದಾಣಿಕೆ ಮಾಡಲು ಸಾಧ್ಯವಿದೆಯೇ ಎನ್ನುವುದನ್ನು ಸರ್ಕಾರ ಪರಿಶೀಲಿಸಬಹುದು. ಎಕ್ಸೈಸ್ ಸುಂಕ ತಗ್ಗಿಸುವ ಮೂಲಕ ಅಥವಾ ಹೊರೆಯನ್ನು ತುಸು ಮಟ್ಟಿಗೆ ಕಂಪನಿಗಳೇ ಭರಿಸುವಂತೆ ಮಾಡಿ ಜನಸಾಮಾನ್ಯರಿಗೆ ಹೆಚ್ಚು ಹೊರೆಯಾಗದಂತೆ ನೋಡಿಕೊಳ್ಳಲು ಸಾಧ್ಯವಿದೆಯೇ ಎನ್ನುವ ಲೆಕ್ಕಾಚಾರವನ್ನು ಸರ್ಕಾರವು ಮಾಡಬಹುದು’ ಎಂದು ಕರ್ನಾಟಕ ರಾಜ್ಯ ಪೆಟ್ರೋಲಿಯಂ ವಿತರಕರ ಒಕ್ಕೂಟದ ಅಧ್ಯಕ್ಷ ಎಚ್.ಎಸ್. ಮಂಜಪ್ಪ ವಿವರಿಸಿದರು.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್, ಡೀಸೆಲ್ ಬೆಲೆಯನ್ನು 112 ದಿನಗಳಿಂದ ಹೆಚ್ಚಿಸಿಲ್ಲ.

ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗೂ ಮೊದಲು ಬೆಲೆಯನ್ನು ಸ್ಥಿರಗೊಳಿಸಲಾಗಿದೆ

ಚಿನ್ನ, ಬೆಳ್ಳಿ ದರ ಇನ್ನಷ್ಟು ಏರಿಕೆ ಸಾಧ್ಯತೆ

ಬೆಂಗಳೂರು: ಯುದ್ಧದ ಪರಿಣಾಮವಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಭಾರಿ ಏರಿಕೆ ಕಂಡಿದೆ. ದೇಶಿ ಚಿನಿವಾರ ಪೇಟೆಯ ಮೇಲೆಯೂ ಅದರ ಪರಿಣಾಮ ಆಗಿದೆ.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರ ₹ 2,190ರಷ್ಟು ಹೆಚ್ಚಾಗಿ ₹ 53,940ಕ್ಕೆ ಏರಿಕೆ ಆಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 2,700ರಷ್ಟು ಹೆಚ್ಚಾಗಿ ₹ 69 ಸಾವಿರಕ್ಕೆ ತಲುಪಿದೆ ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘ ತಿಳಿಸಿದೆ.

‘ಯುದ್ಧ ಸಂಭವಿಸಿದರೆ 10 ಗ್ರಾಂ ಚಿನ್ನದ ದರವು ₹ 55 ಸಾವಿರವನ್ನೂ ದಾಟಬಹುದು’ ಎಂದು ಸಂಘದ ಅಧ್ಯಕ್ಷ ವಿದ್ಯಾಸಾಗರ್ ಈಚೆಗಷ್ಟೇ ಹೇಳಿದ್ದರು.

ದೆಹಲಿಯಲ್ಲಿ 10 ಗ್ರಾಂ ಚಿನ್ನದ ದರ ₹ 1,656ರಷ್ಟು ಹೆಚ್ಚಾಗಿ ₹ 51,627ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 2,350ರಷ್ಟು ಹೆಚ್ಚಾಗಿ ₹ 66,267ಕ್ಕೆ ತಲುಪಿದೆ.

ಇಂತಹ ಸಂದರ್ಭಗಳಲ್ಲಿ ಚಿನ್ನದ ಮೇಲೆ ಹೂಡಿಕೆ ಮಾಡುವವರು ಎಚ್ಚರಿಕೆಯಿಂದ ಇರಬೇಕು ಎಂದು ಸಂಘದ ಮಾಜಿ ಅಧ್ಯಕ್ಷ ವೆಂಕಟೇಶ್ ಬಾಬು ಸಲಹೆ ನೀಡಿದರು.

103 ಡಾಲರ್ ದಾಟಿದ ಕಚ್ಚಾ ತೈಲ ದರ

ನವದೆಹಲಿ (ಪಿಟಿಐ): ಉಕ್ರೇನ್ ಮೇಲೆ ರಷ್ಯಾ ದಾಳಿ ಮಾಡಿದ ನಂತರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಬ್ಯಾರಲ್‌ಗೆ 103.78 ಅಮೆರಿಕನ್ ಡಾಲರ್‌ಗಳಿಗೆ ತಲುಪಿದೆ. 2014ರ ಆಗಸ್ಟ್ 14ರ ನಂತರದ ಗರಿಷ್ಠ ದರ ಇದು.

ಆದರೆ, ಇದರಿಂದ ಭಾರತಕ್ಕೆ ತೈಲ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಆಗದು ಎಂದು ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಭಾರತವು ದೇಶಿ ಬೇಡಿಕೆಯ ಶೇಕಡ 85ರಷ್ಟು ಪ್ರಮಾಣದ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ.

ಭಾರತವು ರಷ್ಯಾದಿಂದ ಅತ್ಯಂತ ಕಡಿಮೆ ಪ್ರಮಾಣದಲ್ಲಿ ತೈಲ ಆಮದು ಮಾಡಿಕೊಳ್ಳುತ್ತಿದೆ. 2021ರಲ್ಲಿ ಭಾರತವು 43,400 ಬ್ಯಾರಲ್‌ಗಳಷ್ಟು ಕಚ್ಚಾ ತೈಲವನ್ನು ರಷ್ಯಾದಿಂದ ಆಮದು ಮಾಡಿಕೊಂಡಿದೆ. ಇದು ಭಾರತವು ಆಮದು ಮಾಡಿಕೊಳ್ಳುತ್ತಿರುವ ಒಟ್ಟಾರೆ ಪ್ರಮಾಣದಲ್ಲಿ ಶೇ 1ರಷ್ಟು ಮಾತ್ರ.

ಒನ್‌ಪ್ಲಸ್ ಅತಿದೊಡ್ಡ ಮಳಿಗೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ತಂತ್ರಜ್ಞಾನ ಕಂಪನಿ ಆಗಿರುವ ಒನ್‌ಪ್ಲಸ್, ಬೆಂಗಳೂರಿನ ಬ್ರಿಗೇಡ್ ರಸ್ತೆಯ ಬಳಿ 39 ಸಾವಿರ ಚದರ ಅಡಿ ವಿಸ್ತೀರ್ಣದ, ವಿಶ್ವದ ಅತಿದೊಡ್ಡ ಎಕ್ಸ್‌ಪೀರಿಯನ್ಸ್ ಸೆಂಟರ್ ‘ಒನ್‌ಪ್ಲಸ್ ಬುಲೆವಾರ್ಡ್’ ಆರಂಭಿಸಿದೆ. ಈ ಮಳಿಗೆಗಾಗಿ ₹ 40 ಕೋಟಿ ವೆಚ್ಚ ಮಾಡಲಾಗಿದೆ ಎಂದು ಕಂಪನಿಯು ತಿಳಿಸಿದೆ.

ವರ್ಚುವಲ್ ವೇದಿಕೆಯ ಮೂಲಕ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಕಂಪನಿಯ ಭಾರತದ ಸಿಇಒ ನವ್‌ನೀತ್ ನಕ್ರಾ ಅವರು ಬುಲೆವಾರ್ಡ್ ಉದ್ಘಾಟಿಸಿದರು. ‘ಒನ್‌ಪ್ಲಸ್ ಬುಲೆವಾರ್ಡ್ ಕೇವಲ ರಿಟೇಲ್ ಮಳಿಗೆ ಆಗಿರದೆ ನಮ್ಮ ಸಮುದಾಯದ ಸದಸ್ಯರ ಕೇಂದ್ರವಾಗಿಯೂ ಇರಲಿದೆ. ಗ್ರಾಹಕರು ಬ್ರ್ಯಾಂಡ್‌ನೊಂದಿಗೆ ನೇರವಾಗಿ ಸಂಪರ್ಕ ಸಾಧಿಸಲು ಅನುವು ಮಾಡಿಕೊಡಲಿದೆ. ಭಾರತದಲ್ಲಿ ಒನ್‌ಪ್ಲಸ್ ಪಯಣ ಆರಂಭ ಆಗಿದ್ದು ಬೆಂಗಳೂರಿನಲ್ಲಿಯೇ. ಹಾಗಾಗಿ ಜಗತ್ತಿನ ಅತಿದೊಡ್ಡ ಒನ್‌ಪ್ಲಸ್ ಎಕ್ಸ್‌ಪೀರಿಯನ್ಸ್ ಮಳಿಗೆಯನ್ನು ಇಲ್ಲಿ ಆರಂಭಿಸಲಾಗಿದೆ’ ಎಂದು ಅವರು ಹೇಳಿದರು.

ಒನ್‌ಪ್ಲಸ್ ಅನ್‌ಬಾಕ್ಸಿಂಗ್ ಜೋನ್

ಗ್ರಾಹಕರಿಗೆ ಒನ್‌ಪ್ಲಸ್ ಬ್ರ್ಯಾಂಡ್‌ನೊಂದಿಗೆ ಹೆಚ್ಚು ಹತ್ತಿರವಾಗಲು ಈ ಮಳಿಗೆ ನೆರವಾಗಲಿದೆ. ಸ್ಮಾರ್ಟ್‌ಫೋನ್, ಸ್ಮಾರ್ಟ್‌ವಾಚ್ ಒಳಗೊಂಡು ಕಂಪನಿಯ ಎಲ್ಲಾ ಉತ್ಪನ್ನಗಳನ್ನೂ ಇಲ್ಲಿ ಕಾಣಬಹುದು. ಗೇಮಿಂಗ್ ಜೋನ್, ಆಡಿಟೋರಿಯಂ, ಸಿಗ್ನೆಜರ್ ಕಾಫಿ ಜೋನ್, ಅನ್‌ಬಾಕ್ಸಿಂಗ್ ಜೋನ್, ಗ್ರಾಹಕ ಸೇವಾ ಕೇಂದ್ರಗಳನ್ನು ಇದು ಒಳಗೊಂಡಿದೆ ಎಂದು ಕಂಪನಿ ಹೇಳಿದೆ.

ಈ ವರ್ಷದ ಅಂತ್ಯದೊಳಗೆ 15 ಸಾವಿರಕ್ಕೂ ಅಧಿಕ ಆಫ್‌ಲೈನ್ ಮಳಿಗೆಗಳನ್ನು ಹೊಂದುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಬಿಎಂಡಬ್ಲ್ಯು ಮಿನಿ ಕೂಪರ್ ಎಸ್‌ಇ ಜೊತೆ ಬಿಎಂಡಬ್ಲ್ಯು ಸಮೂಹದ ಭಾರತದ ಅಧ್ಯಕ್ಷ ವಿಕ್ರಂ ಪವ್ಹಾ

ಬಿಎಂಡಬ್ಲ್ಯು ಮಿನಿ ಕೂಪರ್ ಎಸ್‌ಇ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಷಾರಾಮಿ ಕಾರುಗಳನ್ನು ತಯಾರಿಸುವ, ಜರ್ಮನಿಯ ಬಿಎಂಡಬ್ಲ್ಯು ಕಂಪನಿಯು ಭಾರತದ ಮಾರುಕಟ್ಟೆಗೆ ಸಂಪೂರ್ಣ ವಿದ್ಯುತ್ ಚಾಲಿತ ಮಿನಿ ಕೂಪರ್ ಎಸ್‌ಇ ಬಿಡುಗಡೆ ಮಾಡಿದೆ. ಈ ಮೂಲಕ ದೇಶದಲ್ಲಿ ತನ್ನ 10 ವರ್ಷಗಳ ಸಂಭ್ರಮವನ್ನು ಆಚರಿಸಿದೆ.

ಮೂರು ಬಾಗಿಲುಗಳ ಈ ಕಾರಿನ ಎಕ್ಸ್ ಷೋರೂಂ ಬೆಲೆ ₹ 47.2 ಲಕ್ಷ ಇದೆ.

ಕಾಂಪ್ಯಾಕ್ಟ್ ಪ್ರೀಮಿಯಂ ವಿಭಾಗದಲ್ಲಿ ಮೊದಲ ವಿದ್ಯುತ್ ಚಾಲಿತ ಕಾರನ್ನು ತರುತ್ತಿರುವುಕ್ಕೆ ಹೆಮ್ಮೆ ಇದೆ ಎಂದು ಬಿಎಂಡಬ್ಲ್ಯು ಸಮೂಹದ ಭಾರತದ ಅಧ್ಯಕ್ಷ ವಿಕ್ರಂ ಪವ್ಹಾ ಹೇಳಿದ್ದಾರೆ.

7.3 ಸೆಕೆಂಡ್‌ಗಳಲ್ಲಿ ಈ ಕಾರು ಪ್ರತಿ ಗಂಟೆಗೆ 100 ಕಿ.ಮೀ. ವೇಗವನ್ನು ತಲುಪಬಲ್ಲದು ಎಂದು ಕಂಪನಿ ಹೇಳಿದೆ. 32.6 ಕಿಲೋ ವಾಟ್ ಬ್ಯಾಟರಿಯನ್ನು ಇದು ಹೊಂದಿದೆ. ವಯರ್‌ಲೆಸ್ ಚಾರ್ಜಿಂಗ್, ಮಲ್ಟಿ ಫಂಕ್ಷನಲ್ ಡಿಸ್‌ಪ್ಲೇ, ಕ್ರ್ಯಾಷ್ ಸೆನ್ಸರ್, ಆ್ಯಂಟಿ ಲಾಕ್ ಬ್ರೇಕಿಂಗ್ ಸಿಸ್ಟಂ ಸೇರಿದಂತೆ ಹಲವು ವೈಶಿಷ್ಟ್ಯಗಳನ್ನು ಇದು ಒಳಗೊಂಡಿದೆ.

ಮುಂಬೈ ಧಾರಣೆ

ಶೇಂಗಾ

24-2-2022

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	8500-8600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1450)
ಒಂದು ವಾರದ ಡೆಲಿವರಿ	1515 (1445)
ಸೋಯಾ ಕಚ್ಚಾ	1490 (1415)
ಪಾಮ್ ವಾರದ ಡೆಲಿವರಿ	1418 (1350)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1370)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,350 (49,850)
ಬೆಳ್ಳಿ ಕೆ.ಜಿ 68,150 (62,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಪೌಷ್ಟಿಕ ಆಹಾರ ಸೇವಿಸಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	525
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-44500
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಕುಮಟ	
ಚಿಪ್ಪು	22199-33189
ಕೋಕ	9070-25688
ಹಳೆಚಾಲಿ	45599-17679
ಹೊಸಚಾಲಿ	34201-40299
ಸಿದ್ದಾಪುರ	
ಬಿಳಿಗೋಟು	20699-28599
ಚಾಲಿ	43099-46599
ಕೋಕ	19199-27899
ಹೊಸಚಾಲಿ	34599-40099
ಕೆಂಪುಗೋಟು	30609-32889
ರಾಶಿ	44809-46919
ತಟ್ಟಿಬೆಟ್ಟೆ	38699-43699
ಶಿರಸಿ	
ಬೆಟ್ಟೆ	36009-44399
ಬಿಳಿಗೋಟು	17009-36311
ಚಾಲಿ	32999-40999
ರಾಶಿ	38199-47309
ಯಲ್ಲಾಪುರ	
ಬಿಳಿಗೋಟು	26499-32889
ಕೋಕ	18899-3039
ಹಳೆಚಾಲಿ	44438-48009
ಹೊಸಚಾಲಿ	34859-41299
ಕೆಂಪುಗೋಟು	29000-36181
ರಾಶಿ	45710-52314
ತಟ್ಟಿಬೆಟ್ಟೆ	38121-45099
ಸಾಗರ	
ಬಿಳಿಗೋಟು	16099-27929
ಚಾಲಿ	32099-38599
ಕೋಕ	23899-29399
ಕೆಂಪುಗೋಟು	21129-36409
ರಾಶಿ	33899-46319
ಸಿಪ್ಪೆಗೋಟು	8015-20189
ರಾಮನಗರ ರೇಷ್ಮೆ	
ಮಿಶ್ರತಳಿ	400-725
ದ್ವಿತಳಿ	700-946

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	16000	16100	247.55 ಸೆಂಟ್ಸ್
ಎಸಿ	7810	7600	8200	
ಆರ್‌ಪಿ	8100	8200	8200	ಲಂಡನ್
ಆರ್‌ಸಿ	4075	4000	4050	2234 ಡಾಲರ್ಸ್

ರಣಜಿ: ಜಮ್ಮು–ಕಾಶ್ಮೀರ ಎದುರು ಕರ್ನಾಟಕದ ಗೌರವ ರಕ್ಷಿಸಿದ ಬ್ಯಾಟರ್

ಕರುಣ್ ನಾಯರ್ ಶತಕ ಸೊಬಗು

ಪ್ರಜಾವಾಣಿ ವಾರ್ತೆ

ಚೆನ್ನೈ: ಸರಿಯಾದ ಸಮಯಕ್ಕೆ ಲಯಕ್ಕೆ ಮರಳಿದ ಕರುಣ್ ನಾಯರ್ ಗುರುವಾರ ಇಲ್ಲಿ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಭರ್ಜರಿ ಶತಕ ದಾಖಲಿಸಿದರು. ಜೊತೆಗೆ ಕರ್ನಾಟಕ ತಂಡವು ಜಮ್ಮು-ಕಾಶ್ಮೀರದೆದುರು ಅಲ್ಪ-ಮೊತ್ತಕ್ಕೆ ಕುಸಿಯುವ ಆತಂಕವನ್ನೂ ನಿವಾರಿಸಿದರು.

ಐಐಟಿ ಕೆಮ್‌ಪ್ಲಾಸ್ಟ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಎರಡನೇ ಓವರ್‌ನಲ್ಲಿಯೇ ದೇವದತ್ತ ಪಡಿಕ್ಕಲ್ ಔಟಾದರು. ಇದರಿಂದಾಗಿ ಆತಂಕ ತಲೆದೋರಿತು. ಮಯಂಕ್ ಅಗರವಾಲ್ ಅನುಪಸ್ಥಿತಿಯಲ್ಲಿ ಸ್ಥಾನ ಪಡೆದ ಕರುಣ್ ನಾಯರ್ (ಔಟಾಗದೆ 152; 267ಎ) ಆಟದ ಬಲದಿಂದ ತಂಡವು 90 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 268 ರನ್ ಗಳಿಸಿತು.

ಆರಂಭಿಕ ಬ್ಯಾಟರ್ ಸಮರ್ಥ್ ಮತ್ತು ಕರುಣ್ ತಾಳ್ಮೆಯಿಂದ ಇನಿಂಗ್ಸ್ ಕಟ್ಟಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 98 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ಮೊದಲ ಅವಧಿಯಲ್ಲಿ ಹೆಚ್ಚು ವಿಕೆಟ್‌ಗಳು ಪತನವಾಗಲಿಲ್ಲ. ಈ ಜೊತೆಯಾಟವನ್ನು 30ನೇ ಓವರ್‌ನಲ್ಲಿ ಕಾಶ್ಮೀರ ತಂಡದ ಅಬ್ದುಲ್ ಸಮದ್ ಮುರಿದರು. ಸಮರ್ಥ್ ವಿಕೆಟ್ ಕಬಳಿಸಿದ ಅವರು ಸಂಭ್ರಮಿಸಿದರು. ಕೇವಲ ಐದು ರನ್‌ಗಳ ಅಂತರದಿಂದ ಸಮರ್ಥ್ ಅರ್ಧಶತಕ ತಪ್ಪಿಸಿಕೊಂಡರು.

ಕ್ರೀಸ್‌ಗೆ ಬಂದ ಕೆ.ವಿ. ಸಿದ್ಧಾರ್ಥ್ (16 ರನ್) ರಕ್ಷಣಾತ್ಮಕ ಆಟಕ್ಕೆ ಮೊರೆ ಹೋದರು. ಕರುಣ್ ಜೊತೆಗೆ ಮೂರನೇ ವಿಕೆಟ್ ಪಾಲುದಾರಿಕೆಯಲ್ಲಿ 56 ರನ್ ಸೇರಿಸಿದರು.

ಆದರೆ ಐವತ್ತನೇ ಓವರ್‌ನಲ್ಲಿ ಉಮ್ರಾನ್ ಮಲೀಕ್ ಈ ಜೊತೆಯಾಟವನ್ನು ಮುರಿದರು. ಸಿದ್ಧಾರ್ಥ್ ಔಟಾಗಿ ನಿರ್ಗಮಿಸಿದರು. ಈ ಹಂತದಲ್ಲಿ ಕರ್ನಾಟಕ ತಂಡದ ಮಧ್ಯಮ ಕ್ರಮಾಂಕ ತಡಬಡಾಯಿಸಿತು.

ನಾಯಕ ಮನೀಷ್ ಪಾಂಡೆ ಕೂಡ ಉಮ್ರಾನ್ ಎಸೆತದಲ್ಲಿ ನಿರ್ಗಮಿಸಿದರು. ಬಿ.ಆರ್. ಶರತ್ ತಮಗೆ ಲಭಿಸಿದ ಅವಕಾಶವನ್ನು ಬಳಸಿಕೊಳ್ಳಲಿಲ್ಲ. ಅನುಭವಿ ಬೌಲರ್ ಪರ್ವೇಜ್ ರಸೂಲ್ ಬೌಲಿಂಗ್‌ನಲ್ಲಿ ಆಲ್‌ರೌಂಡರ್‌ಗಳಾದ ಶ್ರೇಯಸ್ ಗೋಪಾಲ್ ಮತ್ತು ಕೃಷ್ಣಪ್ಪ ಗೌತಮ್ ಔಟಾದರು.

ಕರುಣ್ ಏಕಾಂಗಿ ಹೋರಾಟ: ಆದರೆ, ಇದೆಲ್ಲದರ ನಡುವೆ ಇನ್ನೊಂದು ಬದಿಯಲ್ಲಿ ಕರುಣ್ ನಾಯರ್ ಗಟ್ಟಿಯಾಗಿ ನಿಂತರು. ಹೋದ ಬಾರಿಯ ಋತುವಿನಲ್ಲಿ ಫಾರ್ಮ್ ಕೊರತೆ ಎದುರಿಸಿದ್ದ ಕರುಣ್ ಇಲ್ಲಿ ಚೆಂದದ ಬ್ಯಾಟಿಂಗ್ ಮಾಡಿದರು.

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 15ನೇ ಶತಕ ದಾಖಲಿಸಿದರು. ಅವರು ಎದುರಿಸಿದ ಒಟ್ಟು 267 ಎಸೆತಗಳಲ್ಲಿ 194 ಡಾಟ್ ಬಾಲ್‌ಗಳಿದ್ದವು. ಇದು ಅವರ ತಾಳ್ಮೆ ಮತ್ತು ಅವಕಾಶ ಸಿಕ್ಕಾಗ ಚುರುಕಾಗಿ ರನ್ ಗಳಿಸಿದ ಆಟಕ್ಕೆ ಸಾಕ್ಷಿ.

ಫೀಲ್ಡರ್‌ಗಳ ಭದ್ರಕೋಟೆಯನ್ನು ಭೇದಿಸಿ ಚೆಂಡನ್ನು 21 ಬಾರಿ ಬೌಂಡರಿಗೆರೆ ದಾಟಿಸುವಲ್ಲಿ ಯಶಸ್ವಿಯಾದರು. ಶತಕೋತ್ತರ ಅರ್ಧಶತಕ ಗಳಿಸಿದ ಕರುಣ್ ದಿನದಾಟದ ಕೊನೆಗೆ ಕ್ರೀಸ್‌ನಲ್ಲಿದ್ದಾರೆ.

ಕರುಣ್ ನಾಯರ್

ಸ್ಕೋರ್ ಕಾರ್ಡ್

ಕರ್ನಾಟಕ, ಮೊದಲ ಇನಿಂಗ್ಸ್ 8ಕ್ಕೆ 268 (90 ಓವರ್)
ಸಮರ್ಥ್ ಸಿ ಚೌಹಾಣ್ ಬಿ ಸಮದ್ 45 (74ಎ, 4X5), ದೇವದತ್ತ ಸಿ ಸಮದ್ ಬಿ ಯೂಸುಫ್ 8 (8ಎ, 4X2), ಕರುಣ್ ನಾಯರ್ ಬ್ಯಾಟಿಂಗ್ 152 (267ಎ, 4X21, 6X1), ಸಿದ್ಧಾರ್ಥ್ ಸಿ ಚೌಹಾನ್ ಬಿ ಮಲಿಕ್ 16 (62ಎ, 4X2), ಪಾಂಡೆ ಸಿ ಪಂಡೀರ ಬಿ ಮಲಿಕ್ 1 (9ಎ), ಶರತ್ ಎಲ್‌ಬಿಡಬ್ಲ್ಯು ನಬಿ 11 (33ಎ, 4X1), ಶ್ರೇಯಸ್ ಸಿ ರಶೀದ್ ಬಿ ರಸೂಲ್ 7 (18ಎ, 4X1), ಗೌತಮ್ ಸಿ ಸಮದ್ ಬಿ ರಸೂಲ್ 2 (10ಎ), ರೋನಿತ್ ಎಲ್‌ಬಿಡಬ್ಲ್ಯು ಯೂಸುಫ್ 23 (59ಎ, 4X2)
ಇತರೆ (ಲೆಗ್‌ಬೈ 1, ವೈಡ್ 2) 3
ವಿಕೆಟ್ ಪತನ: 1–10 (ದೇವದತ್ತ ಪಡಿಕ್ಕಲ್; 1.6), 2–108 (ಸಮರ್ಥ್; 29.4), 3–164 (ಸಿದ್ಧಾರ್ಥ್; 49.4), 4–166 (ಮನೀಷ್ ಪಾಂಡೆ; 51.2), 5–190 (ಬಿ.ಆರ್. ಶರತ್; 61.4), 6–205 (ಶ್ರೇಯಸ್ ಗೋಪಾಲ್; 66.2), 7–209 (ಕೃಷ್ಣಪ್ಪ ಗೌತಮ್; 68.5), 8–268 (ರೋನಿತ್ ಮೋರೆ; 89.6)
ಬೌಲಿಂಗ್: ಅಕೀಬ್ ನಬಿ 18–4–52–1, ಮುಜ್ತಾಬಾ ಯೂಸುಫ್ 15–2–44–2, ಉಮ್ರಾನ್ ಮಲಿಕ್ 12–1–35–2, ಅಬಿದ್ ಮುಷ್ತಾಕ್ 14–5–53–0, ಪರ್ವೇಜ್ ರಸೂಲ್ 25–9–51–2, ಅಬ್ದುಲ್ ಸಮದ್ 6–0–32–1

ಗಣೇಶ್ ಸತೀಶ್ ಶತಕ

ಸುಲ್ತಾನಪುರ, ಹರಿಯಾಣ (ಪಿಟಿಐ): ವಿದರ್ಭ ತಂಡದಲ್ಲಿ ಆಡುವ ಕನ್ನಡಿಗ ಗಣೇಶ್ ಸತೀಶ್ ಗುರುವಾರ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಜಿ ಗುಂಪಿನ ಪಂದ್ಯದಲ್ಲಿ ಶತಕ ಗಳಿಸಿದರು. ಮಹಾರಾಷ್ಟ್ರ ಎದುರಿನ ಪಂದ್ಯದಲ್ಲಿ ದಾವಣಗೆರೆ ಗಣೇಶ್ ಸತೀಶ್ (ಬ್ಯಾಟಿಂಗ್ 146, 282 ಎಸೆತಗಳು) ಬ್ಯಾಟಿಂಗ್ ಬಲದಿಂದ ವಿದರ್ಭ ತಂಡವು 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 270 ರನ್ ಗಳಿಸಿತು. ಅಥರ್ವ ತೈಡೆ ಅರ್ಧಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ವಿದರ್ಭ: 3ಕ್ಕೆ 270 (ಗಣೇಶ್ ಸತೀಶ್ ಬ್ಯಾಟಿಂಗ್ 146, ಅಥರ್ವ್ ತೈಡೆ 68, ಮುಖೇಶ್ ಚೌಧರಿ 47ಕ್ಕೆ2, ಸತ್ಯಜೀತ್ ಬಚಾವ್ 68ಕ್ಕೆ1) ಮಹಾರಾಷ್ಟ್ರ ವಿರುದ್ಧ.

ಇಶಾನ್ ಅಬ್ಬರ; ಭಾರತಕ್ಕೆ ಜಯ

ಶ್ರೀಲಂಕಾ ಎದುರಿನ ಟಿ20 ಕ್ರಿಕೆಟ್ ಸರಣಿ: ರೋಹಿತ್ ಶರ್ಮಾ ಬಳಗಕ್ಕೆ ಮುನ್ನಡೆ

ಲಖನೌ: ಇಶಾನ್ ಕಿಶನ್ ಮತ್ತು ಶ್ರೇಯಸ್ ಅಯ್ಯರ್ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಶ್ರೀಲಂಕಾ ಎದುರಿನ ಟಿ20 ಕ್ರಿಕೆಟ್ ಸರಣಿಯಲ್ಲಿ ಶುಭಾರಂಭ ಮಾಡಿತು.

ಭಾರತರತ್ನ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಮೊದಲ ಟಿ20 ಪಂದ್ಯದಲ್ಲಿ ಇಶಾನ್ ಕಿಶನ್ (89; 56ಎ) ಅವರ ಅಬ್ಬರದ ಬ್ಯಾಟಿಂಗ್ ಮತ್ತು ಶ್ರೇಯಸ್ ಅಯ್ಯರ್ ಮಿಂಚಿನ ಅರ್ಧಶತಕದ ಬಲದಿಂದ ಭಾರತ ತಂಡವು 62 ರನ್‌ಗಳಿಂದ ಶ್ರೀಲಂಕಾ ಎದುರು ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ಶ್ರೀಲಂಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 'ಮುಂಬೈ ಇಂಡಿಯನ್ಸ್ ಜೋಡಿ' ರೋಹಿತ್ ಶರ್ಮಾ ಮತ್ತು ಇಶಾನ್ ಅಮೋಘ ಆರಂಭ ನೀಡಿದರು. ಇದರಿಂದಾಗಿ ಆತಿಥೇಯ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 199 ರನ್ ಗಳಿಸಿತು. ಅದಕ್ಕುತ್ತರವಾಗಿ ಲಂಕಾ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 137 ರನ್ ಗಳಿಸಿತು.

ಇಶಾನ್–ರೋಹಿತ್ ಜೊತೆಯಾಟ: ಭಾರತದ ಇನಿಂಗ್ಸ್‌ಗೆ ಆರಂಭಿಕ ಜೋಡಿಯು ಉತ್ತಮ ಅಡಿಪಾಯ ಹಾಕಿತು. ಪವರ್‌ಪ್ಲೇನಲ್ಲಿ 58 ರನ್‌ಗಳು ಸೇರಿದವು. ಇನಿಂಗ್ಸ್‌ನ ಏಳನೇ ಓವರ್‌ನಲ್ಲಿ ಡೀಪ್ ನಲ್ಲಿದ್ದ ಫೀಲ್ಡರ್ ಲಿಯಾಂಗೆ ಅವರು ಇಶಾನ್ ಕೊಟ್ಟ ಕ್ಯಾಚ್ ಕೈಚೆಲ್ಲಿದರು. ಇದರ ಲಾಭ ಪಡೆದ ಇಶಾನ್ ಮತ್ತು ರೋಹಿತ್ ಮೊದಲ ವಿಕೆಟ್ ಜೊತೆಯಾಟದಲ್ಲಿ 111 ರನ್‌ಗಳನ್ನು ಸೇರಿಸಿದರು. ಇಶಾನ್ ಕೇವಲ 30 ಎಸೆತಗಳಲ್ಲಿ ಅರ್ಧಶತಕದ ಗಡಿ ತಲುಪಿದರು.

12ನೇ ಓವರ್‌ನಲ್ಲಿ ರೋಹಿತ್ ವಿಕೆಟ್ ಗಳಿಸಿದ ಲಹಿರು ಕುಮಾರ ಜೊತೆಯಾಟವನ್ನು ಮುರಿದರು.

ಈ ಹಂತದಲ್ಲಿ ಇಶಾನ್ ಜೊತೆಗೂಡಿದ ಮತ್ತೊಬ್ಬ ಮುಂಬೈಕರ್ ಶ್ರೇಯಸ್ ಕೂಡ ಬೀಸಾಟವಾಡಿದರು. 17ನೇ ಓವರ್‌ನಲ್ಲಿ ಇಶಾನ್ ಆಟಕ್ಕೆ ತಡೆಯೊಡ್ಡುವಲ್ಲಿ ದಸುನ್ ಶನಕಾ ಯಶಸ್ವಿಯಾದರು. ಅಮೋಘ ಕ್ಯಾಚ್ ಪಡೆದ ಲಿಯಾಂಗೆ ನಿಟ್ಟುಸಿರುಬಿಟ್ಟರು.

ಆದರೆ, ಕೊನೆಯ ಎಸೆತದವರೆಗೂ ಶ್ರೇಯಸ್ ಅಬ್ಬರಕ್ಕೆ ಕಡಿವಾಣ ಹಾಕಲು ಲಂಕಾ ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ಶ್ರೇಯಸ್ ಕೇವಲ 25 ಎಸೆತಗಳಲ್ಲಿ ಅರ್ಧಶತಕ ಬಾರಿಸಿದರು. ಅದರಲ್ಲಿ ನಾಲ್ಕು ಬೌಂಡರಿ ಮತ್ತು ಎರಡು ಸಿಕ್ಸ್‌ರ್‌ಗಳಿದ್ದವು.

ಹೂಡಾ ಪದಾರ್ಪಣೆ: ಆಲ್‌ರೌಂಡರ್ ದೀಪಕ್ ಹೂಡಾ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು.

26 ವರ್ಷದ ಬಲಗೈ ಆಲ್‌ರೌಂಡರ್ ಹೂಡಾ ಈಚೆಗೆ ವೆಸ್ಟ್ ಇಂಡೀಸ್ ವಿರುದ್ಧ ಏಕದಿನ ಕ್ರಿಕೆಟ್‌ಗೂ ಪದಾರ್ಪಣೆ ಮಾಡಿದ್ದರು.

ಋತುರಾಜ್‌ಗೆ ಗಾಯ: ಯುವ ಬ್ಯಾಟರ್ ಋತುರಾಜ್ ಗಾಯಕವಾಡ್ ಗಾಯಗೊಂಡಿದ್ದರಿಂದ ಟಿ20 ಪಂದ್ಯದಲ್ಲಿ ಆಡುವ ಅವಕಾಶದಿಂದ ವಂಚಿತರಾದರು.

ಇಲ್ಲಿ ಅಭ್ಯಾಸ ಮಾಡುವ ಸಂದರ್ಭದಲ್ಲಿ ಮಣಿಕಟ್ಟಿನ ನೋವು ಅನುಭವಿಸಿದ್ದರು. ಇದು ಅವರ ಬ್ಯಾಟಿಂಗ್ ಮೇಲೆ ಪರಿಣಾಮ ಬೀರುತ್ತಿತ್ತು. ಆದ್ದರಿಂದ ಅವರಿಗೆ ಚಿಕಿತ್ಸೆ ನೀಡಿ ನಿಗಾದಲ್ಲಿರಿಸಲಾಗಿದೆ ಎಂದು ಬಿಸಿಸಿಐ ವೈದ್ಯಕೀಯ ತಂಡ ತಿಳಿಸಿದೆ.

ಇಶಾನ್ ಕಿಶನ್ ಅವರ ಬ್ಯಾಟಿಂಗ್ ವೈಖರಿ

ಸ್ಕೋರ್ ಕಾರ್ಡ್

ಭಾರತ 2 ವಿಕೆಟ್‌ಗೆ 199 (20 ಓವರ್)
ರೋಹಿತ್ ಬಿ ಲಹಿರು 44 (32ಎ,4X2, 6X1), ಇಶಾನ್ ಸಿ ಜೆನಿತ್ ಬಿ ಶನಕಾ 89 (56ಎ, 4X10, 6X3), ಶ್ರೇಯಸ್ ಔಟಾಗದೆ 57 (28ಎ, 4X5, 6X2), ಜಡೇಜ ಔಟಾಗದೆ 3 (4ಎ)
ಇತರೆ (ವೈಡ್ 6) 6
ವಿಕೆಟ್ ಪತನ: 1–111 (ರೋಹಿತ್ ಶರ್ಮಾ; 11.5), 2–155 (ಇಶಾನ್ ಕಿಶನ್; 16.6)
ಬೌಲಿಂಗ್: ದುಷ್ಮಂತ ಚಾಮೀರ 4–0–42–0, ಲಹಿರು ಕುಮಾರ 4–0–43–1, ಕರುಣಾರತ್ನೆ 4–0–46–0, ಜಯವಿಕ್ರಮ 2–0–15–0, ಜೆಫ್ರಿ ವಾಂಡರ್ಸೆ 4–0–34–0, ದಸುನ್ ಶನಕಾ 2–0–19–1

ಶ್ರೀಲಂಕಾ 6ಕ್ಕೆ 137 (20 ಓವರ್)
ನಿಸಾಂಕ ಬಿ ಭುವನೇಶ್ವರ್ 0 (1 ಎ), ಮಿಶಾರ ಸಿ ರೋಹಿತ್ ಬಿ ಭುವನೇಶ್ವರ್ 13 (12 ಎ, 4x2), ಲಿಯಾನಗೆ ಸಿ ಸ್ಯಾಮ್ಸನ್ ಬಿ ವೆಂಕಟೇಶ್ 11 (17 ಎ), ಅಸಲಂಕ ಔಟಾಗದೆ 53 (47 ಎ, 4x5), ದಿನೇಶ್ ಸ್ಟಂಪ್ಡ್ ಇಶಾನ್ ಬಿ ರವೀಂದ್ರ 10 (9 ಎ, 6x1), ಶಾನಕ ಸಿ ಭುವನೇಶ್ವರ್ ಬಿ ಚಾಹಲ್ 3 (6 ಎ), ಕರುಣಾರತ್ನೆ ಸಿ ಇಶಾನ್ ಬಿ ವೆಂಕಟೇಶ್ 21 (14 ಎ, 6x2), ದುಷ್ಮಂತ ಔಟಾಗದೆ 24 (14 ಎ, 4x2, 6x1)
ಇತರೆ (ವೈಡ್ 2) 2
ವಿಕೆಟ್ ಪತನ: 1-0 (ಪಾಥುಮ್ ನಿಸಾಂಕ, 0.1), 2-15 (ಕಾಮಿಲ್ ಮಿಶಾರ, 2.6), 3-36 (ಜನಿತ್ ಲಿಯಾನಗೆ, 6.6), 4-51 (ದಿನೇಶ್ ಚಾಂದಿಮಲ್, 9.2), 5-60 (ದಸುನ್ ಶಾನಕ, 10.5), 6-97 (ಚಮಿಕ ಕರುಣಾರತ್ನೆ, 15.4)
ಬೌಲಿಂಗ್: ಭುವನೇಶ್ವರ್ ಕುಮಾರ್ 2–0–9–2, ಜಸ್‌ಪ್ರೀತ್ ಬೂಮ್ರಾ 3–0–19–0, ಹರ್ಷಲ್ ಪಟೇಲ್ 2–0–10–0, ಯಜುವೇಂದ್ರ ಚಾಹಲ್ 3–0–11–1, ವೆಂಕಟೇಶ್ ಅಯ್ಯರ್ 3–0–36–2, ರವೀಂದ್ರ ಜಡೇಜ 4–0–28–1, ದೀಪಕ್ ಹೂಡಾ 3–0–24–0

ಫಲಿತಾಂಶ: ಭಾರತಕ್ಕೆ 62 ರನ್ ಜಯ; ಮುಂದಿನ ಪಂದ್ಯ 26ರಂದು

ಪ್ರೊ ಕಬಡ್ಡಿ: ಪ್ರಶಾಂತ್ ಬಳಗಕ್ಕೆ ನಾಲ್ಕನೇ ಪ್ರಶಸ್ತಿ ಕನಸು; ಡೆಲ್ಲಿಗೆ ಮೊದಲ ಟ್ರೋಫಿ ಮೇಲೆ ಕಣ್ಣು

‘ಎಕ್ಸ್‌ಪ್ರೆಸ್’ ಓಟಕ್ಕೆ ತಡೆಯಾಗುವುದೇ ಪಟ್ನಾ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುರುಕಿನ ರೇಡಿಂಗ್ ಮತ್ತು ಮಿಂಚಿನ ಟ್ಯಾಕ್ಲಿಂಗ್ ಮೂಲಕ ಗಮನ ಸೆಳೆದಿರುವ ತಂಡಗಳೆರಡು ಪ್ರೊ ಕಬಡ್ಡಿ ಲೀಗ್‌ನ ಪ್ರಶಸ್ತಿಗಾಗಿ ಶುಕ್ರವಾರ ಸೆಣಸಲಿವೆ. ಮೊದಲ ಬಾರಿ ಟ್ರೋಫಿಗೆ ಮುತ್ತಿಡುವ ನಿರೀಕ್ಷೆಯೊಂದಿಗೆ ದಬಂಗ್ ಡೆಲ್ಲಿ ಮತ್ತು ನಾಲ್ಕನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಪಟ್ನಾ ಪೈರೇಟ್ಸ್ ಹಣಾಹಣಿ ಕುತೂಹಲ ಕೆರಳಿಸಿದೆ.

ಲೀಗ್ ಹಂತದ ಪಾಯಿಂಟ್ ಪಟ್ಟಿಯಲ್ಲಿ ಪಟ್ನಾ ಅಗ್ರ ಸ್ಥಾನ ಗಳಿಸಿದ್ದು ಎರಡನೇ ಸ್ಥಾನದಲ್ಲಿ ದಬಂಗ್ ಡೆಲ್ಲಿ ಇದೆ. ರೇಡಿಂಗ್‌ನಲ್ಲೂ ಟ್ಯಾಕ್ಲಿಂಗ್‌ನಲ್ಲೂ ಎಂಟನೇ ಆವೃತ್ತಿಯ ಆರಂಭದಿಂದಲೂ ಮಿಂಚಿದ ಆಟಗಾರರು ಎರಡೂ ತಂಡಗಳಲ್ಲಿ ಇದ್ದಾರೆ. ಬುಧವಾರ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಪ್ರಬಲ ಎದುರಾಳಿಗಳನ್ನು ಸುಲಭವಾಗಿ ಮಣಿಸಿರುವುದರಿಂದ ಎರಡೂ ತಂಡಗಳ ನಡುವೆ ಜಿದ್ದಾಜಿದ್ದಿಯ ಹಣಾಹಣಿ ನಡೆಯುವ ನಿರೀಕ್ಷೆ ಇದೆ.

ಪ್ರದೀಪ್ ನರ್ವಾಲ್, ಸುರೇಂದರ್ ಗಿಲ್ ಅವರಂಥ ಬಲಿಷ್ಠ ರೇಡರ್‌ಗಳನ್ನು ಹೊಂದಿರುವ ಯು.ಪಿ ಯೋಧಾವನ್ನು ಸೆಮಿಫೈನಲ್‌ನಲ್ಲಿ ಸುಲಭವಾಗಿ ಮಣಿಸಲು ಸಾಧ್ಯವಾದ್ದರಿಂದ ಪಟ್ನಾ ಪೈರೇಟ್ಸ್ ಭರವಸೆಯಲ್ಲಿದೆ. ಕನ್ನಡಿಗ ಪ್ರಶಾಂತ್ ಕುಮಾರ್ ರೈ ಅವರ ನೇತೃತ್ವದ ತಂಡ ತಂತ್ರ ಹೆಣೆಯುವುದರಲ್ಲೂ ಚಾಣಾಕ್ಷವಾಗಿದೆ.

ನಾಲ್ಕರ ಘಟ್ಟದ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡದ ಪ್ರಬಲ ಪೈಪೋಟಿಯನ್ನು ಸುಲಭವಾಗಿ ಮೀರಿ ನಿಲ್ಲಲು ಸಾಧ್ಯವಾಗಿರುವುದು ಡೆಲ್ಲಿಯ ಭರವಸೆಯನ್ನು ಹೆಚ್ಚಿಸಿದೆ.

ಪಟ್ನಾ ಪೈರೇಟ್ಸ್ ತಂಡ ರೇಡಿಂಗ್‌ನಲ್ಲೂ ಟ್ಯಾಕ್ಲಿಂಗ್‌ನಲ್ಲೂ ಸಮಾನ ಸಾಮರ್ಥ್ಯ ಮೆರೆಯುವ ಆಟಗಾರರನ್ನು ಪಳಗಿಸಿದೆ. ಎಡಬದಿಯ ಕಾರ್ನರ್ ಆಟಗಾರ ಇರಾನ್‌ನ ಮೊಹಮ್ಮದ್‌ರೇಜಾ ಶಡ್ಲೂ ಈ ಆವೃತ್ತಿಯಲ್ಲಿ ಅತಿ ಹೆಚ್ಚು ಟ್ಯಾಕ್ಲಿಂಗ್ ಪಾಯಿಂಟ್‌ಗಳ ಸಾಧನೆ ಮಾಡಿದ್ದಾರೆ. ಕವರ್ ಡಿಫೆಂಡರ್‌ಗಳಾದ ನೀರಜ್ ಕುಮಾರ್ ಮತ್ತು ಸಾಜಿನ್ ಅವರು ಎಂಥ ರೇಡರ್‌ಗಳನ್ನು ಕೂಡ ಬಲೆಗೆ ಬೀಳಿಸಬಲ್ಲರು. ರೇಡಿಂಗ್‌ನಲ್ಲಿ ಪ್ರಶಾಂತ್ ಕುಮಾರ್ ರೈ ಅವರಿಗೆ ಸಚಿನ್, ಗುಮಾನ್ ಸಿಂಗ್ ಮತ್ತು ಮೋನು ಗೋಯತ್ ಅವರ ಅಮೋಘ ಬಲ ಇದೆ.


ಸಚಿನ್ (ಎಡ) ಮತ್ತು ಪ್ರಶಾಂತ್ ಕುಮಾರ್ ರೈ

> ಯಾವುದೇ ಸಂದರ್ಭದಲ್ಲಿ ಪಂದ್ಯಕ್ಕೆ ತಿರುವು ನೀಡಬಲ್ಲ ಸಾಮರ್ಥ್ಯದವರು ಪಟ್ನಾ ತಂಡದಲ್ಲಿದ್ದಾರೆ. ಫೈನಲ್‌ಗಾಗಿ ಸೂಕ್ತ ತಂತ್ರ ಹೆಣೆಯಲಾಗಿದೆ.
> **ಕೃಷನ್ ಹೂಡಾ** ದಬಂಗ್ ಡೆಲ್ಲಿ ಕೋಚ್

> ತಂಡದ ಈ ಬಾರಿಯ ಸಾಧನೆ ಖುಷಿ ತಂದಿದೆ. ಪ್ರತಿಯೊಬ್ಬರೂ ಅವರವರಿಗೆ ವಹಿಸಿದ ಜವಾಬ್ದಾರಿಯನ್ನು ಬದ್ಧತೆಯೊಂದಿಗೆ ನಿರ್ವಹಿಸಿದ್ದಾರೆ.
> **ರಾಮ್ ಮೆಹರ್ ಸಿಂಗ್** ಪಟ್ನಾ ಕೋಚ್


ದಬಂಗ್ ಡೆಲ್ಲಿ ತಂಡದ ನವೀನ್ ಕುಮಾರ್ ಜಂಪಿಂಗ್ ಶೈಲಿ

ನವೀನ್, ಜೀವಕುಮಾರ್ ಮೇಲೆ ಭರವಸೆ

‘ಎಕ್ಸ್‌ಪ್ರೆಸ್’ ಖ್ಯಾತಿಯ ನವೀನ್ ಕುಮಾರ್ ದಬಂಗ್ ಡೆಲ್ಲಿ ತಂಡದ ರೇಡಿಂಗ್‌ನ ಆಧಾರವಾಗಿದ್ದರೆ ಟ್ಯಾಕ್ಲಿಂಗ್ ವಿಭಾಗಕ್ಕೆ ಅನುಭವಿ ಜೀವ ಕುಮಾರ್ ಶಕ್ತಿ ತುಂಬಿದ್ದಾರೆ. ಸಂದೀಪ್ ನರ್ವಾಲ್, ಮಂಜೀತ್ ಚಿಲ್ಲರ್, ನೀರಜ್ ನರ್ವಾಲ್, ಸುಶಾಂತ್ ಸೈಲ್ ಹಾಗೂ ನಿತಿನ್ ಪವಾರ್ ರೇಡಿಂಗ್‌ನಲ್ಲಿ ನವೀನ್‌ಗೆ ಸಹಕಾರ ನೀಡುತ್ತಿದ್ದಾರೆ. ರಕ್ಷಣಾ ವಿಭಾಗದಲ್ಲಿ ಜೋಗಿಂದರ್ ನರ್ವಾಲ್, ಮೋಹಿತ್ ಬೇನ್ಸ್‌ವಾಲ್, ಸುಮಿತ್ ಬೇನ್ಸ್‌ವಾಲ್ ಅವರಿಗೆ ಸಂದೀಪ್ ನರ್ವಾಲ್ ಮತ್ತು ಮಂಜೀತ್ ಚಿಲ್ಲಾರ್ ಅವರ ಅನುಭವದ ನೆರವು ಇದೆ. ಕಳೆದ ಬಾರಿ ಫೈನಲ್‌ನಲ್ಲಿ ಎಡವಿದ ತಂಡ ಈ ಬಾರಿ ಯಶಸ್ಸು ಗಳಿಸುವುದೇ ಎಂಬುದು ಕುತೂಹಲ.

ಅಥ್ಲೆಟಿಕ್ಸ್: ಪ್ರಿಯಾಗೆ ಎರಡನೇ ಚಿನ್ನ

ಭುವನೇಶ್ವರ್ (ಪಿಟಿಐ): ಯುವ ಅಥ್ಲೀಟ್, ಬೆಂಗಳೂರಿನ ಪ್ರಿಯಾ ಮೋಹನ್ ಅವರು ಅಖಿಲ ಭಾರತ ಅಂತರ ವಿವಿ ಮಹಿಳಾ ಅಥ್ಲೆಟಿಕ್ಸ್‌ನಲ್ಲಿ ಎರಡನೇ ಚಿನ್ನದ ಪದಕ ಗೆದ್ದುಕೊಂಡರು.

ಪ್ರಿಯಾ ಮೋಹನ್

ಗುರುವಾರ ಮುಕ್ತಾಯಗೊಂಡ ಕೂಟದ 24 ಸೆಕೆಂಡುಗಳಲ್ಲಿ 200 ಮೀಟರ್ಸ್ ಓಟವನ್ನು ಪೂರ್ತಿಗೊಳಿಸಿ ಮೊದಲಿಗರಾದರು. 18 ವರ್ಷದ ಪ್ರಿಯಾ ಅವರು ಜೈನ್ ವಿವಿಯನ್ನು ಪ್ರತಿನಿಧಿಸುತ್ತಿದ್ದಾರೆ. ಕೆಐಐಟಿ ವಿವಿಯ ಮಧುಮಿತಾ ಬೆಳ್ಳಿ ಗಳಿಸಿದರು. ಬೆಂಗಳೂರು ಕೇಂದ್ರ ನಗರ ವಿವಿಯ ಅರ್ಪಿತಾ 800 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದರು.

51 ಪಾಯಿಂಟ್ ಕಲೆ ಹಾಕಿದ ಮಂಗಳೂರು ವಿವಿ ಚಾಂಪಿಯನ್ ಪಟ್ಟ ಅಲಂಕರಿಸಿತು.

ಬೆಂಗಳೂರು ರೇಸ್

ರಾವಿಶಿಂಗ್ ಫಾರ್ಮ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಜುವೆನೈಲ್ ಮಿಲಿಯನ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ರಾವಿಶಿಂಗ್ ಫಾರ್ಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಲಿಮಿಟೆಡ್ ಎಡಿಷನ್ 3, ಡೊಮಿನಾ 2, ಲೈಫ್‌ಈಸ್‌ಮಿರಾಕಲ್ 6
2ನೇ ರೇಸ್: ಚಿಸಾಕ್ಸ್ 5, ಸಿಲ್ವರಿಟಾ 7, ಡ್ರೀಮ್ ಚೇಸರ್ 10
3ನೇ ರೇಸ್: ಮಿಸ್ಟಿಕ್ ಐ 2, ಡೊನ್ನಾ ಬೆಲ್ಲಾ 1, ಅಮೆಜೊನೈಟ್ 10
4ನೇ ರೇಸ್: ಜ್ಯಾಕ್ ರಿಯಾನ್ 4, ಕರಾಕಸ್ 7, ಟವರಿಂಗ್ ಪ್ರೆಸೆನ್ಸ್ 3
5ನೇ ರೇಸ್: ರೂಲ್ ಆಫ್ ಎಂಗೇಜ್‌ಮೆಂಟ್ 2, ಡಿ ವಿಲ್ಲಿಯರ್ಸ್ 4, ಗ್ರಿಫಿನ್ 1
6ನೇ ರೇಸ್: ರಾವಿಶಿಂಗ್ ಫಾರ್ಮ್ 3, ಪ್ಲೇಸ್ ವೆಂಡೋಮ್ 6, ಡಿಸ್ರಪ್ಟರ್ 1
7ನೇ ರೇಸ್: ಮ್ಯೂರ್ಫೀಲ್ಡ್ 3, ಟ್ಯಾಕ್ಟಿಕಲ್ ಕಮಾಂಡ್ 1, ಲವ್ 7
8ನೇ ರೇಸ್: ಮಿಲ್‌ಬ್ರೂಕ್ 4, ರೆಡ್ ಲೂಸಿಫರ್ 9, ರೈಟ್ಲ ನೋಬಲ್ 6
9ನೇ ರೇಸ್: ಬೆಲ್ಡೋನ 5, ಟಾಪ್ ನ್ಯೂಸ್ 7, ನಿಷ್ ಹೆಂಪ್ 8

ಉತ್ತಮ ಬೆಟ್: ಜ್ಯಾಕ್ ರಿಯಾನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಸಿಂಥೆಟಿಕ್ ಟ್ರ್ಯಾಕ್ ಶೀಘ್ರ ಅಭ್ಯಾಸಕ್ಕೆ ಮುಕ್ತ: ಕ್ರೀಡಾ ಸಚಿವರಿಂದ ಭರವಸೆ

ಕಂಠೀರವ ಕ್ರೀಡಾಂಗಣ ಅಥ್ಲೆಟಿಕ್ಸ್‌ಗೆ ಸೀಮಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಂಠೀರವ ಕ್ರೀಡಾಂಗಣ ಇನ್ನು ಮುಂದೆ ಅಥ್ಲೆಟಿಕ್ಸ್‌ಗೆ ಮಾತ್ರ ಸೀಮಿತ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ ಸ್ಪಷ್ಟಪಡಿಸಿದರು.

ಕ್ರೀಡಾಂಗಣದಲ್ಲಿ ಅಳವಡಿಸಿರುವ ಸಿಂಥೆಟಿಕ್ ಟ್ರ್ಯಾಕ್ ಪರಿಶೀಲಿಸಿದ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

‘ಇದು ಬಹೂಪಯೋಗಿ ಕ್ರೀಡಾಂಗಣವಲ್ಲ. ಆದ್ದರಿಂದ ಅಥ್ಲೆಟಿಕ್ಸ್ ಅಲ್ಲದೆ ಬೇರೆ ಯಾವ ಕ್ರೀಡೆಗೂ ಇಲ್ಲಿ ಅವಕಾಶವಿಲ್ಲ. ಇಲ್ಲಿ ಇನ್ನು ಫುಟ್‌ಬಾಲ್ ಆಡಲು ಬಿಡುವುದಿಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಐಎಸ್‌ಎಲ್ ಪಂದ್ಯಗಳನ್ನು ನಡೆಸಬಾರದು ಎಂದು ಆಗ್ರಹಿಸುತ್ತ ಬಂದಿರುವ ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆಯ ಕಾರ್ಯದರ್ಶಿ ಎ.ರಾಜವೇಲು ‘ಫುಟ್‌ಬಾಲ್‌ಗೆ ಅದರದೇ ಆದ ಕ್ರೀಡಾಂಗಣ ಇರುವುದರಿಂದ ಇಲ್ಲಿ ಇನ್ನು ಮುಂದೆ ಫುಟ್‌ಬಾಲ್ ಟೂರ್ನಿಗಳನ್ನು ಆಡಲು ಬಿಡಬಾರದು’ ಎಂದರು.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಬೆಂಗಳೂರು ಫುಟ್‌ಬಾಲ್ ಕ್ಲಬ್‌ನ ಸಿಇಒ ಮಂದಾರ್ ತಮ್ಹಾನೆ ‘ಅಧಿಕೃತವಾಗಿ ವಿಷಯ ತಿಳಿದಿಲ್ಲ. ಆದ್ದರಿಂದ ಏನೂ ಪ್ರತಿಕ್ರಿಯೆ ನೀಡುವುದಿಲ್ಲ’ ಎಂದರು.

ಸಿಂಥೆಟಿಕ್ ಟ್ರ್ಯಾಕ್ ಅಳವಡಿಸಿರುವ ಕಂಠೀರವ ಕ್ರೀಡಾಂಗಣ –ಪ್ರಜಾವಾಣಿ ಚಿತ್ರ

ಅಥ್ಲೀಟ್ಸ್‌ಗೆ ಮುಕ್ತ

ಸಿಂಥೆಟಿಕ್ ಟ್ರ್ಯಾಕ್ ಶೀಘ್ರದಲ್ಲೇ ಬಳಕೆಗೆ ಮುಕ್ತವಾಗಲಿದೆ ಎಂದು ಸಚಿವರು ತಿಳಿಸಿದರು.

‘ಕಾಮಗಾರಿಗೆ ಒಟ್ಟು ₹ ಐದು ಕೋಟಿ ವೆಚ್ಚವಾಗಿದೆ. ಖೇಲೊ ಇಂಡಿಯಾ ಸೇರಿದಂತೆ ವಿವಿಧ ಕ್ರೀಡಾಕೂಟಗಳು ಇನ್ನು ಇಲ್ಲಿಯೇ ನಡೆಯಲಿವೆ. ಏಪ್ರಿಲ್‌ನಲ್ಲಿ ಉದ್ಘಾಟನೆ ಆಗಲಿದೆ’ ಎಂದರು.

ರಾಜ್ಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ. ಗೋವಿಂದರಾಜ್, ಕ್ರೀಡಾ ಇಲಾಖೆ ಆಯುಕ್ತ ಗೋಪಾಲಕೃಷ್ಣ ಮತ್ತಿತರರು ಈ ಸಂದರ್ಭದಲ್ಲಿ ಇದ್ದರು.

ವ್ಲಾದಿಮಿರ್ ಕ್ಲಿಚ್‌ಕೊ –ರಾಯಿಟರ್ಸ್ ಚಿತ್ರ

ಉಕ್ರೇನ್‌ಗೆ ಕ್ಲಿಚ್‌ಕೊ, ಕ್ಯಾಸ್ಪರೊವ್ ಬೆಂಬಲ

ನವದೆಹಲಿ (ಪಿಟಿಐ): ಮಾಜಿ ವಿಶ್ವ ಚಾಂಪಿಯನ್ ಬಾಕ್ಸರ್ ವ್ಲಾದಿಮಿರ್ ಕ್ಲಿಚ್‌ಕೊ ಮತ್ತು ಚೆಸ್ ಆಟಗಾರ ಗ್ಯಾರಿ ಕ್ಯಾಸ್ಪರೊವ್ ಅವರು ಉಕ್ರೇನ್ ಮೇಲಿನ ರಷ್ಯಾ ಆಕ್ರಮಣವನ್ನು ಖಂಡಿಸಿದ್ದಾರೆ. ಉಕ್ರೇನ್ ಈ ಸಂದಿಗ್ಧ ಪರಿಸ್ಥಿತಿಯನ್ನು ದಿಟ್ಟವಾಗಿ ಎದುರಿಸಲಿದೆ ಎಂದು ಇಬ್ಬರೂ ನುಡಿದಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿರುವ ಮತ್ತು ಹೆವಿವೇಟ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬಾರಿ ಪ್ರಶಸ್ತಿ ಗಳಿಸಿರುವ 45 ವರ್ಷದ ಬಾಕ್ಸರ್ ಕ್ಲಿಚ್‌ಕೊ ‘ಉಕ್ರೇನ್ ಪ್ರಬಲವಾಗಿದ್ದು ರಾಜಧಾನಿ ಕೀವ್ ಒಳಗೊಂಡಂತೆ ಬಲಿಷ್ಠ ನಗರಗಳನ್ನು ಒಳಗೊಂಡಿದೆ. ಇಲ್ಲಿನವರ ಮನೋಬಲವು ಗೆಲುವು ತಂದುಕೊಡಲಿದೆ‘ ಎಂದು ಟ್ವೀಟ್ ಮಾಡಿದ್ದಾರೆ.

2014ರಲ್ಲಿ ರಷ್ಯಾ ತೊರೆದಿರುವ ಕ್ಯಾಸ್ಪರೊವ್ ಈಗ ರಾಜಕಾರಣಿಯಾಗಿದ್ದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮೇಲೆ ಸತತ ವಾಗ್ದಾಳಿ ನಡೆಸುತ್ತಿದ್ದಾರೆ. ‘ವ್ಯವಹಾರದಲ್ಲಿ ಮಾಡಿರುವ ಅಕ್ರಮ ಮತ್ತು ಭ್ರಷ್ಟಾಚಾರದಿಂದ ಗಳಿಸಿರುವ ಹಣದಿಂದ ಪುಟಿನ್ ಯುದ್ಧ ಸಾಮಗ್ರಿಗಳನ್ನು ಸಂಗ್ರಹಿಸಿದ್ದಾರೆ’ ಎಂದು ಟ್ವಿಟರ್ ಮೂಲಕ ಕಿಡಿಕಾರಿದ್ದಾರೆ.

ನ್ಯೂಜಿಲೆಂಡ್ ಎದುರಿನ ಏಕದಿನ ಕ್ರಿಕೆಟ್: ಮಿಥಾಲಿ ರಾಜ್ ಅರ್ಧಶತಕ

ಲಯಕ್ಕೆ ಮರಳಿದ ಸ್ಮೃತಿ: ಭಾರತಕ್ಕೆ ಜಯ

ಕ್ವೀನ್ಸ್‌ಟೌನ್ (ಎಪಿ/ಪಿಟಿಐ): ಲಯಕ್ಕೆ ಮರಳಿದ ತಾರಾ ಆಟಗಾರ್ತಿಯರಾದ ಸ್ಮೃತಿ ಮಂದಾನ ಮತ್ತು ಹರ್ಮನ್‌ಪ್ರೀತ್ ಕೌರ್ ಅವರ ಆಟದಿಂದ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಏಕ ದಿನ ಕ್ರಿಕೆಟ್ ಪಂದ್ಯದಲ್ಲಿ ಜಯ ಗಳಿಸಿತು.

ಜಾನ್ ಡೇವಿಸ್ ಓವಲ್ ಕ್ರೀಡಾಂಗಣದಲ್ಲಿ ನಡೆದ ಸರಣಿಯ ಕೊನೆಯ ಪಂದ್ಯದಲ್ಲಿ ಭಾರತ 6 ವಿಕೆಟ್‌ಗಳಿಂದ ನ್ಯೂಜಿಲೆಂಡ್ ಎದುರು ಜಯಿಸಿತು.

ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಅಮೆಲಿಯಾ ಕೆರ್ (66; 75ಎ, 4X6) ಅವರ ಅರ್ಧಶತಕದ ಬಲದಿಂದ ನ್ಯೂಜಿಲೆಂಡ್ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 251 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 46 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 255 ರನ್ ಗಳಿಸಿ ಗೆದ್ದಿತು. ಕಳೆದ ಕೆಲವು ಪಂದ್ಯಗಳಲ್ಲಿ ಲಯದ ಕೊರತೆ ಅನುಭವಿಸಿದ್ದ ಹರ್ಮನ್‌ಪ್ರೀತ್ ಕೌರ್ (63; 66ಎ, 4X6, 6X1) ಇಲ್ಲಿ ಅಮೋಘ ಬ್ಯಾಟಿಂಗ್ ಮಾಡಿದರು. ನಾಯಕಿ ಮಿಥಾಲಿ ರಾಜ್ (ಔಟಾಗದೆ 57, 66ಎ, 4X6) ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 71 ರನ್ ಗಳಿಸಿದರು. ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (71; 84ಎ, 4X9)ಕೂಡ ಅಮೋಘ ಬ್ಯಾಟಿಂಗ್ ಮಾಡಿದರು. ಅವರ ತಾಳ್ಮೆಯ ಅರ್ಧಶತಕದ ಬಲದಿಂದ ಭಾರತ ತಂಡವು ಆರಂಭದಲ್ಲಿ ಕುಸಿಯುವುದು ತಪ್ಪಿತು. ಈ ಅಡಿಪಾಯದ ಮೇಲೆ ಸಮಾಧಾನಕರ ಜಯ ಅರಳಿತು. ಐದು ಪಂದ್ಯಗಳ ಸರಣಿಯಲ್ಲಿ ಆಸ್ಟ್ರೇಲಿಯಾ 4–1ರಿಂದ ಜಯಿಸಿತು.



ಮಾರ್ಚ್ 26ರಿಂದ ಐಪಿಎಲ್; ಪ್ರೇಕ್ಷಕರಿಗೆ ಅವಕಾಶ

ನವದೆಹಲಿ (ಪಿಟಿಐ): ಈ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯು ಮಾರ್ಚ್ 26ರಿಂದ ಮೇ 29ರವರೆಗೆ ನಡೆಯಲಿದೆ.

ಮುಂಬೈ ಮತ್ತು ಪುಣೆಯ ಕ್ರೀಡಾಂಗಣಗಳಲ್ಲಿ ಟೂರ್ನಿಯ ಪಂದ್ಯಗಳು ನಡೆಯಲಿವೆ. ಕ್ರೀಡಾಂಗಣ ಸಾಮರ್ಥ್ಯದ ಶೇ 40ರಷ್ಟು ಪ್ರೇಕ್ಷಕರಿಗೆ ಪ್ರವೇಶ ನೀಡಲು ನಿರ್ಧರಿಸಲಾಗಿದೆ.

‘ಮುಂದಿನ ತಿಂಗಳು 26ರಿಂದ ಐಪಿಎಲ್ ಆರಂಭವಾಗಲಿದೆ’ ಎಂದು ಗುರುವಾರ ಆಡಳಿತ ಸಮಿತಿಯ ಸಭೆಯ ನಂತರ ಮುಖ್ಯಸ್ಥ ಬ್ರಿಜೇಶ್ ಪಟೇಲ್ ತಿಳಿಸಿದರು.

ಈ ಬಾರಿ ಎರಡು ಹೊಸ ತಂಡಗಳಾದ ಲಖನೌ ಸೂಪರ್‌ಜೈಂಟ್ಸ್ ಮತ್ತು ಗುಜರಾತ್ ಟೈಟನ್ಸ್ ಕಣಕ್ಕಿಳಿಯಲಿವೆ. ಒಟ್ಟು 74 ಪಂದ್ಯಗಳು

ನಡೆಯಲಿವೆ. ಮುಂಬೈನ ವಾಂಖೆಡೆ ಕ್ರೀಡಾಂಗಣ, ಬ್ರೆಬೋರ್ನ್ ಕ್ರೀಡಾಂಗಣ ಮತ್ತು ನವಿಮುಂಬೈನಲ್ಲಿರುವ ಡಿ.ವೈ. ಪಾಟೀಲ ಮೈದಾನ ಮತ್ತು ಪುಣೆಯ ಗಹುಂಜೆ ಕ್ರೀಡಾಂಗಣಗಳಲ್ಲಿ ಪಂದ್ಯಗಳನ್ನು ಆಯೋಜಿಸಲಾಗುತ್ತಿದೆ.

‘ಮಹಾರಾಷ್ಟ್ರ ಸರ್ಕಾರವು ಪ್ರೇಕ್ಷಕರಿಗೆ ಅವಕಾಶ ಕೊಡಲು ಅನುಮತಿ ನೀಡಿದೆ. ಆರಂಭದಲ್ಲಿ ಶೇ 40ರಷ್ಟು ಜನರಿಗೆ ಅವಕಾಶ ನೀಡಲಾಗುವುದು. ಕೋವಿಡ್ ಪರಿಸ್ಥಿತಿಯು ಸಂಪೂರ್ಣ ನಿಯಂತ್ರಣದಲ್ಲಿದ್ದರೆ ಪ್ರೇಕ್ಷಕರ ಸಂಖ್ಯೆ ಹೆಚ್ಚಿಸಲಾಗುವುದು’ ಎಂದು ಮೂಲಗಳಿಂದ ತಿಳಿದು ಬಂದಿದೆ.

ಐಪಿಎಲ್ ಟೂರ್ನಿಯ ಫೈನಲ್ ಪಂದ್ಯವನ್ನು ಅಹಮದಾಬಾದಿನ ಮೊಟೇರಾದಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಆಯೋಜಿಸುವ ಸಾಧ್ಯತೆ ಇದೆ.

ವೈಯಕ್ತಿಕ ಸಮಯಕ್ಕಾಗಿ ನಾಯಕತ್ವ ಬಿಟ್ಟೆ: ಕೊಹ್ಲಿ

ಮುಂಬೈ (ಪಿಟಿಐ): ಕೆಲಸದೊತ್ತಡವನ್ನು ನಿಭಾಯಿಸಲು ಮತ್ತು ವೈಯಕ್ತಿಕವಾಗಿ ಒಂದಷ್ಟು ಸಮಯ ಮೀಸಲಿರಿಸಿಕೊಳ್ಳುವ ಸಲುವಾಗಿ ನಾಯಕತ್ವವನ್ನು ಬಿಟ್ಟುಕೊಡುವ ನಿರ್ಧಾರ ಮಾಡಿದೆ ಎಂದು ಕ್ರಿಕೆಟಿಗ ವಿರಾಟ್ ಕೊಹ್ಲಿ ಹೇಳಿದ್ದಾರೆ

ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕತ್ವವನ್ನು ತೊರೆದಿರುವ ಕುರಿತು ಅವರು ಪ್ರತಿಕ್ರಿಯಿಸಿದ್ದಾರೆ.

‘ಕಾರ್ಯೋತ್ತಡ ಹೆಚ್ಚಿದಾಗಲೂ ಸಹಿಸಿಕೊಂಡು ಇರುವಂತಹ ವ್ಯಕ್ತಿ ನಾನಲ್ಲ. ಅದನ್ನು ನಿಭಾಯಿಸುವ ಸಾಮರ್ಥ್ಯ ಇದ್ದರೂ ಕೂಡ ಚೆನ್ನಾಗಿ ಫಲಿತಾಂಶ ಕೊಡಲು ಸಾಧ್ಯವಾಗುವ ಮಿತಿಯಲ್ಲಿ ಮಾತ್ರ ಕೆಲಸ ಮಾಡುತ್ತೇನೆ. ಕೆಲಸವನ್ನು ಯಾಂತ್ರಿಕವಾಗಿ ಮಾಡುವುದಕ್ಕಿಂತ ಮನಸಾರೆ ಆಸ್ವಾದಿಸುವುದು ಮುಖ್ಯ’ ಎಂದು ವಿರಾಟ್ ಹೇಳಿದರು.

ಹೋದ ವರ್ಷ ಯುಎಇಯಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯ ನಂತರ ಅವರು ಚುಟುಕು ಮಾದರಿ ತಂಡದ ನಾಯಕತ್ವ ಬಿಟ್ಟಿದ್ದರು. ಅದೇ ಹೊತ್ತಿನಲ್ಲಿ ಆರ್‌ಸಿಬಿ ತಂಡದ ನಾಯಕ ಪಟ್ಟವನ್ನೂ ತ್ಯಜಿಸಿದ್ದರು. ಏಕದಿನ ತಂಡದ ನಾಯಕತ್ವದಿಂದ ಅವರನ್ನು ಬಿಸಿಸಿಐ ಕೆಳಗಿಳಿಸಿತ್ತು. ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಸರಣಿಯ ನಂತರ ಟೆಸ್ಟ್ ತಂಡದ ನಾಯಕತ್ವಕ್ಕೂ ಅವರು ವಿದಾಯ ಘೋಷಿಸಿದ್ದರು.

‘ಹೊರಗಿನ ಜನರಿಗೆ ನಮ್ಮ ಪರಿಸ್ಥಿತಿ ಅರ್ಥವಾಗುವುದಿಲ್ಲ. ಆದ್ದರಿಂದ ನಮ್ಮ ಕುರಿತು ನಾವೇ ನಿರ್ಧರಿಸುವುದು ಸೂಕ್ತ. ಜನ ಏನೆನ್ನುತ್ತಾರೆನ್ನುವುದನ್ನು ಯೋಚಿಸಬಾರದು. ನನ್ನ ನಿರ್ಧಾರದ ಕುರಿತು ಹಲವರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಆಘಾತ, ಅಚ್ಚರಿ ಪಡೆಯುವಂತದ್ದೇನೂ ಇಲ್ಲ. ನನಗಾಗಿ ಸ್ವಲ್ಪ ಸಮಯ ಬೇಕಿತ್ತು ಅಷ್ಟೇ’ ಎಂದರು.

ಪಂಜಾಬ್ ಕಿಂಗ್ಸ್‌ಗೆ ಮಯಂಕ್ ನಾಯಕ?

ನವದೆಹಲಿ (ಪಿಟಿಐ): ಕರ್ನಾಟಕದ ಮಯಂಕ್ ಅಗರವಾಲ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಪಂಜಾಬ್ ಕಿಂಗ್ಸ್ ತಂಡದ ನಾಯಕರಾಗುವುದು ಬಹುತೇಕ ಖಚಿತವಾಗಿದೆ. ಭಾರತ ಕ್ರಿಕೆಟ್ ತಂಡದ ಆಟಗಾರ ಮಯಂಕ್ ಕಳೆದ ಕೆಲವು ವರ್ಷಗಳಿಂದ ಕಿಂಗ್ಸ್‌ನಲ್ಲಿದ್ದಾರೆ. ಕಳೆದೆರಡು ಆವೃತ್ತಿಗಳಲ್ಲಿ ಅವರು 400ಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿದ್ದರು. 2011ರಲ್ಲಿ ಐಪಿಎಲ್‌ನಲ್ಲಿ ಪದಾರ್ಪಣೆ ಮಾಡಿದ್ದ ಮಯಂಕ್ ಇಲ್ಲಿಯವರೆಗೆ 100 ಪಂದ್ಯಗಳನ್ನು ಆಡಿದ್ದಾರೆ.

ಮಯಂಕ್ ಅಗರವಾಲ್

ಈಚೆಗೆ ಮೆಗಾ ಹರಾಜು ಸಂದರ್ಭದಲ್ಲಿ ಪಂಜಾಬ್ ತಂಡವು ಕೆ.ಎಲ್. ರಾಹುಲ್ ಅವರನ್ನು ಬಿಡುಗಡೆ ಮಾಡಿತ್ತು. ಆದರೆ, ಮಯಂಕ್ ಅವರನ್ನು ಉಳಿಸಿಕೊಂಡಿತ್ತು. ರಾಹುಲ್ ಈ ಬಾರಿ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕರಾಗಿದ್ದಾರೆ.

‘ಮಯಂಕ್ ಅಗರವಾಲ್ ನಾಯಕತ್ವ ವಹಿಸುವುದು ಬಹುತೇಕ ಖಚಿತ. ಈ ವಾರಾಂತ್ಯದಲ್ಲಿ ಅಧಿಕೃತ ಘೋಷಣೆಯಾಗುವ ಸಾಧ್ಯತೆ ಇದೆ’ ಎಂದು ಐಪಿಎಲ್ ಮೂಲಗಳು ತಿಳಿಸಿವೆ.

ಈಚೆಗೆ ನಡೆದ ಹರಾಜಿನಲ್ಲಿ ತಂಡವು ಅನುಭವಿ ಆಟಗಾರರಾದ ಶಿಖರ್ ಧವನ್, ಜಾನಿ ಬೆಸ್ಟೊ, ಲಿಯಾಮ್ ಲಿವಿಂಗ್‌ಸ್ಟೋನ್, ಕಗಿಸೊ ರಬಾಡ, ತಮಿಳುನಾಡಿನ ಬ್ಯಾಟರ್ ಶಾರೂಕ್ ಖಾನ್ ಮತ್ತು ಎಡಗೈ ಸ್ಪಿನ್ನರ್ ಹರಪ್ರೀತ್ ಬ್ರಾರ್ ಅವರನ್ನು ಖರೀದಿಸಿತ್ತು. ಧವನ್ ನಾಯಕರಾಗುವ ಕುರಿತು ಮಾತುಗಳು ಕೇಳಿಬಂದಿದ್ದವು. ಆದರೆ, ತಂಡದ ಆಡಳಿತವು ಮಯಂಕ್ ಅವರನ್ನು ನೇಮಕ ಮಾಡುವತ್ತ ಒಲವು ಹೊಂದಿದೆ ಎನ್ನಲಾಗಿದೆ.

ವಾಲಿಬಾಲ್: ಸೆಮಿಫೈನಲ್ ಪಂದ್ಯ ಇಂದು

ಹೈದರಾಬಾದ್: ಕೋಲ್ಕತ್ತ ಥಂಡರ್ ಬೋಲ್ಟ್ಸ್ ಹಾಗೂ ಕ್ಯಾಲಿಕಟ್ ಹೀರೋಸ್ ತಂಡಗಳು ಪ್ರೈಮ್ ವಾಲಿಬಾಲ್ ಲೀಗ್‌ನ ಸೆಮಿಫೈನಲ್‌ನಲ್ಲಿ ಶುಕ್ರವಾರ ಮುಖಾಮುಖಿಯಾಗಲಿವೆ.

ಆರು ಪಂದ್ಯಗಳನ್ನು ಆಡಿರುವ ಥಂಡರ್‌ಬೋಲ್ಟ್ಸ್ ಎಂಟು ಪಾಯಿಂಟ್ ಗಳಿಸಿದ್ದು ಹೀರೋಸ್ ಆರು ಪಂದ್ಯಗಳಿಂದ ಏಳು ಪಾಯಿಂಟ್ ಕಲೆ ಹಾಕಿದೆ. ಇವೆರಡು ತಂಡಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿವೆ.